ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ



ಶ್ರೀಮಾತೆ : ದಕ್ಷಿಣೇಶ್ವರದಲ್ಲಿ ನಾನು ಕಂಡಂತೆ

₹ 14

ಡಿಸೆಂಬರ್ 2014

Orchid Travel & Tours

Book early
Get Discount

98, 1st Floor, D.V.G. Road, Basavanagudi, Bangalore - 560 004.

Tel : 080-26670646, 26621983 **www.orchidtours.net**

2015ರ ಹೊಸ ವರ್ಷದಲ್ಲಿ ವಿದೇಶಿ ಪ್ರವಾಸಗಳು



ದುಬೈ ಶಾಪಿಂಗ್ ಫೆಸ್ಟಿವಲ್

5 ದಿನಗಳ ದುಬೈ, ಅಬುದಾಭಿ, ಶಾರ್ಜಾ ಪ್ರವಾಸ

ಬೆಂಗಳೂರು-ದುಬೈ-ಬೆಂಗಳೂರು ನೇರ ವಿಮಾನ

ಹೊರಡುವ ತಿಂಗಳು : ಜನವರಿ 22, 23

ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕಿಂಗ್‌ಗೆ ಸಂಪರ್ಕಿಸಿ
9900080799



7 ದಿನಗಳ ಸಿಂಗಾಪುರ - ಮಲೇಶಿಯ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್, ಬರ್ಡ್‌ಪಾರ್ಕ್, ಸಾಂಗ್ ಆಫ್ ಸೀ

ಮಲೇಶಿಯ : ಕೌಲಲೊಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಜುಹೊರ್‌ಬರ್ ಸಿಟಿ ಟೂರ್

ಹೊರಡುವ ತಿಂಗಳು : ಜನವರಿ 21, ಫೆಬ್ರವರಿ 25

ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕಿಂಗ್‌ಗೆ ಸಂಪರ್ಕಿಸಿ
9900080796



6 ದಿನಗಳ ಶ್ರೀಲಂಕಾ ಪ್ರವಾಸ

ರಾಮಾಯಣ ಕಾಲದ ಸ್ಥಳ ವೀಕ್ಷಣೆ

ಕೊಲೊಂಬೊ, ನೆಗೊಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ, ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು

ಹೊರಡುವ ತಿಂಗಳು : ಜನವರಿ 19, ಫೆಬ್ರವರಿ 11

ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕಿಂಗ್‌ಗೆ ಸಂಪರ್ಕಿಸಿ
9900080795



8 ದಿನಗಳ ಕಾಂಬೋಡಿಯಾ - ಥೈಲ್ಯಾಂಡ್ ಪ್ರವಾಸ

ಕಾಂಬೋಡಿಯಾ - ಸಿಯಾಮ್‌ರಿಪ್, ಅಂಕೊರ್‌ವಾಟ್, ಟೋನ್ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು,
ಥೈಲ್ಯಾಂಡ್ - ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ವಾಕರ್ ಸ್ಟ್ರೀಟ್

ಹೊರಡುವ ತಿಂಗಳು : ಜನವರಿ 25, ಫೆಬ್ರವರಿ 22

ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕಿಂಗ್‌ಗೆ ಸಂಪರ್ಕಿಸಿ
9900080792



15 ದಿನಗಳ ಗ್ರ್ಯಾಂಡ್ ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್ ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

ಹೊರಡುವ ತಿಂಗಳು : ಏಪ್ರಿಲ್, ಮೇ

ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕಿಂಗ್‌ಗೆ ಸಂಪರ್ಕಿಸಿ
9900080794

ಪ್ರವಾಸದ ವಿಶೇಷತೆಗಳು

ಬೆಂಗಳೂರಿನಿಂದ ಹೊರಟು ಬೆಂಗಳೂರು ತಲುಪುವವರೆಗೆ, ಕನ್ನಡ ಮತ್ತು ಇತರೇ ಭಾಷೆ ಮಾತನಾಡಬಲ್ಲ, ಪ್ರವಾಸಿ ಮಾರ್ಗದರ್ಶಕರು ಜೊತೆಯಲ್ಲಿ ಪ್ರಯಾಣಿಸುತ್ತಾರೆ. ವಿದೇಶದಲ್ಲಿ ಭಾರತೀಯ ಊಟೋಪಚಾರ ವ್ಯವಸ್ಥೆ ಇರುತ್ತದೆ.


ಡಿಸೆಂಬರ್-2014

ಸಂಪುಟ 15 ಸಂಚಿಕೆ 12

ವಿವೇಕಪ್ರಭ
















ವ್ಯವಸ್ಥಾಪಕ ಸಂಪಾದಕರು

ಸ್ವಾಮಿ ಮುಕ್ತಿದಾನಂದ

ಸಂಪಾದಕರು

ಸ್ವಾಮಿ ಜ್ಞಾನಯೋಗಾನಂದ

ನೆರವು:

ಆರ್. ಎಸ್. ಪೂರ್ಣಾನಂದ

ಎನ್. ಎಸ್. ಶಾರದಾಪ್ರಸಾದ್

ಡಾ. ಕೆ. ಎಲ್. ಪ್ರಸನ್ನಾಕ್ಷಿ

ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ

ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ

ಮಯೂರ್ ಗ್ರಾಫಿಕ್ಸ್, ಬೆಂಗಳೂರು

E-mail:
vivekaprabha@hotmail.com
kannada.vivekaprabha@gmail.com
Website: vivekaprabha.net
ಫೋನ್ : 9481533505

ಮುಖಪುಟ:
ನಹಬತ್,
ದಕ್ಷಿಣೇಶ್ವರ ಮಂದಿರ, ಕೊಲ್ಕತ್ತ

ಈ ಪತ್ರಿಕೆಯ ಧ್ಯೇಯ

ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.
– ಸ್ವಾಮಿ ವಿವೇಕಾನಂದ

ಚಂದಾ ವಿವರ : ಬಿಡಿ ಪ್ರತಿ: ₹14; ವಾರ್ಷಿಕ: ₹140; ಮೂರು ವರ್ಷ: ₹ 375; ಆಜೀವ (25 ವರ್ಷ): ₹ 3,000; ಪೋಷಕ ಸಹಾಯಧನ: ₹ 5,000 ಅಥವಾ ಹೆಚ್ಚು. ವಿದೇಶಗಳಿಗೆ: (ಏರ್‌ಮೇಲ್) ವಾರ್ಷಿಕ: $20; ಮೂರು ವರ್ಷ: $60; ಆಜೀವ (25 ವರ್ಷ): $300; ಪೋಷಕ ಸಹಾಯಧನ: $600 ಅಥವಾ ಹೆಚ್ಚು.

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ ೨೦೧೫

‘ನಾಮಮಹಿಮೆ’

2015ರ ಜನವರಿ ಸಂಚಿಕೆಯು **‘ನಾಮಮಹಿಮೆ’** ಎಂಬ ವಿಷಯವನ್ನು ಕುರಿತ ವಿಶೇಷ ಸಂಚಿಕೆಯಾಗಿ ಹೊರಬರಲಿದೆ. ಆಧ್ಯಾತ್ಮಿಕ ಜೀವನದಲ್ಲಿ ಭಗವಂತನ ನಾಮಕ್ಕೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಅವ್ಯಕ್ತವಾದ, ಮನಸ್ಸು-ಬುದ್ಧಿಗಳಿಗೆ ಎಟುಕದ ಭಗವಂತನ ಇರುವಿಕೆಯನ್ನು ಅನುಭವಕ್ಕೆ ತಂದುಕೊಳ್ಳಲು ಅವನ ನಾಮವೇ ಅತ್ಯುತ್ತಮವಾದ ಸಾಧನ; ಅವನ ನಾಮದ ಮಹಿಮೆ ಅಪಾರ. ಭಗವಂತನ ನಾಮದ ಉಚ್ಚಾರಣೆ, ಜಪಸಾಧನೆ, ಮಂತ್ರಜಪ ಇತ್ಯಾದಿ ಆಚರಣೆಗಳು ಎಲ್ಲ ಧರ್ಮಗಳಲ್ಲಿ, ಎಲ್ಲ ಆಧ್ಯಾತ್ಮಿಕ ಪರಂಪರೆಗಳಲ್ಲಿ ಕಂಡುಬರುತ್ತವೆ. ಈ ವಿಷಯಕ್ಕೆ ಸಂಬಂಧಿಸಿದ ವೈವಿಧ್ಯಮಯವಾದ ಲೇಖನಗಳು, ಹಲವು ಕಥೆ-ದೃಷ್ಟಾಂತ-ನೈಜ ಘಟನೆಗಳನ್ನೊಳಗೊಂಡ ಬರಹಗಳು, ಶಾಸ್ತ್ರಗ್ರಂಥಗಳು ಮತ್ತು ಹಲವು ಮಹಾಪುರುಷರು ನಾಮಮಹಿಮೆಯನ್ನು ಕುರಿತು ಹೇಳಿದ ವಿಚಾರಗಳು ಇಲ್ಲಿವೆ. ಆಧ್ಯಾತ್ಮಿಕ ಸಾಧಕರಿಗೆ ಅತ್ಯಮೂಲ್ಯವಾದ ಮಾಹಿತಿಗಳನ್ನು ಒದಗಿಸುವ ಒಂದು ಸಂಗ್ರಹಯೋಗ್ಯ ಕೈಪಿಡಿಯಾಗಿದೆ ಈ ಸಂಚಿಕೆ.

ಈ ಅಪೂರ್ವ ಸಂಚಿಕೆಯನ್ನು ನಮ್ಮ ಚಂದಾದಾರರಿಗೆ ಉಚಿತವಾಗಿಯೇ ಕಳುಹಿಸಿಕೊಡಲಾಗುವುದು. 10ಕ್ಕಿಂತ ಹೆಚ್ಚಿನ ಪ್ರತಿಗಳನ್ನು ಕೊಂಡುಕೊಳ್ಳಬಯಸುವವರಿಗೆ ಶೇ. 15 ರಿಯಾಯಿತಿ ನೀಡಲಾಗುವುದು.

ಬೆಲೆ : ರೂ. 75/-   ಪುಟಗಳು ಸುಮಾರು 142

ಹೆಚ್ಚಿನ ಪ್ರತಿಗಳನ್ನು ಕಾದಿರಿಸಲು ಇಂದೇ ಸಂಪರ್ಕಿಸಿ :

‘ವಿವೇಕಪ್ರಭ ವಿಭಾಗ’, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು 570 020

Email: **kannada.vivekaprabha@gmail.com; vivekaprabha@hotmail.com**

ಫೋನ್ : 9481533505



ಕೋಣೆಗೆ ದೀಪವನ್ನು ತಂದೊಡನೆಯೆ ಶತಮಾನಗಳಿಂದ ಇದ್ದ ಕತ್ತಲೆ ಪಲಾಯನ ಮಾಡುವುದು. ಹಲವು ಜನ್ಮಾಂತರಗಳಿಂದ ಸಂಚಿತವಾದ ಪಾಪವೆಲ್ಲ ಒಮ್ಮೆ ಅವನ ಕರುಣಾಕಟಾಕ್ಷದಿಂದ ಮಾಯವಾಗುವುದು.

– ಶ್ರೀರಾಮಕೃಷ್ಣ



ಭಗವಂತ ನಮ್ಮೆಲ್ಲರ ‘‘ಸರ್ವಸ್ವ.’’ ಇದು ಶಾಶ್ವತ ಸಂಬಂಧ. ಭಗವಂತನ ಬಗೆಗೆ ನಮಗಿರುವ ಭಾವನೆಯ ತೀವ್ರತೆಗನುಗುಣವಾಗಿ ನಾವು ಅವನನ್ನು ಸಾಕ್ಷಾತ್ಕರಿಸುತ್ತೇವೆ, ಹೆದರಬೇಡ. ನಿನ್ನನ್ನು ಸದಾ ಒಬ್ಬರು ರಕ್ಷಿಸುತ್ತಿದ್ದಾರೆ ಎಂದು ಯಾವಾಗಲೂ ನೆನೆ.

– ಶ್ರೀಶಾರದಾದೇವಿ



ಭಗವಂತನ ಮತ್ತು ಅವನ ಪರಮಾಪ್ತ ಭಕ್ತರ ಕೃಪೆಯನ್ನು ಪಡೆಯಿರಿ. ಅವನನ್ನು ಪಡೆಯುವುದಕ್ಕೆ ಇವೆರಡೇ ದಾರಿ. ಪ್ರಪಂಚದಲ್ಲಿ ಇಂತಹ ಭಕ್ತರ ಸಂಗ ಬಹಳ ದುರ್ಲಭ. ಐದು ನಿಮಿಷದ ಅವರ ಸಹವಾಸದಿಂದ ಇಡೀ ಜೀವನವೇ ಬದಲಾಗುವುದು.

– ಸ್ವಾಮಿ ವಿವೇಕಾನಂದ

ಶ್ರೀಶಾರದಾ ಧ್ಯಾನ



ಧ್ಯಾಯೇತ್ ಹೃದಂಬುಜೇ ದೇವೀಂ ತರುಣಾರುಣವಿಗ್ರಹಾಮ್ ।
ವರಾಭಯಕರಾಂ ಶಾಂತಾಂ ಸ್ಮಿತೋತ್ಫುಲ್ಲಮುಖಾಂಬುಜಾಮ್॥

ಎಳೆಬಿಸಿಲಿನ ಅರುಣವರ್ಣದ ಶರೀರದಿಂದ ಶೋಭಿಸುತ್ತಿರುವ, ವರ ಹಾಗೂ ಅಭಯವನ್ನು ನೀಡುವ ಹಸ್ತಗಳಿಂದ ಕೂಡಿದ, ಶಾಂತಳಾದ, ಮಂದಹಾಸದಿಂದ ಅರಳಿದ ಮುಖಕಮಲವನ್ನು ಹೊಂದಿದ ಜಗನ್ಮಾತೆ ಶ್ರೀಶಾರದಾದೇವಿಯನ್ನು ಹೃದಯಕಮಲದಲ್ಲಿ ಧ್ಯಾನಿಸಬೇಕು.

ಸ್ಥಲಪದ್ಮಪ್ರತೀಕಾಶಪಾದಾಂಭೋಜಸುಶೋಭನಾಮ್ ।
ಶುಕ್ಲಾಂಬರಧರಾಂ ಧೀರಾಂ ಲಜ್ಜಾಪಟವಿಭೂಷಿತಾಮ್॥

ನೆಲದಾವರೆಯಂತಿರುವ ಪಾದಕಮಲಗಳಿಂದ ಶೋಭಿಸುತ್ತಿರುವ, ಬಿಳಿಯ ವಸ್ತ್ರವನ್ನು ಧರಿಸಿರುವ, ಧೀರಳಾದ, ಲಜ್ಜೆಯೆಂಬ ಅವಗುಂಠನದಿಂದ ವಿಭೂಷಿತಳಾದ ಜಗನ್ಮಾತೆ ಶ್ರೀಶಾರದಾದೇವಿಯನ್ನು ಹೃದಯಕಮಲದಲ್ಲಿ ಧ್ಯಾನಿಸಬೇಕು.

ಪ್ರಸನ್ನಾಂ ಧರ್ಮಕಾಮಾರ್ಥಮೋಕ್ಷದಾಂ ವಿಶ್ವಮಂಗಲಾಮ್ ।
ಸ್ವನಾಥವಾಮಭಾಗಸ್ಥಾಂ ಭಕ್ತಾನುಗ್ರಹಕಾರಿಣೀಮ್ ॥

ಸದಾ ಪ್ರಸನ್ನಳಾಗಿರುವವಳೂ, ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ನೀಡುವವಳೂ, ವಿಶ್ವಕ್ಕೆ ಮಂಗಳವನ್ನು ಉಂಟುಮಾಡುವವಳೂ ಆಗಿರುವ, ತನ್ನ ಪತಿಯಾದ ಶ್ರೀರಾಮಕೃಷ್ಣರ ಎಡಭಾಗದಲ್ಲಿಯೇ ಯಾವಾಗಲೂ ನೆಲೆಸಿರುವ, ಭಕ್ತರನ್ನು ಸದಾ ಅನುಗ್ರಹಿಸುವ ಜಗನ್ಮಾತೆ ಶ್ರೀಶಾರದಾದೇವಿಯನ್ನು ಹೃದಯಕಮಲದಲ್ಲಿ ಧ್ಯಾನಿಸಬೇಕು.

ಶ್ರೀಮಾತೆಯವರ ಉಪದೇಶಗಳು

❈ ಜೀವನದಲ್ಲಿ ಅನೇಕ ಹೊಡೆತಗಳನ್ನು ಅನುಭವಿಸಿದ ಬಳಿಕ ಹಲವರು ಭಗವಂತನ ನಾಮವನ್ನು ಸ್ವೀಕರಿಸುತ್ತಾರೆ. ಯಾರು ಬಾಲ್ಯದಿಂದಲೇ ಭಗವಂತನ ಪಾದಗಳಲ್ಲಿ ತಮ್ಮ ಮನಸ್ಸನ್ನು ಅರ್ಪಿಸುವರೋ ಅವರೇ ಧನ್ಯರು.

❈ ಈ ಮಾನವದೇಹ ಲಭಿಸಿದ್ದರಿಂದ ನೀನು ಅದೃಷ್ಟಶಾಲಿ. ಎಷ್ಟು ಸಾಧ್ಯವೋ ಅಷ್ಟು ದೇವರಿಗೆ ಪ್ರಾರ್ಥನೆ ಸಲ್ಲಿಸು. ನೀನು ಕಠಿಣಶ್ರಮ ವಹಿಸಿ ಕೆಲಸ ಮಾಡಬೇಕು. ಶ್ರಮವಿಲ್ಲದೆ ಏನನ್ನೂ ಪಡೆಯಲಾಗದು. ಪ್ರಾಪಂಚಿಕ ಕೆಲಸಗಳ ನಡುವೆ ಕೂಡ ಪ್ರತಿನಿತ್ಯ ಪ್ರಾರ್ಥನೆ, ಆಧ್ಯಾತ್ಮಿಕ ಸಾಧನೆಗಳಿಗಾಗಿ ಸ್ವಲ್ಪ ಹೊತ್ತನ್ನು ಮೀಸಲಿಡಬೇಕು.

❈ ಶ್ರದ್ಧೆಯೆನ್ನುವುದು ಅಷ್ಟು ಹಗುರವಾದ ಸಂಗತಿಯೆ? ಶ್ರದ್ಧೆಯೆಂಬುದು ಕೊನೆಯ ಮಾತು. ಶ್ರದ್ಧೆಯಿದ್ದರೆ ನಿಜವಾಗಿಯೂ ಗುರಿ ತಲುಪಿದಂತೆಯೇ.

❈ ಭೂಮಿತಾಯಿಯಂತೆ ಸಹನೆಯಿರಬೇಕು. ಅವಳಿಗೆ ಎಷ್ಟೊಂದು ಅನ್ಯಾಯ ಮಾಡುತ್ತಾರೆ! ಆದರೂ ಅವಳು ಅದನ್ನೆಲ್ಲ ಮೌನವಾಗಿ ಸಹಿಸುತ್ತಾಳೆ. ಮನುಷ್ಯರೂ ಹಾಗಿರಬೇಕು.

❈ ಭಗವಂತನೇ ಎಲ್ಲವನ್ನೂ ಮಾಡುತ್ತಿರುವವನು ಎಂಬುದು ನಿಜ. ಆದರೆ ಕೆಲವರು ಮಾತ್ರ ಇದನ್ನು ನಿಜವಾಗಿ ಅರಿತುಕೊಳ್ಳುತ್ತಾರೆ. ಗರ್ವ ತಲೆಗೇರಿದವರು ತಾವೇ ಎಲ್ಲವನ್ನೂ ಮಾಡುತ್ತೇವೆ ಎಂದು ಭಾವಿಸುತ್ತಾರೆ; ಅವರು ಭಗವಂತನನ್ನು ಆಶ್ರಯಿಸುವುದಿಲ್ಲ. ಭಗವಂತ ಯಾರು ತನ್ನನ್ನು ಆಶ್ರಯಿಸುತ್ತಾರೋ ಅವರನ್ನು ಎಲ್ಲ ಅಪಾಯಗಳಿಂದಲೂ ರಕ್ಷಿಸುತ್ತಾನೆ.

❈ ಭಯಪಡಬೇಡ. ನಾನು ಹೇಳುತ್ತೇನೆ, ಕಲಿಯುಗದಲ್ಲಿ ಮಾನಸಿಕ ಪಾಪ ಪಾಪವಲ್ಲ. ನಿನ್ನ ಮನಸ್ಸನ್ನು ಎಲ್ಲ ಚಿಂತನೆಗಳಿಂದ ಮುಕ್ತಗೊಳಿಸು. ಭಯಪಡಬೇಕಾದ ಅಗತ್ಯವಿಲ್ಲ.

❈ ಪ್ರತಿಯೊಂದೂ ಭಗವಂತನ ಇಚ್ಛೆಯ ಮೇರೆಗೆ ನಡೆಯುತ್ತದೆ ಎಂಬುದೇನೋ ನಿಜ. ಆದರೂ ಮನುಷ್ಯನು ಪ್ರಯತ್ನಪಡಬೇಕು. ಏಕೆಂದರೆ ಭಗವಂತ ಮನುಷ್ಯನ ಪ್ರಯತ್ನದ ಮೂಲಕ ವ್ಯಕ್ತವಾಗುವನು. ಯಾವ ಕಾರಣಕ್ಕೂ ನಿನ್ನ ಆಧ್ಯಾತ್ಮಿಕ ಸಾಧನೆಗಳನ್ನು ಬಿಡಬೇಡ.

ವಿವೇಕಪ್ರಭ

ಪರಿಪೂರ್ಣ ಜೀವನದ ಪರಮಾಪ್ತ ಪತ್ರಿಕೆ

ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ ಕಾರ್ಯಾಲಯ, ಯಾದವಗಿರಿ, ಮೈಸೂರು 570 020

ಚಂದಾ ಅರ್ಜಿ

ಮಾನ್ಯರೇ, (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

☐ ನನ್ನನ್ನು / ಈ ಕೆಳಕಂಡ ಹೆಸರಿನವರನ್ನು 'ವಿವೇಕಪ್ರಭ' ಪತ್ರಿಕೆಯ ಚಂದಾದಾರರನ್ನಾಗಿ/ ಪೋಷಕರನ್ನಾಗಿ ಮಾಡಬೇಕಾಗಿ ವಿನಂತಿ

☐ ನನ್ನ/ ಕೆಳಕಂಡ ಹೆಸರಿನವರ ಚಂದಾವನ್ನು ನವೀಕರಿಸಬೇಕಾಗಿ ವಿನಂತಿ. ಈಗಿನ ಚಂದಾಸಂಖ್ಯೆ.........................

ನನ್ನ ವಿಳಾಸ

ನನ್ನ ಹೆಸರು...

ವಿಳಾಸ..

....

....ಪಿನ್.............................

ಪತ್ರಿಕೆ ಪಡೆಯುವವರ ವಿಳಾಸ

ಹೆಸರು...

ವಿಳಾಸ..

....

....ಪಿನ್.............................

ಚಂದಾ ವಿವರ: (ನಿಮಗೆ ಸಂಬಂಧಿಸಿದ್ದನ್ನು ✓ ಮಾಡಿ)

1 ವರ್ಷದ ಚಂದಾ	3 ವರ್ಷದ ಚಂದಾ	ಆಜೀವ ಚಂದಾ	ಪೋಷಕರ ಸಹಾಯಧನ
₹ 140	₹ 375	₹ 3000	₹ 5000

ಹಣವನ್ನು ಮನಿ ಆರ್ಡರ್ / ಡ್ರಾಫ್ಟ್ (ಶ್ರೀರಾಮಕೃಷ್ಣ ಆಶ್ರಮ, ವಿವೇಕಪ್ರಭ A/c ಹೆಸರಿನಲ್ಲಿ) ಮೂಲಕ ಕಳುಹಿಸುತ್ತಿದ್ದೇನೆ.

ವಿವರ...

1. ಹೊರ ಊರಿನ ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.
2. ವಿದೇಶಗಳಿಗೆ ಅನ್ವಯವಾಗುವ ಚಂದಾ ವಿವರಗಳಿಗೆ ಹಾಗೂ ಇತರ ವಿವರಗಳಿಗಾಗಿ ನಮಗೆ ಬರೆಯಿರಿ.

ಸಹಿ

ಓದುಗರ ವೇದಿಕೆ

ಪೂಜ್ಯರೆ,

೨೦೧೪ ಸೆಪ್ಟಂಬರ್ ತಿಂಗಳ 'ವಿವೇಕಪ್ರಭ' ಸಂಪಾದಕೀಯ ಓದಿ ಕೇವಲ ಸಂತೋಷವಲ್ಲದೆ, ಅನೇಕ ದಿನಗಳಿಂದ ಸಮಸ್ಯೆಗಳಾಗಿಯೇ ಉಳಿದಿದ್ದ ಪ್ರಶ್ನೆಗಳಿಗೆ ಉತ್ತರ ದೊರೆಯಿತು ಎಂಬ ಭಾವದಿಂದ ತುಂಬಿಕೊಂಡಿದ್ದೇನೆ. ಪರಿಪೂರ್ಣತೆಯನ್ನು ಕುರಿತು ಅನೇಕ ಆಯಾಮಗಳನ್ನು ಉಲ್ಲೇಖಿಸಿದ್ದೀರಿ, ಆ ಎಲ್ಲಾ ಆಯಾಮಗಳು, ಸಾಧಕನ ಮನಸ್ಸಿನ ತಿಳುವಳಿಕೆಗೆ ಸ್ಪಂದಿಸಿ, ದೃಢೀಕರಿಸುವಂತೆ ಇವೆ. ಶಾಂತಿಮಂತ್ರದಂತೆ ಪೂರ್ಣವಸ್ತುವಿನ ಒಂದು ಅಂಶವಾದ ನನಗೆ ಪೂರ್ಣತೆ ಲಭ್ಯವಾಗುವುದು ಎಂಬ ದೃಢ ವಿಶ್ವಾಸದೊಂದಿಗೆ ತ್ರಿಕಾಲ ಪ್ರಣಾಮಗಳನ್ನು ಅರ್ಪಿಸುತ್ತಿದ್ದೇನೆ.

ಕೆ. ಕೊಟ್ರಪ್ಪ, ಮುಧೋಳ

ಅಕ್ಟೋಬರ್ ತಿಂಗಳ 'ವಿವೇಕಪ್ರಭ' ದಲ್ಲಿ ಪ್ರಕಟವಾದ '**ಸ್ವಾಮಿ ಅಖಂಡಾನಂದ ಸ್ಮೃತಿ ಸಂಚಯ**'ದಲ್ಲಿ ಒಂದು ತಪ್ಪಾಗಿದೆ. ೧೮೩೫ ರಲ್ಲಿ ಸ್ವಾಮಿ ವಿವೇಕಾನಂದರ ಜನ್ಮತಿಥಿಯ ಮಾರನೆಯ ದಿನ ಎಂದು ಹೇಳಿದೆ. ಆಗ ಸ್ವಾಮೀಜಿ ಇನ್ನೂ ಜನಿಸಿರಲಿಲ್ಲ. ಅದು ೧೯೩೫ ಎಂದಾಗಬೇಕಿತ್ತಲ್ಲವೆ?

ಒಬ್ಬ ಓದುಗರು, ತುಮಕೂರು(ದೂರವಾಣಿ ಮೂಲಕ)

(ಹೌದು, ತಪ್ಪಾಗಿದೆ. ಅದು ೧೯೩೫ ಎಂದೇ ಆಗಬೇಕು. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. -ಸಂ)

ಮಾನ್ಯರೆ,

'ವಿವೇಕಪ್ರಭ' ಪತ್ರಿಕೆಯ ಬರಹಗಳು ಚೆನ್ನಾಗಿವೆ. ಆದರೆ ಭಾಷೆ ಜನಸಾಮಾನ್ಯರಿಗೆ ಅರ್ಥವಾಗುವಂತಿಲ್ಲ. ಭಾಷೆಯನ್ನು ತುಸು ಸರಳವಾಗಿಸಬಾರದೆ? ಧರ್ಮ ವಿಚಾರಗಳು ಬಹುಮಂದಿಗೆ ತಲುಪುವಂತೆ ಮಾಡಲು ಅದು ಅಗತ್ಯವಲ್ಲವೆ?

ಸುನೀತಾ ಕೃಷ್ಣಮೂರ್ತಿ (ಇ-ಮೇಲ್ ಪತ್ರ)

ಪ್ರಿಯ ಓದುಗರೆ,

'ವಿವೇಕಪ್ರಭ' ಪತ್ರಿಕೆಯ ಬಗೆಗೆ, ಇಲ್ಲಿರುವ ಲೇಖನಗಳು ಹಾಗೂ ಇತರ ಅಂಕಣಗಳ ಬಗೆಗೆ ನಿಮ್ಮ ಅನಿಸಿಕೆಗಳನ್ನು ನೀವು ಬರೆದು ಕಳುಹಿಸಬಹುದು. ನಿಮ್ಮ ಅಮೂಲ್ಯ ಸಲಹೆ, ಸೂಚನೆಗಳು ಪತ್ರಿಕೆಯ ಬೆಳವಣಿಗೆಗೆ ಅತ್ಯಗತ್ಯ. ಆಯ್ದ ಪತ್ರಗಳನ್ನು ಸ್ಥಳಾವಕಾಶಕ್ಕೆ ಅನುಗುಣವಾಗಿ ಪ್ರಕಟಿಸುತ್ತೇವೆ.

-ಸಂ

ಅರಿವು ನೀಡುವ ತಾಯಿ



೧. ಒಂದು ಅನುಭವ

ಶ್ರೀಮಾತೆಯವರೊಂದಿಗೆ ಒಬ್ಬ ಹುಡುಗ ಬಾಂಕುರ ಆಶ್ರಮಕ್ಕೆ ಬಂದ. ಶ್ರೀಮಾತೆಯವರ ಸೊಸೆ ರಾಧುವಿಗೆ ಕಾಯಿಲೆ; ಚಿಕಿತ್ಸೆಗಾಗಿ ಅವಳನ್ನೂ ಅಲ್ಲಿಗೆ ಕರೆತಂದಿದ್ದರು. ಆಶ್ರಮದ ಒಂದು ಕೋಣೆಯಲ್ಲಿ ರೋಗಿ, ಇನ್ನೊಂದು ಕೋಣೆಯಲ್ಲಿ ಶ್ರೀಮಾತೆ ಮತ್ತು ಈ ಹುಡುಗ. ಶ್ರೀಮಾತೆಯವರ ಸುಕ್ಕುಗಟ್ಟಿದ, ಗುಳಿಬಿದ್ದ ಪಾದಗಳ ಮೇಲೆ ಹುಡುಗ ಕೈಯಾಡಿಸತೊಡಗಿದ. ಇದ್ದಕ್ಕಿದ್ದಂತೆ ಅವನಿಗೊಂದು ಆಲೋಚನೆ ಬಂತು – ಶ್ರೀಮಾತೆ ನಿಜವಾಗಿಯೂ ಜಗನ್ಮಾತೆಯೆ? ಜಗನ್ಮಾತೆಯದು ಇಂಥ ಜೋತುಬಿದ್ದ ಚರ್ಮದ ಕಾಲುಗಳೆ? ಹಾಗೇ ಕೈಯಾಡಿಸುತ್ತಿದ್ದ ಆತನಿಗೆ ಕ್ರಮೇಣ ಅನುಭವಕ್ಕೆ ಬಂತು, ಅದು ವೃದ್ಧೆಯ ಸುಕ್ಕುಗಟ್ಟಿದ ಪಾದಗಳಲ್ಲ, ತರುಣಿಯ ಸುಪುಷ್ಟವಾದ ಪಾದಗಳು! ಲಾಟೀನಿನ ಬೆಳಕಿನಲ್ಲಿ ನೋಡಿದ– ಅಲಂಕಾರದಿಂದ ಕೂಡಿದ ಪಾದ, ಕಾಂತಿ ಸೂಸುತ್ತಿರುವ ಉಗುರುಗಳು, ಎರಡೂ ಪಾದಗಳಲ್ಲಿ ಬಂಗಾರದ ಗೆಜ್ಜೆಗಳು, ಮುತ್ತುಮಾಣಿಕ್ಯಗಳಿಂದ ಕೂಡಿದ ಗೆಜ್ಜೆಗಳು! 'ನಾನು ಯಾರ ಸೇವೆ ಮಾಡುತ್ತಿದ್ದೇನೆ!' ಎಂದವನು ಮೂಕವಿಸ್ಮಿತನಾಗಿ ಶ್ರೀಮಾತೆಯವರ ಚರಣಗಳಿಂದ ದೃಷ್ಟಿಯನ್ನು ಅವರ ಮುಖದ ಕಡೆಗೆ ಹರಿಸಿದ. ಅಲ್ಲಿ ನೋಡಿದ – ಬಂಗಾರದ ಕಾಂತಿ, ತ್ರಿನಯನೆ, ಚತುರ್ಭುಜೆ, ನಾನಾಲಂಕಾರ ಭೂಷಿತೆಯಾದ ಜಗದ್ಧಾತ್ರೀ ಮೂರ್ತಿ ಅವಳು! ತಲೆಯಲ್ಲಿ ಕಿರೀಟ, ಕೈಗಳಲ್ಲಿ ಅಸ್ತ್ರಗಳು; ಸರ್ವಾಂಗಗಳಿಂದಲೂ ಜ್ಯೋತಿ ಹೊರಹೊಮ್ಮುತ್ತಿದೆ! ಚೆನ್ನಾಗಿ ಆಕೆಯನ್ನು ನೋಡುವ ಮೊದಲೇ 'ಅಮ್ಮಾ, ಅಮ್ಮಾ' ಎನ್ನುತ್ತ ಪ್ರಜ್ಞೆತಪ್ಪಿ ಬಿದ್ದುಬಿಟ್ಟ ಈ ಹುಡುಗ. ಪ್ರಜ್ಞೆ ಬಂದಾಗ ಶ್ರೀಮಾತೆ ಅವನ ಬೆನ್ನಮೇಲೆ ಕೈಯಾಡಿಸುತ್ತ, 'ನಿನಗೇನಾಯಿತು? ಎದ್ದೇಳು' ಎನ್ನುತ್ತಿದ್ದರು. ಹುಡುಗ ಮತ್ತೆ ನೋಡಿದ – ಅದೇ ಕೃಶವಾದ ಶರೀರ, ಸುಕ್ಕುಗಟ್ಟಿದ ಚರ್ಮದಿಂದ ಕೂಡಿದ ವೃದ್ಧೆ ಶ್ರೀಮಾತೆ! ಕಾಯಿಲೆಯಿಂದ ನರಳುತ್ತಿದ್ದ ತಮ್ಮ ಸೊಸೆಯತ್ತ ಅವರು ನೋಡುತ್ತಿದ್ದರು.

ಇದು ಸ್ವಾಮಿ ಹರಿಪ್ರೇಮಾನಂದರ ಆತ್ಮಕಥನ. ಶ್ರೀಮಾತೆಯವರನ್ನು ಕುರಿತು ಅವರು ಬರೆದ ಸ್ಮೃತಿಲೇಖನದಲ್ಲಿ ಶ್ರೀಮಾತೆಯವರ ಸಾನ್ನಿಧ್ಯದಲ್ಲಿ ಅವರಿಗಾದ ಅನುಭವವನ್ನು ಹೀಗೆ ವರ್ಣಿಸಿದ್ದಾರೆ. ಒಂದರ್ಥದಲ್ಲಿ ಈ ಘಟನೆ ಮಾನವನ ಗ್ರಹಿಕೆಯ ಮಿತಿಯನ್ನು ಚಿತ್ರಿಸುತ್ತದೆ. ಅಸಾಧಾರಣ ಬದುಕನ್ನು ನಡೆಸಿದ ಶ್ರೀಮಾತೆ ಶಾರದಾದೇವಿಯವರ ದೈನಂದಿನ ಬದುಕನ್ನು ಕಂಡಾಗ ಅನೇಕರಿಗೆ, 'ಇವರು ಹಳ್ಳಿಯ ಸಾಮಾನ್ಯ ಹೆಂಗಸಿನಂತೆ ನಾನಾ ಕೆಲಸಗಳಲ್ಲಿ ಮುಳುಗಿರುತ್ತಾರಲ್ಲ! ಇವರಲ್ಲಿ ವಿಶೇಷತೆಯೇನಿದೆ?' ಎಂದು ಅನ್ನಿಸಿದ್ದಿದೆ. ಆದರೆ ಅವರ ಅಲೌಕಿಕ ಜೀವನದ, ಅಸೀಮ ದಿವ್ಯಪ್ರೀತಿಯ ಪರಿಚಯ ಅವರಿಗಾಗುತ್ತಿದ್ದುದು ಅವರೊಂದಿಗೆ ಒಡನಾಡಿದಾಗಲೇ. ಶ್ರೀಮಾತೆಯವರು ತಮ್ಮ ನಿಷ್ಕಪಟ ನಡೆ-ನುಡಿಗಳಿಂದ, ಸರಳವಾದ ಜೀವನಕ್ರಮದಿಂದ ನಮಗೆ ಆಪ್ತರಾಗುತ್ತಾರೆ; ಎಲ್ಲರನ್ನೂ ತಮ್ಮವರನ್ನಾಗಿ ಮಾಡಿಕೊಳ್ಳುವ ವಿಶ್ವವಿಶಾಲ ಹೃದಯದಿಂದ ಅತಿ ಎತ್ತರದವರಾಗುತ್ತಾರೆ. ಆದರೆ ಇದರ ಹಿಂದಿರುವ ಅವರ ಆಧ್ಯಾತ್ಮಿಕ ಔನ್ನತ್ಯ ನಮ್ಮ ಗ್ರಹಿಕೆಯನ್ನೆಲ್ಲ ಮೀರಿ ನಿಂತಿದೆ. ಅದರ ಅಲ್ಪ ಪರಿಚಯವಾದರೂ ನಾವು ವಿಸ್ಮಯಭರಿತರಾಗಿ ಅವರ ಮುಂದೆ ಶಿಶುವಾಗಿಬಿಡುತ್ತೇವೆ.

೨. ಶಾರದೆ ಜ್ಞಾನದಾಯಿಕೆ

ಶ್ರೀರಾಮಕೃಷ್ಣರ ದಿವ್ಯಾದ್ಭುತ ಲೀಲೆಯನ್ನು ಪ್ರತ್ಯಕ್ಷ ಕಂಡು, ಅವರ ಧ್ಯಾನ, ಸಮಾಧಿ, ಭಾವವಿಲಾಸಗಳನ್ನು ಅರಿತುಕೊಂಡಿದ್ದ ಶ್ರೀಮಾತೆಯವರು ತಮ್ಮ ಜೀವನದುದ್ದಕ್ಕೂ ಅಂಥ ಆಧ್ಯಾತ್ಮಿಕತೆ ಬಾಹ್ಯದಲ್ಲಿ ವ್ಯಕ್ತವಾಗದಂತೆ ಮರೆಮಾಚಿದರು. ನಾನಾ ಬಗೆಯ ಸಾಮಾಜಿಕ ಸನ್ನಿವೇಶಗಳಲ್ಲಿ, ಹಲವು ಬಗೆಯ ವ್ಯಕ್ತಿಗಳ ನಡುವೆ ಜೀವಿಸಬೇಕಾಗಿ ಬಂದಾಗ ಅವರಿಗೆ ಅದು ಅನಿವಾರ್ಯವಾಗಿತ್ತು. ಆದರೆ ಕೆಲವೇ ಮಂದಿ ಭಾಗ್ಯಶಾಲಿಗಳಿಗೆ ಶ್ರೀಮಾತೆಯವರ ದಿವ್ಯ ವ್ಯಕ್ತಿತ್ವದ ಪರಿಚಯವುಂಟಾಗಿ, ಅವರು ಅಂತಿಂತಹ ವ್ಯಕ್ತಿಯಲ್ಲ; ಸಾಕ್ಷಾತ್ ಜಗನ್ಮಾತೆಯೇ ಧರೆಗಿಳಿದು ಬಂದಿದ್ದಾರೆ ಎಂಬುದನ್ನು ಅರಿತುಕೊಂಡರು. ಮನುಷ್ಯನ ಉತ್ತಮ ಗುಣಗಳಾದ ಪ್ರೀತಿ, ವಾತ್ಸಲ್ಯ, ಕರುಣೆ, ಸರಳತೆ, ಸೇವಾಮನೋಭಾವ, ಕಾರ್ಯದಕ್ಷತೆ, ಸೂಕ್ಷ್ಮಸಂವೇದನೆ, ಚುರುಕಾದ ಬುದ್ಧಿ, ಸಾಮಾನ್ಯ ಜ್ಞಾನ, ವ್ಯಾವಹಾರಿಕತೆ, ನಯನಾಜೂಕು, ಸುಸಂಸ್ಕೃತ ಹಾಗೂ ಗಂಭೀರ ನಡೆನುಡಿ ಇವೆಲ್ಲದರಲ್ಲೂ ಶ್ರೀಮಾತೆ ಅತ್ಯುತ್ತಮರಾಗಿದ್ದಾರೆ. ಈ ಎಲ್ಲ ಗುಣಗಳ ಹಿಂದೆ ಪ್ರಜ್ವಲಿಸುತ್ತಿದ್ದ ಅವರ ಆಧ್ಯಾತ್ಮಿಕ ಅನುಭವಗಳು ಅನೇಕರಿಗೆ ಅಗೋಚರವಾಗಿ ಹೋಯಿತು. ಯಾರು ಸಿದ್ಧರಾಗಿದ್ದರೋ ಅವರಿಗಷ್ಟೇ ಶ್ರೀಮಾತೆ ತಮ್ಮ ನಿಜವಾದ ಸ್ವರೂಪವನ್ನು ತೋರಿಸಿದ್ದಿರಬೇಕು. ಹಲವು ಮಂದಿ ಭಕ್ತರ ಹಾಗೂ ಸಂನ್ಯಾಸಿಗಳ ಜೀವನದಲ್ಲಿ ಶ್ರೀಮಾತೆಯವರ ಅಪೂರ್ವ ವ್ಯಕ್ತಿತ್ವದ ದರ್ಶನವಾದ ವಿವರಗಳು ಬರುತ್ತವೆ. ಅವರು ದಾಖಲಿಸಿದ ಲೇಖನಗಳನ್ನು ಓದುವಾಗ ನಾವೂ ಒಂದುಕ್ಷಣ ಬೆಚ್ಚಿ ಬೀಳುತ್ತೇವೆ, 'ಶ್ರೀಮಾತೆ ಇಂಥವರೆ! ಏನು ಅದ್ಭುತ ಅವರ ನಿಜವಾದ ವ್ಯಕ್ತಿತ್ವ!' ಎಂದು ಉದ್ಗರಿಸುತ್ತೇವೆ.

ಶ್ರೀಮಾತೆಯವರ ಜೀವನದ ವಿವಿಧ ಘಟನೆಗಳನ್ನು ಅವಲೋಕಿಸುತ್ತ, ಅವರಾಡಿದ ಮಾತುಗಳನ್ನೇ ಧ್ಯಾನಿಸುತ್ತ ಹೋದಂತೆ ನಮ್ಮ ಗ್ರಹಣಶಕ್ತಿ, ನಮ್ಮ ತಿಳುವಳಿಕೆ ಎಷ್ಟು ಅಲ್ಪವಾದದ್ದು ಅನ್ನಿಸುತ್ತದೆ. 'ನನಗೆಲ್ಲವೂ ಅರ್ಥವಾಗುತ್ತದೆ' ಎಂಬ ಭಾವನೆಯಿಂದ ನಾವು ಎಲ್ಲವನ್ನೂ ಅರಿಯತೊಡಗುತ್ತೇವೆ, ಅರ್ಥವಾಗದಾದಾಗ ತಡಕಾಡುತ್ತೇವೆ. ಕೊನೆಗೆ ಎಷ್ಟು ಅರ್ಥವಾಯಿತು ಅಷ್ಟಕ್ಕೇ, 'ಎಲ್ಲವೂ ತಿಳಿಯಿತು' ಎಂದುಕೊಳ್ಳುತ್ತೇವೆ. ಇದು ನಮ್ಮ ಮಿತಿಯೂ ಹೌದು, ಅರಿವಿನ ನಿರಂತರ ವಿಕಾಸಕ್ಕೆ ಅಡ್ಡಿಯೂ ಹೌದು. ಶ್ರೀಮಾತೆಯವರ ವ್ಯಕ್ತಿತ್ವದ ಆಳದಲ್ಲಿ ಅಡಗಿರುವ ಅವ್ಯಕ್ತ ದೈವೀ ವ್ಯಕ್ತಿತ್ವ ನಮ್ಮ ಅರಿವನ್ನೆಲ್ಲ ಆವರಿಸಿಬಿಡುತ್ತದೆ; ನಮ್ಮ ಅಜ್ಞಾನದ ಅರಿವನ್ನು ನಮಗೆ ಮಾಡಿಕೊಡುತ್ತದೆ. ಈ ಅರ್ಥದಲ್ಲಿ ಶ್ರೀಮಾತೆಯವರು ನಿಜವಾದ ಜ್ಞಾನದಾತೆ, ನಮ್ಮ ಅಂಧಕಾರಗಳನ್ನು ನೀಗುವ ಸರಸ್ವತಿ. 'ಅವಳ ಹೆಸರು ಶಾರದೆ; ಅವಳು ಜ್ಞಾನವನ್ನು ನೀಡಲು ಬಂದಿರುವಳು' ಎಂದು ಶ್ರೀರಾಮಕೃಷ್ಣರೇ ಒಂದೆಡೆ ಹೇಳಿದ್ದಾರೆ. ಜೀವಿಗಳ ಮಾನಸಿಕ, ಬೌದ್ಧಿಕ ಮಿತಿಯನ್ನೇ ವಿಸ್ತರಿಸಿ, ಅಗಾಧ ಸತ್ಯದ ದೈವೀಪ್ರಪಂಚದಲ್ಲಿ ಅವು ಈಜಾಡುವಂತೆ, ಉನ್ನತ ನೆಲೆಗೆ ಹಾರಾಡುವಂತೆ ಮಾಡುವ ಉದ್ಧಾರಕ ಶಕ್ತಿ ಅವರದು.

೩. ಚರಿತ್ರೆಯ ಮರುವ್ಯಾಖ್ಯಾನ

ಶ್ರೀಮಾತೆ ರಾಮೇಶ್ವರ ಯಾತ್ರೆ ಪೂರೈಸಿ ಕಲ್ಕತ್ತೆಗೆ ಮರಳಿ ಬಂದಿದ್ದರು. ಕೋಯಲ್‌ಪರಾ ಆಶ್ರಮದ ಸ್ವಾಮಿ ಕೇಶವಾನಂದರು ಶ್ರೀಮಾತೆಯವರನ್ನು ಕೇಳಿದರು, ''ರಾಮೇಶ್ವರ ಮೊದಲಾದ ಕಡೆ ಯಾತ್ರೆ ಹೇಗಾಯಿತು?'' ಅದಕ್ಕೆ ಶ್ರೀಮಾತೆ, ''ಮಗೂ, ಹೇಗೆ ಇರಿಸಿದ್ದೆನೋ ಹಾಗೇ ಎಲ್ಲವೂ ಇತ್ತು'' ಎಂದರು. ಆ ದಾರಿಯಾಗಿ ಹೋಗುತ್ತಿದ್ದ ಗೋಲಾಪ್ ಮಾ ಅದನ್ನು ಕೇಳಿಸಿಕೊಂಡು, ''ಏನೆಂದಿರಿ, ಅಮ್ಮಾ?'' ಎಂದು ಕೇಳಿದರು. ಅದಕ್ಕೆ ಶ್ರೀಮಾತೆ ತುಸು ಅವಾಕ್ಕಾಗಿ, ''ಏಕೆ, ಏನು ಹೇಳಲಿ? ನಾನೆಂದೆ, ನಾನು ನಿಮ್ಮಿಂದ ಏನೇನು ಕೇಳಿದ್ದೆನೋ ಎಲ್ಲವೂ ಹಾಗೇ ಇದ್ದದ್ದನ್ನು ನೋಡಿ ತುಂಬಾ ಆನಂದವಾಯಿತು ಅಂತ'' ಎಂದರು. ಆಗ ಗೋಲಾಪ್ ಮಾ, ''ಬೇಡಮ್ಮಾ; ನಾನು ಎಲ್ಲವನ್ನೂ ಕೇಳಿಸಿಕೊಂಡೆ. ಈಗ ಮಾತು ಬದಲಾಯಿಸಿದರೆ ಏನೂ ನಡೆಯದು'' ಎಂದರು. ಶ್ರೀಮಾತೆಯವರ ಸಂಗಾತಿಯಾಗಿದ್ದ ಗೋಲಾಪ್‌ಮಾ ಶ್ರೀಮಾತೆಯವರ ಬಾಯಿಯಿಂದ ಅವರ ಅರಿವಿಲ್ಲದೆ ಹೊರಬಿದ್ದ ಮಾತನ್ನು ಸರಿಯಾಗಿ ಅರ್ಥೈಸಿಕೊಂಡಿದ್ದರು. – ಹಿಂದೆ ಶ್ರೀರಾಮಚಂದ್ರನ ಕಾಲದಲ್ಲಿ ಸೀತೆಯೇ ಪ್ರತಿಷ್ಠಾಪಿಸಿದ ಶಿವನ ವಿಗ್ರಹವನ್ನು ಕುರಿತು ಹೇಳಿದ್ದರು; ತಾನು ಸೀತೆಯಾಗಿದ್ದಾಗ ಇರಿಸಿದ ಆ ಮೂರ್ತಿ ಈಗಲೂ ಹಾಗೆ ಇದ್ದದ್ದನ್ನು ಅವರು ಕಂಡಿದ್ದರು.

ರಾಮಾಯಣವೇ ಮೊದಲಾದ ಪುರಾತನ ಕೃತಿಗಳಲ್ಲಿ ಉಲ್ಲೇಖಿಸಲ್ಪಟ್ಟ ಸಂಗತಿಗಳು ಕಟ್ಟುಕಥೆ ಎಂದು ನಾವು ತಳ್ಳಿಹಾಕುತ್ತೇವೆ. ರಾಮಾಯಣ, ಮಹಾಭಾರತಗಳನ್ನು ಇತಿಹಾಸವೆಂದು ಕರೆಯುವುದಿದ್ದರೂ, ಅದು ಹೆಸರಿಗೆ ಮಾತ್ರ. ಐತಿಹಾಸಿಕವಾಗಿ, ವೈಜ್ಞಾನಿಕವಾಗಿ ಮಾತನಾಡುವಾಗ ನಾವು ಈ ಕೃತಿಗಳಲ್ಲಿ ಹೇಳಿದ್ದೆಲ್ಲ ನಿಜವೆಂದು ನಂಬುವುದಿಲ್ಲ. ಆದರೆ ಶ್ರೀಮಾತೆಯವರ ಮಾತಿನ ಬೆಳಕಿನಲ್ಲಿ ನೋಡುವಾಗ, ರಾಮಾಯಣ ಕಾಲದ ಆ ಘಟನೆ ನಿಜವಾಗಿರಬೇಕಲ್ಲವೆ? ಶ್ರೀರಾಮಕೃಷ್ಣರು ತಮ್ಮ ಬಗ್ಗೆ ಹೇಳಿಕೊಳ್ಳುತ್ತ, 'ಹಿಂದೆ ತ್ರೇತಾಯುಗದಲ್ಲಿ ಯಾರು ರಾಮನಾಗಿದ್ದನೋ, ದ್ವಾಪರಯುಗದಲ್ಲಿ ಕೃಷ್ಣನಾಗಿದ್ದನೋ, ಅವನೇ ಈಗ ರಾಮಕೃಷ್ಣನಾಗಿ ಬಂದಿದ್ದಾನೆ' ಎಂದಿದ್ದರು. ಅವರು ಅವತಾರವೆಂಬುದನ್ನು ದೃಢೀಕರಿಸುವ ಮಾತು ಅದು. ಕೇವಲ ಉತ್ಪ್ರೇಕ್ಷೆಯ, ಭಾವನೆಯ ಮಾತಲ್ಲ ಅದು; ಐತಿಹಾಸಿಕ ಪರಿಕಲ್ಪನೆಯ ಆಧುನಿಕ ಮಿತಿಯನ್ನು ಮೀರಿ ನಿಂತು, ಆಧ್ಯಾತ್ಮಿಕ ನೆಲೆಯಲ್ಲಿ ಅವತಾರ ತತ್ತ್ವದ ಸತ್ಯವನ್ನು ಮನಗಂಡಾಗ ಮೂಡಿಬರುವ ಶ್ರದ್ಧೆ ಅದು. ಶ್ರೀರಾಮಕೃಷ್ಣರು ರಾಮನಾಗಿ ಬಂದಿದ್ದಾಗ ಶ್ರೀಮಾತೆ ಸೀತೆಯಾಗಿರಬೇಕಲ್ಲವೆ? ಅದನ್ನು ಪುಷ್ಟೀಕರಿಸುವಂತೆ ಬಂದಿತ್ತು ಶ್ರೀಮಾತೆಯವರ ಮೈಮರೆತ ಮಾತು. ಶ್ರೀಮಾತೆಯವರ ದಿವ್ಯ ವ್ಯಕ್ತಿತ್ವವನ್ನು ಅದು ಸೂಚಿಸುವಂತೆಯೇ, ಅವತಾರ ಪುರುಷನ ಲೀಲಾಸಹಚರಿಯಾಗಿ, ಶಕ್ತಿಯಾಗಿ ಜಗನ್ಮಾತೆಯೇ ಧರೆಗಿಳಿದು ಬಂದ ಸಂಗತಿಯನ್ನೂ ಸೂಚಿಸುತ್ತದೆ. ಸತ್ಯ, ಪ್ರಾಮಾಣಿಕತೆಗಳ ಸಾಕಾರಮೂರ್ತಿಯೆನಿಸಿಕೊಂಡ ಶ್ರೀಮಾತೆ ಶಾರದಾದೇವಿಯವರು ಆಡಿದ ಮಾತುಗಳನ್ನು ತೀರ ಸಾಮಾನ್ಯ ಮಾತುಗಳೆಂದು ಪರಿಗಣಿಸಬಾರದು, ಅಷ್ಟೆ. ಈ ಹಿನ್ನೆಲೆಯಲ್ಲಿ ಚರಿತ್ರೆಯ ಹೊಸ ವ್ಯಾಖ್ಯಾನ, ಹೊಸ ಸಾಧ್ಯತೆ ಆವಶ್ಯಕವೆನಿಸುತ್ತದೆ.

೪. ಸೃಷ್ಟಿ ನಿಯಮಗಳಾಚೆ

ಒಂದು ಸಣ್ಣ ಮಾತುಕತೆ. ಸ್ವಾಮಿ ಅರೂಪಾನಂದರು (ಆಗ ಬ್ರಹ್ಮಚಾರಿ ರಾಸಬಿಹಾರಿ) ಶ್ರೀಮಾತೆಯವರನ್ನು ಕೇಳುತ್ತಾರೆ: ''ಅಮ್ಮಾ, ಈ ಅನಂತ ಸೃಷ್ಟಿಯಲ್ಲಿ ಎಲ್ಲಿ ಏನಾಗುತ್ತದೆ – ಯಾರಿಗೆ ಗೊತ್ತು? ಈ ಅಸಂಖ್ಯಾತ ಗ್ರಹನಕ್ಷತ್ರ ಇವುಗಳಲ್ಲಿ ಯಾವುದಾದರೂ ಜೀವಿಗಳು ಇರುವವೋ ಇಲ್ಲವೋ ಯಾರು ಹೇಳಬಲ್ಲರು?''

ಅದಕ್ಕೆ ಶ್ರೀಮಾತೆಯವರು: ''ಮಾಯೆಯ ಸಾಮ್ರಾಜ್ಯದಲ್ಲಿ ಸರ್ವಜ್ಞನಾಗಿರುವುದು ಕೇವಲ ಈಶ್ವರನಿಗೊಬ್ಬನಿಗೆ ಮಾತ್ರ ಸಾಧ್ಯ. ಆ ಗ್ರಹ-ನಕ್ಷತ್ರಗಳಲ್ಲೆಲ್ಲ ಯಾವ ಜೀವಿಗಳೂ ವಾಸವಾಗಿಲ್ಲ.'' ಎಂದರು.

ಸಾಧಾರಣವೆಂಬಂತೆ ನಡೆದ ಈ ಸಂಭಾಷಣೆಯ ನಡುವೆ ಅದೆಷ್ಟು ಗಹನವಾದ ಅರ್ಥ ಅಡಗಿದೆಯೋ! ಈ ಆಧುನಿಕ ಯುಗದಲ್ಲಿ ಗ್ರಹಗಳಾಚೆ, ದೂರದ ನಕ್ಷತ್ರದಲ್ಲೋ ಎಲ್ಲೋ ಜೀವಿಗಳಿರಬಹುದೇನೋ ಎಂಬ ಊಹಾಪೋಹಗಳಿಗೆ ಕೊನೆಯೇ ಇಲ್ಲ. ಸೌರವ್ಯೂಹ, ಬ್ರಹ್ಮಾಂಡ (galaxy) ಗಳಾಚೆ ಎಲ್ಲೋ ಭೂಮಿಯಂಥದೇ ಗ್ರಹಗಳಿರಬಹುದು; ಅಲ್ಲಿಂದ ಬಾಹ್ಯಾಕಾಶ ಯಾತ್ರೆ ಮಾಡಿಬಂದ ಜೀವಿಗಳು ಭೂಮಿಗೆ ಮುಖಾಮುಖಿಯಾಗುವವು; ಮಾನವರಿಗೂ ಆ ಜೀವಿಗಳಿಗೂ ಯುದ್ಧ ನಡೆಯುವುದು – ಹೀಗೆ ಕಾಲ್ಪನಿಕ ಸಾಹಿತ್ಯ ಸೃಷ್ಟಿಯಾಗುತ್ತಲೇ ಇದೆ. ಹಾರುವ ತಟ್ಟೆ , ಅನ್ಯಗ್ರಹ ಜೀವಿಗಳ ಅಸ್ತಿತ್ವ ಮುಂತಾದ ವಿಷಯಗಳ ಬಗ್ಗೆ ಕೂಡ ಹಲವು ವೈಜ್ಞಾನಿಕ ಅನ್ವೇಷಕರೇ ಸತ್ಯವೆಂಬಂತೆ ಬರೆದಿದ್ದಾರೆ. ಆದರೆ ಇಲ್ಲಿಯವರೆಗೆ ಅದಾವುದೂ ದೃಢಪಟ್ಟಿಲ್ಲ. ಇಂಥ ಒಂದು ಪ್ರಶ್ನೆ ಅರೂಪಾನಂದರಿಗೆ ಹೇಗೆ ಉದ್ಭವಿಸಿತೊ! (ಸ್ವಾಮಿ ಅರೂಪಾನಂದರೇ ಇನ್ನೊಂದೆಡೆ ಹೇಳಿರುವಂತೆ, ಶ್ರೀಮಾತೆ ತಾವಾಗಿಯೇ ಪ್ರಶ್ನೆ ಕೇಳುವಂತೆ ಪ್ರಚೋದನೆ ನೀಡಿದರು, ಕೊನೆಗೆ ಅವರೇ ಅದಕ್ಕೆ ಉತ್ತರ ನೀಡಿದರು ಎಂದು ಬೇಕಾದರೂ ಅನ್ನಬಹುದು.) ಆದರೆ ಶ್ರೀಮಾತೆ ನೀಡುವ ಉತ್ತರ ತುಂಬ ರೋಚಕವಾಗಿದೆ. ಅಸಂಖ್ಯಾತ ಗ್ರಹ ನಕ್ಷತ್ರ ತಾರಾವಳಿ ಇವನ್ನೆಲ್ಲ ಒಟ್ಟಾಗಿ ಸೇರಿಸಿ 'ಮಾಯಾಪ್ರಪಂಚ' ಎನ್ನುತ್ತಲೇ ಅವರು ಅದಕ್ಕೊಂದು ಆಧ್ಯಾತ್ಮಿಕ ಆಯಾಮವನ್ನು ಕೊಡುತ್ತಾರೆ. ನಿಜ, ವ್ಯಕ್ತ ಪ್ರಪಂಚವೆಲ್ಲವೂ ಪಂಚಭೂತಾತ್ಮಕವಾದ ಘನ ವಸ್ತುಗಳ ಸಂಯೋಜನೆ ಹಾಗೂ ವಿಶ್ವನಿಯಮಗಳ ಒಂದು ಸರಣಿ ತಾನೆ! ಅದೆಲ್ಲವೂ ಮಾಯಾಪ್ರಪಂಚದ ಅಂಗವಷ್ಟೇ ಆಗಿದೆ. ಅದರಲ್ಲಿ ಪ್ರತಿಯೊಂದು ಸಂಗತಿಯನ್ನೂ ತಿಳಿಯುವುದು, ಅನಾದಿ-ಅನಂತವಾದ ಸೃಷ್ಟಿಯ ವಿವರಗಳನ್ನು ಅರ್ಥಮಾಡಿಕೊಳ್ಳುವುದು ಮಾನವಮಾತ್ರರಿಗೆ ಅಸಾಧ್ಯವಾದ ವಿಚಾರ. (ಅದೆಷ್ಟೇ ವೈಜ್ಞಾನಿಕ ಅನ್ವೇಷಣೆಗಳು ನಡೆಯಲಿ, ಯಂತ್ರಜಗತ್ತಿನ ಮಾಧ್ಯಮಗಳು ಸೃಷ್ಟಿಯಾಗಲಿ – ಅವೆಲ್ಲ ನಗಣ್ಯ) ಅದನ್ನೆಲ್ಲ ಅರಿಯುವ ಸಾಮರ್ಥ್ಯ ಮಾಯಾ ಪ್ರಪಂಚದ ನಿರ್ಮಾತೃವಾದ ಈಶ್ವರನಿಗಷ್ಟೇ ಇದೆ ಎನ್ನುತ್ತಾರೆ ಶ್ರೀಮಾತೆ. ಸರ್ವಜ್ಞತ್ವ ಎಂಬುದು ಈಶ್ವರನ ಒಂದು ವಿಶೇಷ ಗುಣವೆಂದು ಹೇಳುವ ಸಾಂಖ್ಯ ಹಾಗೂ ವೇದಾಂತ ತತ್ತ್ವಗಳಿಗೆ ಅನುಗುಣವಾಗಿಯೇ ಇದೆ, ಅವರ ಮಾತು. ಆದರೆ ಶ್ರೀಮಾತೆ ಅಷ್ಟಕ್ಕೇ ನಿಲ್ಲಿಸದೆ, ''ಆ ಗ್ರಹ-ನಕ್ಷತ್ರಗಳಲ್ಲೆಲ್ಲ ಯಾವ ಜೀವಿಗಳೂ ವಾಸವಾಗಿಲ್ಲ'' ಎನ್ನುತ್ತಾರೆ. ಯಾವ ಸಂದೇಹಕ್ಕೂ ಆಸ್ಪದವಿಲ್ಲದಂತೆ, ಈ ರೀತಿ ನಿಶ್ಚಯವಾಗಿ ಶ್ರೀಮಾತೆ ಹೇಳಿರುವುದರ ಇಂಗಿತಾರ್ಥವೇನು? ತಾವೇ ಸಕಲ ಜಗತ್ತನ್ನು ಸೃಷ್ಟಿಸಿರುವ ಈಶ್ವರನೆಂದು ತಾನೆ? ಹಲವು ವರ್ಷಗಳ ನಂತರ ಈ ಸಂದೇಹವನ್ನು ಒಬ್ಬರು ಭಕ್ತರು ಸ್ವಾಮಿ ಅರೂಪಾನಂದರ ಮುಂದಿಟ್ಟಾಗ ಅವರು ಅದನ್ನು ಸಮರ್ಥಿಸಿದರು. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣಳಾದ, ಸಮಸ್ತ ಜೀವಿಗಳ ಕರ್ಮಗತಿಯನ್ನೂ, ಬಂಧನ-ಮೋಕ್ಷಗಳನ್ನೂ ನಿಯಂತ್ರಿಸುವ ಆದಿಶಕ್ತಿ, ಜಗನ್ಮಾತೆ ಈಗ ಶ್ರೀಮಾತೆ ಶಾರದಾದೇವಿಯ ರೂಪದಲ್ಲಿ ಪ್ರಕಟಗೊಂಡಿದ್ದಾರೆ ಎಂಬ ಅರಿವು ಮೂಡುವ ವ್ಯಕ್ತಿಯೇ ಧನ್ಯನು. ಸಾಮಾನ್ಯ ಮಹಿಳೆಯ ಹಿಂದೆ ಅಡಗಿರುವ ಈ ದೈವೀ ಶಕ್ತಿಯ ಅರಿವು ನಮ್ಮಲ್ಲಿ ಉದಿಸುವುದಕ್ಕೆ ಶ್ರೀಮಾತೆಯವರ ಕೆಲವು ಅರ್ಥಗರ್ಭಿತವಾದ ಮಾತುಗಳನ್ನು, ವಿಶಿಷ್ಟವಾದ ಅವರ ಜೀವನದ ಘಟನೆಗಳನ್ನು ಅವಲೋಕಿಸಬೇಕು.

೫. ಜಡ-ಚೈತನ್ಯಗಳ ಮೂಲ

ಸ್ವಾಮಿ ಶಾಂತಾನಂದರು ಶ್ರೀಮಾತೆಯವರನ್ನು ಕುರಿತ ತಮ್ಮ ಸ್ಮೃತಿಚಿತ್ರದಲ್ಲಿ ಬರೆಯುತ್ತಾರೆ: ಒಂದು ದಿನ ಮಾತಿನ ಮಧ್ಯೆ ಶ್ರೀಮಾತೆ ಹೇಳಿದ್ದರು, ''ಶ್ರೀರಾಮಕೃಷ್ಣರ ಕೂದಲು ಕ್ಷುಲ್ಲಕ ವಸ್ತುವೆ? ಅವರ ದೇಹತ್ಯಾಗವಾದ ನಂತರ ನಾನು ಪ್ರಯಾಗಕ್ಕೆ ಹೋದಾಗ ಅವರ ಕೂದಲನ್ನು ಕೈಯಲ್ಲಿ ಹಿಡಿದು 'ಈಗ ನೀರಿನಲ್ಲಿ ಅರ್ಪಿಸುತ್ತೇನೆ' ಎಂದು ಭಾವಿಸುತ್ತಿದ್ದೆ. ಅಷ್ಟರಲ್ಲಿ ಹಠಾತ್ತಾನೆ ಒಂದು ಅಲೆ ಬಂದು ನನ್ನ ಕೈಯಲ್ಲಿದ್ದ ಕೂದಲನ್ನು ಸೆಳೆದುಕೊಂಡು ಹೋಗಿ ನೀರಿನಲ್ಲಿ ಒಂದಾಯಿತು. ತೀರ್ಥ ಪವಿತ್ರವಾಗಲು ಅದು ನನ್ನ ಕೈಯಿಂದ ಆ ಕೂದಲನ್ನು ಸೆಳೆದುಕೊಂಡು ಹೋಯಿತು.''


ಶ್ರೀರಾಮಕೃಷ್ಣರಂಥ ಮಹಾಪುರುಷರ ದಿವ್ಯತೆಗೆ ಸೀಮೆಯುಂಟೆ? ನಾವು ಜಡವೆಂದು ಭಾವಿಸುವ ಅವರ ದೇಹದ ಒಂದು ಕೂದಲೂ ಅವರ ದಿವ್ಯಸ್ಪರ್ಶದಿಂದ ಪವಿತ್ರವಾಗುವುದು. ಭಗವತ್ ಸಾಕ್ಷಾತ್ಕಾರ ಹೊಂದಿದವನ ರೋಮರೋಮವೂ ಅದರ ಅಸಾಧಾರಣ ಕಂಪನದಿಂದ ಚೈತನ್ಯಮಯವಾಗಿ ಬಿಡುವುದು. ಆದ್ದರಿಂದಲೇ ಅವರ ಅಸ್ಥಿ, ಅವರು ಉಪಯೋಗಿಸಿದ ವಸ್ತುಗಳು, ಅವರ ಸ್ಪರ್ಶದಿಂದ ಪವಿತ್ರಗೊಂಡ ಪ್ರತಿಯೊಂದು ಸ್ಥಳವೂ ದಿವ್ಯವೆನಿಸುವುದು. ಇದು ಕೇವಲ ಭಾವುಕತೆಯ, ಉತ್ಪ್ರೇಕ್ಷೆಯ ಅಥವಾ ಗೌರವಪೂರ್ಣವಾದ (ಅಂದರೆ ವಾಸ್ತವಿಕಲ್ಲದ) ಒಂದು ಭಾವನೆ ಎಂದು ನಾವು ಭಾವಿಸಬಾರದು. ಮೇಲಿನ ಘಟನೆ ಅಂಥ ಸಂದೇಹಗಳನ್ನು ಅಲ್ಲಗಳೆಯುತ್ತದೆ; ಪ್ರತಿಯೊಂದು ಭಾವನೆಯೂ ವಾಸ್ತವವೇ ಎಂಬುದನ್ನು ತೋರಿಸಿಕೊಡುತ್ತದೆ. 'ನೀರು ಜೀವವಿಲ್ಲದ ಜಡವಸ್ತು; ನದಿಯು ನೀರು ಹೀಗೆಲ್ಲ ಭಾವಿಸುವುದೆ?' ಎಂದೆಲ್ಲ ವೈಜ್ಞಾನಿಕವಾಗಿ ಪ್ರಶ್ನಿಸಬಹುದು; ಆದರೆ ಆಧ್ಯಾತ್ಮಿಕ ನೆಲೆಯಲ್ಲಿ ಸತ್ಯವನ್ನು ಅರ್ಥಮಾಡಿಕೊಳ್ಳುವ ರೀತಿಯೇ ಬೇರೆ. ಅದಕ್ಕೆ ಭೌತಿಕ ದೃಷ್ಟಿಯ ಮಾನದಂಡವನ್ನು ಉಪಯೋಗಿಸಬಾರದು. ಶ್ರೀಮಾತೆಯಂತಹ, ಶ್ರೀರಾಮಕೃಷ್ಣರಂತಹ ದಿವ್ಯವ್ಯಕ್ತಿಗಳ

ಮಾತು, ಅನುಭವಗಳೇ ಸತ್ಯವನ್ನರಿಯುವ ಸರಿಯಾದ ಮಾನ ದಂಡ. ಸತ್ಯ ಹಾಗೂ ಜಗತ್ತನ್ನು ನಾವು ಈ ಹಿನ್ನೆಲೆಯಿಂದ ಅರಿತುಕೊಳ್ಳಬೇಕು. ಶ್ರೀಮಾತೆಯವರ ಮಾತುಗಳಲ್ಲಿ ಈ ಬಗೆಯ ಅಸಾಧಾರಣ ಅನುಭವಗಳು ವಿಪುಲವಾಗಿ ಕಂಡು ಬರುತ್ತವೆ. ಅವುಗಳನ್ನು ಅರ್ಥಮಾಡಿಕೊಳ್ಳುವ ನೆಪದಲ್ಲಿ ನಮ್ಮ ಅಜ್ಞಾನ ತೊಳೆದುಹೋಗುವುದು; ಹೊಸಜಗತ್ತು ನಮಗೆ ತೆರೆಯುವುದು.

೬. ಮಾತೆಯ ವಿಶಾಲ ಮಡಿಲು

ಇವೆಲ್ಲಕ್ಕಿಂತ ಮಿಗಿಲಾಗಿ ಶ್ರೀಮಾತೆ ಇಡೀ ಜಗತ್ತಿಗೆ ತೋರಿದ ಮಾತೃಪ್ರೇಮ, ವಾತ್ಸಲ್ಯ ಎಣೆಯಿಲ್ಲದ ಒಂದು ಕೃಪಾವರ್ಷದಂತೆ ಕಂಡುಬರುತ್ತದೆ. ಸಾಧು ಸಜ್ಜನರಿರಲಿ, ಸ್ತ್ರೀಪುರುಷ ಭಕ್ತರಿರಲಿ, ಚಿಕ್ಕ ಮಕ್ಕಳಾಗಲಿ, ದಟ್ಟದರಿದ್ರರೂ ದುಷ್ಟರೂ ದೀನದುಃಖಿಗಳೂ ಆದವರಿರಲಿ – ಎಲ್ಲರಿಗೂ ಅವರು ಮಾತೆಯಾಗಿದ್ದರು. ತಾಯಿ ಹೇಗೆ ತನ್ನೆಲ್ಲ ಮಕ್ಕಳನ್ನೂ ಒಂದೇ ರೀತಿ ಪ್ರೀತಿಸುವಳೋ, ಅದೇ ರೀತಿ ಶ್ರೀಮಾತೆ ಆಧ್ಯಾತ್ಮಿಕ ನೆಲೆಯ ಜಗನ್ಮಾತೆಯಾಗಿ ಪ್ರತಿಯೊಬ್ಬನನ್ನೂ ಪ್ರೀತಿಸಿದರು. ವಿಶೇಷವಾಗಿ ಆರ್ತರನ್ನು, ಪತಿತರನ್ನು ಕೈ ಹಿಡಿದು ಮೇಲೆತ್ತಿದರು. ಅವರ ಪ್ರೀತಿಗೆ ಒಳಗಾಗದ ಯಾವ ವ್ಯಕ್ತಿಯೂ ಇರಲಿಲ್ಲ; ಅಷ್ಟೇಕೆ ಒಂದು ಕೀಟ, ಇರುವೆ, ಗಿಡಮರಗಳೂ ಅವರ ಕೃಪೆಗೆ ಪಾತ್ರವಾದವು. ಇಡೀ ಜೀವ ಜಗತ್ತಿನ ಅಂತರ್ಯಾಮಿಯಾದ ತಾಯಿಯಾಗಿದ್ದರು ಅವರು. ''ನಾನು ದುಷ್ಟರ ತಾಯಿ, ಅಂತೆಯೇ ಉತ್ತಮರ ತಾಯಿ. ಭಯಪಡಬೇಡ. ಎಂದಾದರೂ ನಿನಗೆ ಕಷ್ಟ ಬಂದಾಗ ಹೇಳಿಕೋ, ನನಗೊಬ್ಬಳು ತಾಯಿ ಇದ್ದಾಳೆ ಅಂತ'' ಎಂದಿದ್ದಾರೆ ಶ್ರೀಮಾತೆ. ಎಂಥ ಭರವಸೆಯ ನುಡಿಗಳವು! ನಮ್ಮ ತಾಯಿ ಅಂತಿಂಥ ತಾಯಿಯಲ್ಲ, 'ಜಗನ್ಮಾತೆ.' ಎಲ್ಲರನ್ನೂ ಕತ್ತಲೆಯ ಪ್ರಪಂಚದಿಂದ ಪಾರುಮಾಡುವ ಜ್ಯೋತಿರ್ಮಯಿ ಆಕೆ. ಒಂದು ಕ್ಷಣ ಅವರ ನೆನಪು ಜನ್ಮಜನ್ಮಾಂತರದ ಪಾಪರಾಶಿಯನ್ನು ನಾಶಮಾಡುವುದು. ದಿವ್ಯಪ್ರೇಮದ ಅನಂತ ಸಾಗರದಲ್ಲಿ ನಮ್ಮ ಪಯಣ ಪವಿತ್ರತೆ, ಧನ್ಯತೆಗಳಲ್ಲಿ ಮುಳುಗೇಳುತ್ತ ಸಾಗುವುದು. ✷

ಸ್ವಾಮಿ ಶಾರದಾನಂದರ ಮಾತೃಭಕ್ತಿ



ಶಾರದಾನಂದರಿಗೆ ತಮ್ಮನ್ನು ತಾವು ಶ್ರೀಮಾತೆಯವರ ಬಾಗಿಲು ಕಾಯುವವನು ಎಂದು ಕರೆದುಕೊಳ್ಳುವುದರಲ್ಲಿ ಬಹಳ ಹೆಮ್ಮೆ. ಕೊಲ್ಕತ್ತದ ತಾಯಿಯವರ ಮನೆಯ ಪ್ರವೇಶದ್ವಾರದ ಸಮೀಪದಲ್ಲಿದ್ದ ತಮ್ಮ ಸಣ್ಣ ಕೊಠಡಿ ಯಲ್ಲಿದ್ದುಕೊಂಡು, ಶ್ರೀಮಾತೆಯವರಿಗೆ ಪ್ರಣಾಮ ಮಾಡುವುದಕ್ಕೆ ಎಂದು ಮೆಟ್ಟಿಲು ಹತ್ತಿಹೋಗುವ ಭಕ್ತರ ಮೇಲೆ ಯಾವಾಗಲೂ ಒಂದು ಕಣ್ಣಿಟ್ಟಿರುತ್ತಿದ್ದರು. ಅದೇನೂ ಸುಲಭವಾದ ಕೆಲಸವಾಗಿರಲಿಲ್ಲ. ಒಂದು ಸಲ ಭಕ್ತನೊಬ್ಬನು ತುಂಬ ದೂರದಿಂದ ಉದ್ಬೋಧನಕ್ಕೆ ನಡೆದುಕೊಂಡು ಬಂದಿದ್ದನು. ಆಗ ತುಂಬ ಸೆಕೆ – ಮಧ್ಯಾಹ್ನ ಸುಮಾರು ಮೂರುಗಂಟೆ ಇರಬಹುದು. ಆಗತಾನೆ ಇನ್ನೊಬ್ಬ ಭಕ್ತರ ಮನೆಯಿಂದ ಹಿಂದಿರುಗಿದ್ದ ಶ್ರೀಮಾತೆಯವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಶಾರದಾನಂದರು ಆ ಭಕ್ತನಿಗೆ, ''ನಾನೀಗ ನಿನಗೆ ಮೇಲೆ ಹೋಗಲು ಬಿಡಲಾರೆ; ಶ್ರೀಮಾತೆಯವರಿಗೆ ತುಂಬ ಆಯಾಸವಾಗಿದೆ'' ಎಂದರು. ''ಅವರು ನಿಮಗೆ ಮಾತ್ರ ತಾಯಿಯೇನು?'' ಎನ್ನುತ್ತ ಆ ಭಕ್ತನು ಸ್ವಾಮಿಗಳನ್ನು ಪಕ್ಕಕ್ಕೆ ತಳ್ಳಿ ಮೇಲಕ್ಕೆ ಹತ್ತಿ ಶ್ರೀಮಾತೆಯವರ ಬಳಿಗೆ ಹೋದನು. ಕ್ಷಿಪ್ರದಲ್ಲಿಯೇ ತನ್ನ ಈ ನಡತೆಗೆ ಪಶ್ಚಾತ್ತಾಪಪಟ್ಟ ಅವನು ತಾನು ಹೊರಕ್ಕೆ ಹೋಗುವಾಗ ಸ್ವಾಮಿಗಳು ಅಲ್ಲಿಲ್ಲದಿರಲಿ ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿಕೊಂಡನು. ತಾನು ಮಾಡಿದ ತಪ್ಪನ್ನು ಶ್ರೀಮಾತೆಯವರಿಗೂ ಹೇಳಿ ಕ್ಷಮಾಪಣೆ ಬೇಡಿದನು. ಅವರೂ ಅವನಿಗೆ ಸಮಾಧಾನ ಮಾಡಿ ಧೈರ್ಯಕೊಟ್ಟರು. ಅವನತಶಿರನಾಗಿ ಕೆಳಗಿಳಿದು ಬಂದ ಅವನು ನೋಡುತ್ತಾನೆ, ಸ್ವಾಮಿಗಳು ಮೊದಲು ಇದ್ದಲ್ಲೇ ಕುಳಿತಿದ್ದಾರೆ! ದಯಮಾಡಿ ತನ್ನ ಅನುಚಿತ ವರ್ತನೆಯನ್ನು ಕ್ಷಮಿಸಬೇಕೆಂದು ಅವನು ಸ್ವಾಮಿಗಳನ್ನು ಬೇಡಿದನು. ಶಾರದಾನಂದರು ಅವನನ್ನು ಆಲಿಂಗಿಸಿಕೊಂಡು, ''ನನ್ನನ್ನು ನೋಯಿಸಿದೆನೆಂದು ಏಕೆ ಅಂದುಕೊಳ್ಳುತ್ತೀ? ಅಂತಹ ವ್ಯಾಕುಲತೆ ಇಲ್ಲದಿದ್ದರೆ ಯಾರಾದರೂ ಶ್ರೀಮಾತೆ ಯವರನ್ನು ನೋಡಲು ಸಾಧ್ಯವೆ?'' ಎಂದರು.

('ದೇವರೊಡನೆ ಬಾಳಿದವರು' ಗ್ರಂಥದಿಂದ ಭಾಗ ೧, ಪು.೩೯೦)

ಶ್ರೀಮಾತೆ : ದಕ್ಷಿಣೇಶ್ವರದಲ್ಲಿ ನಾನು ಕಂಡಂತೆ

ಭವತಾರಿಣೀ ದೇವಿ



ಭವತಾರಿಣೀ ದೇವಿ (೧೮೭೭-೧೯೭೩) ಸುಪ್ರಸಿದ್ಧ ಬಂಗಾಳಿ ಸಾಹಿತ್ಯ ಪ್ರಕಾಶನ ಸಂಸ್ಥೆ 'ಬಸುಮತಿ ಸಾಹಿತ್ಯ ಮಂದಿರ'ದ ಸ್ಥಾಪಕರೂ, ಮಾಲಿಕರೂ ಆಗಿದ್ದ ಶ್ರೀ ಉಪೇಂದ್ರನಾಥ ಮುಖ್ಯೋಪಾಧ್ಯಾಯರ (೧೮೬೮-೧೯೧೯) ಸಹಧರ್ಮಿಣಿಯಾಗಿದ್ದರು. ಉಪೇಂದ್ರನಾಥರು ಶ್ರೀರಾಮಕೃಷ್ಣರ ಗೃಹಸ್ಥ ಶಿಷ್ಯರಾಗಿದ್ದರು. ತಮ್ಮ ಬಾಲ್ಯವನ್ನು ಅತ್ಯಂತ ಬಡತನದಲ್ಲಿ ಕಳೆದ ಉಪೇಂದ್ರನಾಥರು ಮುಂದೆ ಶ್ರೀರಾಮಕೃಷ್ಣರ ಆಶೀರ್ವಾದದ ಬಲದಿಂದ ಆಗರ್ಭ ಶ್ರೀಮಂತರಾದರು. ಅವರಿಗೆ ಶ್ರೀರಾಮಕೃಷ್ಣರ ನೇರ ಶಿಷ್ಯಂದಿರ ಒಡನಾಟವಿತ್ತು. ಶ್ರೀರಾಮಕೃಷ್ಣರು ಹಾಗೂ ಶ್ರೀಶಾರದಾದೇವಿಯವರು ಅನಾಥೆಯಾಗಿದ್ದ ಭವತಾರಿಣೀದೇವಿಯನ್ನು ತಮ್ಮ ಮಗಳಂತೆಯೇ ಕಂಡರು. ಅವರೇ ಉಪೇಂದ್ರನಾಥನೊಂದಿಗೆ ಅವಳ ವಿವಾಹವನ್ನು ಏರ್ಪಡಿಸಿದರು. ಭವತಾರಿಣೀ ದೇವಿಯ ತಪಸ್ವಿನಿಯಂತಹ ಜೀವನ ಎಲ್ಲರ ಭಕ್ತಿ, ಗೌರವಗಳಿಗೆ ಪಾತ್ರವಾಯಿತು. ಅವರನ್ನು ಶ್ರೀರಾಮಕೃಷ್ಣರ ಭಕ್ತವೃಂದ 'ಬಸುಮತಿ ಮಾ' ಎಂದೇ ಕರೆಯುತ್ತಿತ್ತು. ತೀರ್ಥಯಾತ್ರೆ, ಭಕ್ತಿ-ಸಾಧನೆ ಗಳಿಂದ ಅವರು ತಮ್ಮ ಜೀವನದುದ್ದಕ್ಕೂ ಶ್ರೀರಾಮಕೃಷ್ಣ-ಶ್ರೀಶಾರದಾದೇವಿಯವರ ಚಿಂತನೆಗಳಲ್ಲೇ ಕಾಲಯಾಪನೆ ಮಾಡಿದರು. ಅವರು ಬರೆದ ಸ್ಮೃತಿಲೇಖನ ಅನೇಕ ದೃಷ್ಟಿಗಳಿಂದ ಶ್ರೀಮಾತೆಯವರ ಅಪೂರ್ವ ವ್ಯಕ್ತಿತ್ವವನ್ನು ಚಿತ್ರಿಸುತ್ತದೆ. ಶ್ರೀಮಾತೆಯವರ ದಕ್ಷಿಣೇಶ್ವರದ ದಿನಗಳನ್ನು ಕುರಿತು ಇಲ್ಲಿ ಲಭಿಸುವ ಕೆಲವು ಮಾಹಿತಿಗಳು ಬೇರೆಲ್ಲೂ ಸಿಗುವುದಿಲ್ಲ. 'ಉದ್ಬೋಧನ ಕಾರ್ಯಾಲಯ'ವು ಬಂಗಾಳಿಯಲ್ಲಿ ಪ್ರಕಟಿಸಿದ 'ಮಾಯೇರ್ ಪದಪ್ರಾಂತೇ' ಎಂಬ ನಾಲ್ಕು ಸಂಪುಟಗಳ ಸ್ಮೃತಿಗ್ರಂಥದಿಂದ ಈ ಲೇಖನವನ್ನು ಆರಿಸಲಾಗಿದೆ. ಭವತಾರಿಣೀ ದೇವಿಯ ಈ ಸ್ಮೃತಿಚಿತ್ರವನ್ನು ಕನ್ನಡಕ್ಕೆ ಅನುವಾದಿಸಿ ನೀಡುತ್ತಿದ್ದೇವೆ.

ಅನು : ಸ್ವಾಮಿ ಜ್ಞಾನಯೋಗಾನಂದ

ಝೂಮಾಪುಕುರದಿಂದ ಶ್ರೀರಾಮಕೃಷ್ಣರು ನನ್ನನ್ನು ಕರೆದುಕೊಂಡು ಬಂದಾಗ ನಾನಿನ್ನೂ ಸಣ್ಣ ಮಗು. ಇನ್ನೂ ಮಾತು ಬರುತ್ತಿರಲಿಲ್ಲ; ಮೂಕಿಯಾಗಿದ್ದೆ. ಅದಕ್ಕೇ ನನ್ನ ಹೆಸರು 'ಮೂಕಿ' ಎಂದಾಗಿತ್ತು. ಮಕ್ಕಳಿಗೆ ತಾಯಿಯೆಂದರೆ ಪಂಚ ಪ್ರಾಣ. ಆದರೆ ನನಗೆ ತಾಯಿ ಬದಲಾಗಿದ್ದರಿಂದ ಯಾವುದೇ ಮಾನಸಿಕ ಏರು ಪೇರು ಉಂಟಾದದ್ದು ನನ್ನ ಅರಿವಿಗೆ ಬರಲಿಲ್ಲ. ಝೂಮಾಪುಕುರದಿಂದ ನನ್ನ ತಾಯಿಯಿಂದ ನಾನು ಏನನ್ನೂ ಪಡೆಯುತ್ತಿದ್ದೆನೋ, ಅದಕ್ಕಿಂತ ಅತಿ ಹೆಚ್ಚಿನದನ್ನು ನಾನು ಈ ತಾಯಿಯಿಂದ (ಶ್ರೀಮಾತೆಯವರಿಂದ) ಪಡೆದೆ. ಶ್ರೀರಾಮಕೃಷ್ಣರು ಪ್ರೀತಿಯಿಂದ ನನಗೆ ಅವರಿದ್ದ ದೇವಾಲಯದ ಜಗನ್ಮಾತೆಯ ಹೆಸರನ್ನು ಇಟ್ಟು ನಾಮಕರಣ ಮಾಡಿದರು– 'ಭವತಾರಿಣಿ' ಅಂತ. ಅದನ್ನು ಶ್ರೀಮಾತೆ ಸಣ್ಣದಾಗಿಸಿ 'ಭವಿ' ಅಂತಲೋ, ಕೆಲವೊಮ್ಮೆ 'ಭವಸುಂದರಿ' ಅಂತಲೋ ಕರೆಯುತ್ತಿದ್ದರು. ಝೂಮಾಪುಕುರದ ಒಬ್ಬಾಕೆ ತಾಯಿ ನನ್ನನ್ನು ಎಸೆದು ಬಿಟ್ಟಿದ್ದರು ಅಂತ ನನಗೆ ನೆನಪಾಗುತ್ತಲೇ ಇರಲಿಲ್ಲ.

ದಕ್ಷಿಣೇಶ್ವರದಲ್ಲಿ ನಾನು ತುಂಬಾ ಕೆಲಸಗಳನ್ನು ಮಾಡುತ್ತಿದ್ದೆ. ಇಲ್ಲ, ಶ್ರೀಮಾತೆಯವರೇ ಏನೇನೋ ಕೆಲಸಗಳನ್ನು ಕೊಡುತ್ತಿದ್ದರು. ಜೊತೆಗೆ, ''ಹೋಗು ಭವಿ, ಹೂ ಕಿತ್ತುಕೊಂಡು ಬಾ; ದೇವರಪೂಜೆಯ ಪಾತ್ರೆಗಳನ್ನು ಹಂಸಪುಕುರದ ಕೊಳದಲ್ಲಿ ತೊಳೆದುಕೊಂಡು ಬಾ. ಬಟ್ಟೆಗಳನ್ನು ಬಕುಲತಲಾ ಸ್ನಾನಘಟ್ಟದಲ್ಲಿ ಒಗೆದು ತಾ, ಅನಂತರ ಹೊರಗೆ ಒಣಗಲು ಹಾಕು'' ಎನ್ನುತ್ತಿದ್ದರು. ನಾನು ಅದನ್ನೆಲ್ಲ ಮಾಡುತ್ತಿದ್ದೆ. ಅನಂತರ, ''ಹೋಗು, ಠಾಕುರ್ (ಶ್ರೀರಾಮಕೃಷ್ಣರು) ಏನು ಮಾಡುತ್ತಿದ್ದಾರೆ ಅಂತ ನೋಡಿ ಬಾ'' ಎನ್ನುತ್ತಿದ್ದರು. ಒಂದು ದಿನದಲ್ಲಿ ಈ ರೀತಿ ಅವರ ಬಳಿಗೆ ಹಲವು ಬಾರಿ ಕಳುಹಿಸುತ್ತಿದ್ದರು. ನಾನೂ ಹೋಗುತ್ತಿದ್ದೆ. ಶ್ರೀಮಾತೆ ನನ್ನನ್ನು ಹೆಚ್ಚುಹೊತ್ತು ಕುಳಿತುಕೊಳ್ಳಲು ಬಿಡುತ್ತಿರಲಿಲ್ಲ. ಏನಾದರೂ ಸಣ್ಣಪುಟ್ಟ ಕೆಲಸಗಳನ್ನು ಹೇಳುತ್ತಿದ್ದರು.

ಶ್ರೀಮಾತೆ ತುಂಬ ಕೆಲಸ ಕೊಡುತ್ತಿದ್ದರು ಅಂದರೆ ನನ್ನನ್ನು ತುಂಬಾ ದಂಡಿಸುತ್ತಿದ್ದರು ಅಂತ ಅರ್ಥವಲ್ಲ. ಹಾಗೆ ಹೇಳಲಾರೆ. ಅಷ್ಟೇನೂ ಶ್ರಮವಿಲ್ಲದ ಕೆಲಸಗಳನ್ನು ಕೊಡುತ್ತಿದ್ದರು; ಅದರೊಂದಿಗೆ ಒಳ್ಳೆಯ ಮಾತುಗಳನ್ನು ಆಡುತ್ತಿದ್ದರು. ಬೆಳಗ್ಗೆ ಎಂಟರಿಂದ ಒಂಭತ್ತು ಗಂಟೆ ನಡುವೆ ಶ್ರೀಮಾತೆ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಮೊದಮೊದಲು ನಾನು ಹೂ ಕೀಳುವುದು, ಗಂಧ ತೇಯುವುದು, ಗರಿಕೆ ಕೊಯ್ದು

ತರುವುದು ಮೊದಲಾದ ಕೆಲಸಗಳನ್ನು ಮಾಡಬೇಕಿತ್ತು. ಬಿಲ್ವ ಪತ್ರೆ, ತುಳಸೀದಳಗಳು ಇದ್ದೇ ಇರುತ್ತಿದ್ದವು. ಬಿಲ್ವಪತ್ರೆಗಳೆಲ್ಲ ಒಂದೇ ಗಾತ್ರದವು ಆಗಿರಬೇಕು, ಚಿಕ್ಕ ಗಾತ್ರದವು ಕೂಡದು. ಶ್ರೀಮಾತೆಯವರ ಒಪ್ಪ ಓರಣವನ್ನು ನೋಡುವುದೇ ಒಂದು ಆನಂದ. ಅವರು ಎಲ್ಲವನ್ನೂ ಕಲಾತ್ಮಕವಾಗಿ ಜೋಡಿಸಿಟ್ಟರೆ ಅದು ಪೂಜೆ ಮಾಡಲು ಇರಿಸಿದ ಪಂಚಪಾತ್ರೆ* ಯಂತಿರುತ್ತಿತ್ತು. ಗಂಧತೇಯುವಾಗ, ಹೂಗಳನ್ನು ಒಂದೊಂದಾಗಿ ಒರೆಸಿ ಇಡುವುದು ಈ ಕೆಲಸಗಳನ್ನು ಮಾಡುವಾಗ ಶ್ರೀಮಾತೆಯವರ ಕಲಾಪೂರ್ಣತೆ ಅದೆಷ್ಟು ಎಂಬುದನ್ನು ನಾನು ಮಾತಿನ ಮೂಲಕ ವರ್ಣಿಸಲಾರೆ. ಅವರು ಎಷ್ಟೊಂದು ವೇಗವಾಗಿ ಕೆಲಸ ಮಾಡಿ ಮುಗಿಸುತ್ತಿದ್ದರು ಎನ್ನುವುದನ್ನು ಊಹಿಸಲೂ ಸಾಧ್ಯವಾಗದು. ಹಣ್ಣುಗಳನ್ನು ಕತ್ತರಿಸುವುದು, ತಾಂಬೂಲ ಸಿದ್ಧಪಡಿಸಿ ಇಡುವುದು ಅವರಲ್ಲಿ ಒಂದು ವಿಶೇಷ ಕಲೆಯಾಗಿತ್ತು. ಅದನ್ನೆಲ್ಲ ನೋಡಿದವರು ಅವಾಕ್ಕಾಗಿ ನಿಂತು ನೋಡುತ್ತಿದ್ದರು. ಆಗ ನನಗೆ ಇದೊಂದೂ ಅರ್ಥವಾಗುತ್ತಿರಲಿಲ್ಲ. ಶ್ರೀಮಾತೆ ನನಗೆ ಪ್ರತಿಯೊಂದನ್ನು ಕೈ ಹಿಡಿದು ತೋರಿಸಿ ಕಲಿಸುತ್ತಿದ್ದರು. ನಹಬತ್‌ಖಾನೆ ತೀರ ಸಣ್ಣ ಕೋಣೆಯಾಗಿತ್ತು; ಅದರಲ್ಲಿ ಅವರ ಇಡೀ ಸಂಸಾರ ನಡೆಯಬೇಕು. ಅದೊಂದು ಅಪೂರ್ವವಾದ, ಪರಿಪೂರ್ಣತೆಯಿಂದ ಕೂಡಿದ, ಕಲಾತ್ಮಕವಾದ ದಿವ್ಯಧಾಮವೆಂಬಂತಿತ್ತು. ಅದು ದೇವಾಲಯವನ್ನೇ ಮೀರಿಸುವಂತಿತ್ತು.

ಶ್ರೀಮಾತೆಯವರು ಪೂಜೆ ಮಾಡಲು ಕುಳಿತುಕೊಂಡಾಗ ಅವರನ್ನು ಗುರುತಿಸುವುದು ಕಷ್ಟವಾಗುತ್ತಿತ್ತು. ಅವರು ಹೆಚ್ಚು ಹೊತ್ತು ಪೂಜೆಗೆ ಕುಳಿತುಕೊಳ್ಳುತ್ತಿರಲಿಲ್ಲ; ಆದರೆ ಇಡೀ ಸನ್ನಿವೇಶವೇ ಬದಲಾಗಿ ಬಿಡುತ್ತಿತ್ತು. ಅಂಥ ವೇಳೆ ಅವರ ಸಮೀಪದಲ್ಲಿದ್ದರೆ ದೇಹ ನಡುಗುತ್ತಿತ್ತು. ಪೂಜೆ ಮುಗಿದ ನಂತರ ಅವರು ಕರೆಯುತ್ತಿದ್ದರು, ''ಭವಿ, ಎಲ್ಲಿಗೆ ಹೋದೆ? ಬಾ, ಇಲ್ಲಿ ತಲೆಬಾಗಿ ನಮಸ್ಕಾರ ಮಾಡು. ಹೇಳು, 'ಠಾಕುರ್', ನನ್ನನ್ನು ನಿನ್ನವರನ್ನಾಗಿ ಮಾಡು. ನನ್ನ ಕೈಹಿಡಿದುಕೊಂಡಿರು' ಅಂತ. ತಿಳಿಯಿತೇ? (ಪೂಜೆಯ ಆಸನದಲ್ಲಿದ್ದ ದೇವರ ಚಿತ್ರವನ್ನು ತೋರಿಸಿ) ಠಾಕೂರರನ್ನು ಚೆನ್ನಾಗಿ ನೋಡು'' ಎನ್ನುತ್ತಿದ್ದರು. ಆ ಚಿತ್ರ ನಮ್ಮ ಠಾಕೂರರ (ಶ್ರೀರಾಮಕೃಷ್ಣರ) ಚಿತ್ರವಾಗಿತ್ತು. ಮೊದಮೊದಲು ನಾನು ಹೇಳುತ್ತಿದ್ದೆ, ''ಅವರು ನಮ್ಮ ಠಾಕೂರರಲ್ಲವೆ? ಅವರು ದೇವತಾಮೂರ್ತಿ ಠಾಕೂರ್ ಆದದ್ದು ಯಾವಾಗ?'' ಅಂತ. ಆಗ ಶ್ರೀಮಾತೆ ನಗುತ್ತ, ''ಅದನ್ನು ನೀನು ಈಗ ತಿಳಿದುಕೊಳ್ಳುವ ಅಗತ್ಯವಿಲ್ಲ. ನೀನು ದೊಡ್ಡವಳಾದಾಗ ನಿನಗದು ಅರ್ಥವಾಗುವುದು. ಈಗ ನೀನು ಏನನ್ನು ನೋಡುತ್ತಿದ್ದೀಯೋ ಅದೇರೀತಿ ನೋಡು; ನಾನು ಏನು ಹೇಳುತ್ತೇನೋ ಅದೇರೀತಿ ಮಾಡು. ಬೆಳಗ್ಗೆ ಸಂಜೆ ಎರಡು ಹೊತ್ತು ಎರಡು ಬಾರಿ ಪ್ರಣಾಮ ಮಾಡು, ತಿಳಿಯಿತೆ? ಬೆಳಿಗ್ಗೆ ಎದ್ದ ನಂತರ ಅವರ ಕೋಣೆಗೆ ಹೋಗಿ, ಅವರ ಪಾದ ಮುಟ್ಟಿ ನಮಸ್ಕಾರ ಮಾಡು'' ಎಂದರು.

* * *

ಶ್ರೀರಾಮಕೃಷ್ಣರು ರಾತ್ರಿ ಎಷ್ಟು ಹೊತ್ತು ನಿದ್ರೆ ಮಾಡುತ್ತಿದ್ದರೋ ಅವರಿಗೇ ಗೊತ್ತು. ಉಳಿದವರು ತುಸು ನಿದ್ರೆ ಮಾಡುತ್ತಿದ್ದರೆ ಅದನ್ನು ಅವರು ಸಹಿಸುತ್ತಿರಲಿಲ್ಲ. ತೆಳ್ಳನೆಯ ಚಪ್ಪಲಿ ಧರಿಸಿ ಚಟಪಟ ಸದ್ದುಮಾಡುತ್ತ ನಹಬತ್‌ಗೆ ಬಂದು ಬಿದಿರ ಪಟ್ಟಿಯ ಹಿಂದೆ ನಿಂತು, ''ಓ ಲಕ್ಷ್ಮಿ, ಓ ಭವತಾರಿಣಿ, ಎದ್ದೇಳಿ. ಎಷ್ಟು ಹೊತ್ತು ನಿದ್ದೆ ಮಾಡುತ್ತೀರಿ?'' ಎಂದು ಕರೆಯುತ್ತಿದ್ದರು. ಅವರು ನಮ್ಮ ಹೆಸರನ್ನೇನೋ ಕರೆಯುತ್ತಿದ್ದರು. ಆದರೆ ಅದು ನಿಜವಾಗಿ ಶ್ರೀಮಾತೆಯವರನ್ನು ಕುರಿತಾಗಿತ್ತು. ಶ್ರೀಮಾತೆಯವರು ಅದಕ್ಕೂ ಮೊದಲೇ ಎದ್ದು ಜಪಮಾಡಲು ಕುಳಿತಿರುತ್ತಿದ್ದರು; ಅವರು ಗಂಟಲು ಸರಿ ಮಾಡಿಕೊಂಡು, ''ಎದ್ದುಬಿಟ್ಟಿದ್ದೇನೆ. ನೀವು ಚಿಂತೆ ಮಾಡಬೇಡಿ'' ಎನ್ನುತ್ತಿದ್ದರು.

ಶ್ರೀರಾಮಕೃಷ್ಣರು ಪಂಚವಟಿಯತ್ತ ಹೋಗುತ್ತಿದ್ದರು. ಆಗ ಶ್ರೀಮಾತೆ ನನಗೆ, ''ನೀನು ಈಗ ಏಳಬೇಕಾಗಿಲ್ಲ. ಮಲಗಿಬಿಡು'' ಎನ್ನುತ್ತಿದ್ದರು. ನಾನು ಹೊರಳಿ ಮಲಗಿ ನಿದ್ದೆಮಾಡುತ್ತಿದ್ದೆ. ಕೆಲವೊಂದು ದಿನಗಳಲ್ಲಿ ನನಗೆ ನಿದ್ದೆ ಬರದಿದ್ದಾಗ ನಾನು ನೋಡುತ್ತಿದ್ದೆ, ಶ್ರೀಮಾತೆ ಕತ್ತಲಲ್ಲಿ ಒಬ್ಬಂಟಿಯಾಗಿ ಬಕುಲತಲಾ ಸ್ನಾನಘಟ್ಟದ ಕಡೆಗೆ ಹೋಗುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಮರಳಿ ಬಂದು ಬಟ್ಟೆಬರೆ ಒಣಗಿಸಲು ಹಾಕಿ, ಪಕ್ಕದಲ್ಲಿದ್ದ ಠಾಕೂರರ ಆಸನದಿಂದ ಅವರನ್ನು ಎಬ್ಬಿಸಿ (ಅಂದರೆ ಚಿತ್ರಪಟವನ್ನು ಕೈಗೆತ್ತಿಕೊಂಡು) ಮುಖ ಒರೆಸಿ ಅಲ್ಲೇ ಕುಳ್ಳಿರಿಸುತ್ತಿದ್ದರು. ಚಿತ್ರದ ಬಳಿ ಸುಮ್ಮನೆ ಕುಳಿತುಕೊಂಡು ತಲ್ಲೀನರಾಗಿಬಿಡುತ್ತಿದ್ದರು. ಅಲ್ಲಿ ಬೇರೆ ಯಾರೋ ಕುಳಿತಿರುವಂತೆ ನನಗೆ ಭಾಸವಾಗುತ್ತಿತ್ತು. ಲಕ್ಷ್ಮೀದೀದಿ ಅಥವಾ ಬೇರೆ ಯಾರಾದರೂ ಭಕ್ತೆಯರು ಇರುತ್ತಿದ್ದರೆ ಶ್ರೀಮಾತೆ ಬೆಳಿಗ್ಗೆ ಬೇಗನೆ ಎದ್ದು ನಮ್ಮನ್ನು ಎಬ್ಬಿಸಿ ಬಿಡುತ್ತಿದ್ದರು. ''ಈಗ ಎದ್ದೇಳು, ಹಂಸಪುಕುರಕ್ಕೆ ಹೋಗಿ ಕೈಕಾಲು ಮುಖ ತೊಳೆದು ಬಾ '' ಎನ್ನುತ್ತಿದ್ದರು. ಅಷ್ಟರಲ್ಲಿ ಶ್ರೀಮಾತೆ ಶ್ರೀರಾಮಕೃಷ್ಣರ ಕೋಣೆಗೆ ಹೋಗಿ ಅವರ ಹಾಸಿಗೆ ಇತ್ಯಾದಿ ಮಡಚಿ ಇಟ್ಟು ಬಿಡುತ್ತಿದ್ದರು. ಒಂದೊಂದು ಸಲ ಶ್ರೀರಾಮಕೃಷ್ಣರು ಭವತಾರಿಣೀ ಮಂದಿರದಲ್ಲಿ ಇರುತ್ತಿದ್ದರು.

ಶ್ರೀಮಾತೆ ಪ್ರತಿಯೊಂದು ಕೆಲಸವನ್ನೂ ವೇಗವಾಗಿ ಮಾಡುತ್ತಿದ್ದರು. ಆದರೆ ಕೆಲಸ ಅಷ್ಟೇ ಪರಿಪೂರ್ಣತೆಯಿಂದ ಕೂಡಿರುತ್ತಿತ್ತು. ಹೇಗೆಹೇಗೋ ಅಡ್ಡಾದಿಡ್ಡಿ ಕೆಲಸ ಮಾಡುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಮೊದಮೊದಲು ನಾನು

---

*ಬಂಗಾಳದಲ್ಲಿ ಪೂಜೆ ಮಾಡುವಾಗ ಹೂ, ಗಂಧ ಇತ್ಯಾದಿಗಳನ್ನೆಲ್ಲ ಒಂದು ದೊಡ್ಡ ತಟ್ಟೆಯಲ್ಲಿ ಅಂದವಾಗಿ ಜೋಡಿಸಿಟ್ಟಿರುತ್ತಾರೆ. ಅದಕ್ಕೆ 'ಪಂಚಪಾತ್ರೆ' ಎನ್ನುತ್ತಾರೆ.

ತುಂಬಾ ಅಡ್ಡಾದಿಡ್ಡಿ ಕೆಲಸ ಮಾಡುತ್ತಿದ್ದೆ. ಆಗ ಶ್ರೀಮಾತೆ ನನ್ನ ಕೈಹಿಡಿದು ಕಲಿಸುತ್ತಿದ್ದರು. ಅಲ್ಲೇ ನಿಂತು ನೋಡುತ್ತಾ ನಾನು ಕೆಲಸ ಮಾಡುವಂತೆ ಹೇಳುತ್ತಿದ್ದರು. ಅವರೇ ಹೇಳುತ್ತಿದ್ದರು, ''ನೋಡು ಭವಿ, ನೀನು ಬೇರೆ ಏನು ಪೂಜೆ ಮಾಡುತ್ತೀಯ? ಎಲ್ಲಾ ಕೆಲಸವೂ ಪೂಜೆಯೇ. ನೀನು ಈ ಕ್ಷಣದಿಂದಲೇ ಇದನ್ನು ಮನಸ್ಸಿನಲ್ಲಿಟ್ಟುಕೋ. ಹೆಣ್ಣುಮಕ್ಕಳಿಗೆ ಈ ಕೆಲಸಗಳೇ ಪೂಜೆ, ತಿಳಿಯಿತೆ?'' ಎನ್ನುತ್ತಿದ್ದರು.

ಯಾವುದೇ ಕೆಲಸವಾಗಿರಲಿ, ಅದನ್ನು ಮಾಡುವ ಮೊದಲು ಕೈಗೆ ಗಂಗಾಜಲ ಚಿಮುಕಿಸಿಕೊಳ್ಳಲು ಹೇಳುತ್ತಿದ್ದರು. ಸ್ವತಃ ತಾವೂ ಹಾಗೆ ಮಾಡುತ್ತಿದ್ದರು. ಜೊತೆಗೆ ನಮ್ಮ ತಲೆಯ ಮೇಲೆ ಕೂಡ ಚಿಮುಕಿಸುತ್ತಿದ್ದರು. ಗಂಗಾಜಲವನ್ನು ಅವರು 'ಬ್ರಹ್ಮವಾರಿ' ಎನ್ನುತ್ತಿದ್ದರು. ಅದು ನಮಗೆ ಬಾಯಿಪಾಠವಾಗಿ ಹೋಗಿತ್ತು. ಆಗಿನಿಂದ ಇಂದಿನತನಕವೂ ಹಾಗೆ – ಏನಾದರೂ ಕೆಲಸ ಮಾಡಬೇಕೆನಿಸಿದರೂ 'ಬ್ರಹ್ಮವಾರಿ' ಬೇಕಾಗುವುದು. ಶ್ರೀಮಾತೆಗೆ ಆಚಾರ ವಿಚಾರಗಳಲ್ಲಿ ಅಂತಹ ವ್ಯಸನವೇನೂ ಇರಲಿಲ್ಲ. ನಮಗೆ ಆಗಾಗ ಬಟ್ಟೆ ಬರೆ ಬದಲಾಯಿಸುವುದಕ್ಕೂ ಅವರು ಹೇಳುತ್ತಿರಲಿಲ್ಲ. ನಾವಂತೂ ಎಳೆಯ ವಯಸ್ಸಿನಿಂದಲೇ ಸೀರೆ ಉಡುತ್ತಿದ್ದೆವು. ನನಗೆ ಶ್ರೀಮಾತೆಯವರೇ ತಲೆ ಬಾಚಿ ಕೊಡುತ್ತಿದ್ದರು. ಎರಡು ಹೊತ್ತೂ ಅವರು ಶ್ರೀರಾಮಕೃಷ್ಣರ ಬಳಿಗೆ ಏನಾದರೂ ಕೆಲಸಕ್ಕಾಗಿ ಕಳುಹಿಸುತ್ತಿದ್ದರು.

* * *

ಪೀತಾಂಬರ ಭಂಡಾರಿಯ ಮಗಳು ಮತ್ತು ದಕ್ಷಿಣೇಶ್ವರ ಗ್ರಾಮದ ನನ್ನದೇ ಪ್ರಾಯದ ಮೂವರು ಜೊತೆಗಾತಿಯರು ಪ್ರತಿದಿನ ಅಲ್ಲಿಗೆ ಬರುತ್ತಿದ್ದರು. ಶ್ರೀಮಾತೆ ಮತ್ತು ಶ್ರೀರಾಮಕೃಷ್ಣರು ಅವರನ್ನೂ ತುಂಬ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರೊಂದಿಗೆ ನಾನು ಎಷ್ಟೊಂದು ಆಟವಾಡುತ್ತಿದ್ದೆ – ಓಡಾಡುವುದು, ಮರದ ರೆಂಬೆರೆಂಬೆಗಳಲ್ಲಿ ಕಣ್ಣಮುಚ್ಚಾಲೆ ಆಟ, ಹಂಸಪುಕುರದಲ್ಲಿ ಈಜಾಡುವುದು – ಹೀಗೆ ಏನೇನೋ! ಅದರ ನಡುವೆ ನಾನು ಶ್ರೀಮಾತೆಯವರ ಒಳಗೆ ಓಡಿ ಬಂದು, ಅವರನ್ನು ನೋಡಿಕೊಂಡು ಹೋಗುತ್ತಿದ್ದೆ. ಒಂದು ದಿನ ಸ್ವಾರಸ್ಯಕರವಾದ ಸಂಗತಿ ನಡೆಯಿತು. ಝಾಮಾಪುಕುರದ ಮನೆಯಿಂದ ಕೆಲವು ಮಂದಿ ಬಂದರು. ಅವರು ಜಯರಾಮಬಾಟಿಯಿಂದ ಗಂಗಾಸ್ನಾನ ಮಾಡಲು ಕಲ್ಕತ್ತೆಗೆ ಬಂದಿದ್ದರು. ಅದರೊಂದಿಗೆ ಅವರು ದಕ್ಷಿಣೇಶ್ವರದಲ್ಲಿರುವ ಅವರ ಶಾರು (ಶ್ರೀಮಾತೆ ಶಾರದಾದೇವಿ) ಹಾಗೂ ಹುಚ್ಚು ಅಳಿಯ (ಶ್ರೀರಾಮಕೃಷ್ಣರು)ನನ್ನು ನೋಡಲು ಬಂದಿದ್ದರು. ಶಾರು ತನ್ನ ಸಂಸಾರವನ್ನು ಹೇಗೆ ನಡೆಸುತ್ತಿದ್ದಾಳೆ ಎಂಬುದನ್ನೂ ಅವರು ನೋಡಬೇಕೆಂದಿದ್ದರು. ಅವರು ಸುಮಾರು ಆರು ಮಂದಿ ಇದ್ದರು. ಅವರು ನೇರ ಶ್ರೀರಾಮಕೃಷ್ಣರ ಕೋಣೆಗೆ, ಅವರನ್ನು ಕಂಡು ಅಲ್ಲಿಂದ ನಹಬತ್‌ಗೆ ಬಂದಿದ್ದರು. ಏನೇನೋ ಮಾತುಕತೆ ನಡೆದವು. ಹಳೆಯ ಗ್ರಾಮೀಣ ಮಾತುಕತೆಗಳು. ನಾನು ಅಲ್ಲೇ ಒಂದೆಡೆ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದೆ. ಅವರ ನಡುವೆ ಒಬ್ಬಾಕೆ ಶ್ರೀಮಾತೆಯವರ ವಯಸ್ಸಿನವಳು ಹೇಳತೊಡಗಿದಳು, ''ಏನಮ್ಮಾ ಚೆಂಡುಹೂವೆ*, ನನ್ನ ನೆನಪಿದೆಯೇನೆ? ಅಥವಾ ಭೋಲಾನಾಥನನ್ನು ('ಮರೆತುಬಿಡುವವನು' – ಶಿವ) ಗಂಡನನ್ನಾಗಿ ಪಡೆದು ಈ 'ದಾಸವಾಳ'ವನ್ನು ಮರೆತುಬಿಟ್ಟೆಯಾ?'' ಹೀಗೆನ್ನುತ್ತ ಆಕೆ ಶ್ರೀಮಾತೆಯವರ ಗಲ್ಲವನ್ನು ತಟ್ಟಿ ಕಿಲಕಿಲನೆ ನಗತೊಡಗಿದಳು. ಆಗ ಪಕ್ಕದಲ್ಲಿದ್ದ ಇನ್ನೊಬ್ಬಾಕೆ ಕೇಳಿದಳು, ''ಅದೇನಮ್ಮಾ? ಏನಂತ ಬಿಡಿಸಿ ಹೇಳು, ನನಗೂ ಗೊತ್ತಾಗಲಿ.'' ಶ್ರೀಮಾತೆ ನಾಚಿಕೆ ಸ್ವಭಾವದವರು, ಸುಮ್ಮನೆ ನಸುನಗೆ ಬೀರಿದರು. ಆಗ ಇನ್ನೊಬ್ಬಾಕೆ ಹೇಳಿದಳು, ''ಮಳೆಗಾಲದ ಒಂದುದಿನ ನಾವು ಬಾಂಡೂಜಿಪುಕುರಕ್ಕೆ ಸ್ನಾನ ಮಾಡಲು ಹೋಗಿ, ಕಾಲು ಜಾರಿತು; ಆದರೆ ನಾವಿಬ್ಬರೂ ಮುಳುಗದಂತೆ ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದೆವು. ಪಕ್ಕದಲ್ಲಿದ್ದ ವೃದ್ಧ ಹೆಂಗಸು ನಮ್ಮನ್ನು ಮೇಲಕ್ಕೆ ಎಳೆದುಹಾಕಿ ರಕ್ಷಿಸಿದಳು. ನಾವು ಇನ್ನೂ ಒಬ್ಬರನ್ನೊಬ್ಬರು ಹಿಡಿದುಕೊಂಡಿದ್ದೆವು. ಅದನ್ನು ನೋಡಿದ ವೃದ್ಧ ಹೆಂಗಸು, 'ನೀವಿಬ್ಬರೂ ಗೆಳತಿಯರಲ್ಲವೇ? ನಿಮಗೆ ನಾನು ಬೇರೆ ಹೆಸರು ಕೊಡುತ್ತೇನೆ : 'ಚೆಂಡು ಹೂ' ಮತ್ತೆ 'ದಾಸವಾಳ' ತಿಳಿಯಿತೆ?' ಎಂದಳು. ನಮಗೆ ಭಾರೀ ಆನಂದ. ಅಂದಿನಿಂದ ಶಾರು ಹೆಸರು 'ಚೆಂಡು ಹೂ' ಅಂತ, ನನ್ನ ಹೆಸರು 'ದಾಸವಾಳ' ಅಂತ.''



ನಹಬತ್, ದಕ್ಷಿಣೇಶ್ವರ

---

*ಬಂಗಾಳಿಯಲ್ಲಿ 'ಗಾಂದಾ ಫೂಲ್' (ಚೆಂಡು ಹೂ) ಎಂದು. ದಾಸವಾಳಕ್ಕೆ 'ಜವಾ' ಎನ್ನುತ್ತಾರೆ.

ಪ್ರತಿದಿನವೂ ಸಾಯಂಕಾಲದ ಹೊತ್ತು ನನಗೆ ಕೆಲವು ಕೆಲಸಗಳನ್ನು ಮಾಡಬೇಕಾಗುತ್ತಿತ್ತು. ನನ್ನನ್ನು ಠಾಕೂರರೇ ತಮ್ಮೊಂದಿಗೆ ಕರೆದುಕೊಂಡುಹೋಗಿ ಅದನ್ನು ಕಲಿಸಿಕೊಟ್ಟಿದ್ದರು. ಗಾಜಿಪೀರರ ದೇಗುಲದಲ್ಲಿ ಸಾಯಂಕಾಲ ದೀಪ ಹಚ್ಚಿ ಇಡುವುದು, ಅನಂತರ ನಹಬತ್‌ನಲ್ಲಿ ಶ್ರೀಮಾತೆಯವರು ಪೂಜೆಮಾಡುತ್ತಿದ್ದ ಸ್ಥಳದಲ್ಲಿ ಧೂಪ ಹಾಕಿ ಇಡುವುದು ಇತ್ಯಾದಿ. ಅಲ್ಲಿ ಶ್ರೀಮಾತೆ ತಪ್ಪದೆ ದಿನವೂ ಧ್ಯಾನ ಮಾಡಲು ಕುಳಿತು ಕೊಳ್ಳುತ್ತಿದ್ದರು. ಸಾಯಂಕಾಲ ನಹಬತ್‌ನಲ್ಲಿ ಯಾರಾದರೂ ತಂಗುವುದಿದ್ದರೆ, ಅವರೂ ಶ್ರೀಮಾತೆಯವರ ಸುತ್ತ ಕುಳಿತು ಕೊಳ್ಳುತ್ತಿದ್ದರು. ನಾನು ಶ್ರೀಮಾತೆಯವರ ಸಮೀಪದಲ್ಲಿ ಅವರ ಮೈಗೆ ತಗಲುವಂತೆ ಕುಳಿತುಕೊಳ್ಳುತ್ತಿದ್ದೆ. ಶ್ರೀರಾಮಕೃಷ್ಣರ ಕಡೆಗೆ (ಚಿತ್ರಪಟ) ನೋಡುವುದಕ್ಕಿಂತ ಹೆಚ್ಚಾಗಿ ನಾನು ಶ್ರೀಮಾತೆ ಯವರ ಕಡೆಗೇ ನೋಡುತ್ತಿದ್ದೆ. ಶ್ರೀಮಾತೆಯವರು ಆಗ ಅದ್ಭುತ ಮೂರ್ತಿಯಾಗಿ ಕಂಡುಬರುತ್ತಿದ್ದರು. ಅತ್ತ ವಿವಿಧ ದೇಗುಲ ಗಳಲ್ಲಿ ಆರತಿ ನಡೆಯುತ್ತಿತ್ತು. ಶ್ರೀರಾಮಕೃಷ್ಣರ ಕೋಣೆಯಲ್ಲಿ ಹರಿನಾಮ ಸಂಕೀರ್ತನೆ, ಗಂಗಾನದಿಯ ವಕ್ಷಸ್ಥಳದಲ್ಲಿ ದೀಪ ಮಾಲೆಯ ಬೆಳಕಿನ ಪ್ರತಿಫಲನ – ಒಟ್ಟಿನಲ್ಲಿ ಒಂದು ದಿವ್ಯ ಸನ್ನಿವೇಶವದು. ಆಗ ಯಾರೂ ಸಾಧಾರಣ ಮನುಷ್ಯನಾಗಿ ಉಳಿಯಲಾರ , ಎಲ್ಲವೂ ಮರೆತುಹೋಗುವುದು. ಇದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿತ್ತು; ಇದನ್ನು ಮರೆಯಲಾಗದು. ಬಾಲ್ಯದ ಎಳೆಯ ಮನಸ್ಸಿನ ಅನೇಕ ಸಂಗತಿ ಗಳು ವಿಸ್ಮೃತಿಯ ಗುಹೆಯಲ್ಲಿ ಮುಳುಗಿಹೋಗಿವೆ; ಆದರೆ ಆ ಛಂದೋಬದ್ಧವಾದ, ಸಂಧ್ಯಾಕಾಲದ ಆವೇಶಭರಿತವಾದ ಛಾಯೆ ಮಾತ್ರ ಇಂದಿಗೂ ಅಷ್ಟೊಂದು ಅಳಿಸಿಹೋಗಿಲ್ಲ.

ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ಬೆಳಿಗ್ಗೆ –ಸಾಯಂಕಾಲ ಬೇರೆಲ್ಲ ಕೆಲಸಗಳನ್ನೂ ಬಿಟ್ಟು ಭಗವಂತನ ನಾಮಜಪ ಮಾಡು'' ಅಂತ. ಸ್ವತಃ ತಾವೇ ಚಪ್ಪಾಳೆ ತಟ್ಟುತ್ತ ನಾಮಜಪ ಮಾಡಿಸು ತ್ತಿದ್ದರು. ''ದನಿಯೆತ್ತಿ ಜಪಿಸು. ಒಳಗಿನ ಕೆಡುಕೆಲ್ಲ ಹೊರಗೆ ಬಂದುಬಿಡುವುದು. ದೇಹ, ಮನಸ್ಸು ಪವಿತ್ರವಾಗುವುದು'' ಎನ್ನುತ್ತಿದ್ದರು. ಇಂದು ಅವರು ಹಾಗೆ ಮಾಡಲು ನನ್ನ ಬಳಿ ಇಲ್ಲ ; ಆದರೆ ಇಂದೂ ಸಾಯಂಕಾಲವಾದರೆ ಯಾರೋ ನನ್ನ ಸ್ವರದೊಂದಿಗೆ ಸ್ವರ ಸೇರಿಸುತ್ತ ಹರಿನಾಮ ಹಾಗೂ ರಾಮನಾಮ ಜಪಿಸುತ್ತಿರುವುದನ್ನು ನಾನು ಕೇಳುತ್ತೇನೆ. ಇದು ಅವರದೇ ಸ್ವರ– ಕೊಳಲಿನ ಸ್ವರದಂತೆ ಶ್ರುತಿಬದ್ಧವಾದ ಸ್ವರ.

ಸಾಯಂಕಾಲದ ಕಾರ್ಯಕಲಾಪಗಳೆಲ್ಲವೂ ಮುಗಿದ ನಂತರ ನಾನು ಶ್ರೀರಾಮಕೃಷ್ಣರ ಕೋಣೆಗೆ ಹೋಗುತ್ತಿದ್ದೆ. ಆಗ ಅವರು ಬಹುತೇಕ ಒಬ್ಬಂಟಿಯಾಗಿ ಕುಳಿತು ಏನೋ ಆಲೋಚನೆಯಲ್ಲಿ ಮುಳುಗಿರುತ್ತಿದ್ದರು. ಹೆಚ್ಚು ಮಾತನಾಡುತ್ತಿರಲಿಲ್ಲ. ಇದನ್ನು ಮಾತ್ರ ಹೇಳುತ್ತಿದ್ದರು : ''ನೋಡು, ಅಲ್ಲಿ ಆ ನೀರಿಡುವ ಪೀಠದ ಮೇಲೆ ಪ್ರಸಾದವಿದೆ. ಅದನ್ನು ನಹಬತ್‌ಗೆ ತೆಗೆದುಕೊಂಡು ಹೋಗು. ನಿನ್ನ ಪಾಲಿನದೂ ಅಲ್ಲಿದೆ. ಅದನ್ನು ತಿನ್ನು, ಬಾ.'' ಪ್ರಸಾದದ ತಟ್ಟೆಯನ್ನು ನಾನು ನಹಬತ್‌ಗೆ ತೆಗೆದುಕೊಂಡು ಹೋಗಿ ಶ್ರೀಮಾತೆಯವರಿಗೆ ಕೊಟ್ಟು, ನನ್ನ ಪಾಲಿನದನ್ನು ತಿಂದು, ಶ್ರೀರಾಮಕೃಷ್ಣರ ಸಣ್ಣ ಮಂಚದ ಮೇಲೆ ಮಲಗಿ ನಿದ್ದೆ ಮಾಡುತ್ತಿದ್ದೆ. ಹಲವಾರು ದಿನ ರಾತ್ರಿಹೊತ್ತು ಶ್ರೀಮಾತೆ ನನ್ನನ್ನು ನಹಬತ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ನನಗೆ ನಿದ್ದೆ ಕೆಡುತ್ತಿತ್ತು. ಶ್ರೀಮಾತೆ, ನಾನು ಹಾಗೂ ಬೇರೆ ಯಾರಾದರೂ ಅಲ್ಲಿದ್ದರೆ ಅವರು – ರಾತ್ರಿಯ ಊಟ ಮಾಡುತ್ತಿದ್ದೆವು. ಅನಂತರ ನಾನು ಶ್ರೀಮಾತೆಯವರ ಮಡಿಲ ಬಳಿ ಮಲಗಿ ಕಥೆ ಹೇಳಲು ಒತ್ತಾಯಿಸುತ್ತಿದ್ದೆ. ಶ್ರೀಮಾತೆ ಕೇಳುತ್ತಿದ್ದರು, ''ಇವತ್ತು ಅವರು (ಶ್ರೀರಾಮಕೃಷ್ಣರು) ಏನು ಹೇಳಿದ್ದಾರೆ ನೆನಪಿದೆಯೆ? ಹೇಳು ನೋಡೋಣ, ನಾನು ಕೇಳುತ್ತೇನೆ'' ಅದನ್ನೆಲ್ಲ ಅವರು ಆಲಿಸುತ್ತಿದ್ದರು. ಅವರೂ ಅನೇಕ ಸಂಗತಿಗಳನ್ನು ಹೇಳುತ್ತಿದ್ದರು.

ಒಂದು ದಿನ ಮಾತುಕತೆ ನಡುವೆ ನಾನು ಶ್ರೀಮಾತೆಗೆ ಹೇಳಿದೆ: ''ನಿಮ್ಮ ಹೆಸರು ಚೆಂಡುಹೂ, ನಿಮ್ಮ ಗೆಳತಿಯ ಹೆಸರು ದಾಸವಾಳ, ಅಲ್ಲವೆ? ಅಂದು ಜಯರಾಮಬಾಟಿಯಿಂದ ಬಂದಿದ್ದವರೂ ಹಾಗೆಂದರು. ನಾನು ನಿಮ್ಮನ್ನು 'ಚೆಂಡುಹೂ ಅಕ್ಕ' (ಗಾಂದಾಫೂಲ್ ದೀದಿ) ಅಂತ ಕರೆದರೆ ಹೇಗೆ?'' ಅದಕ್ಕೆ ಅವರು, ''ಯಾಕಮ್ಮಾ, 'ಅಮ್ಮ' ಅಂತ ಕರೆದರೆ ಚೆನ್ನಾಗಿರಲ್ವಾ?'' ಎಂದರು. ''ಹಾಗೇನೂ ಇಲ್ಲ; ಆದರೂ ನಾನು 'ಚೆಂಡುಹೂ ಅಕ್ಕ' ಎಂದೇ ಕರೆಯುತ್ತೇನೆ ಎಂದೆ. ಅದಕ್ಕೆ ಶ್ರೀಮಾತೆ ಬೇಡವೆನ್ನಲಿಲ್ಲ. ಅಂದರೆ ಅದಕ್ಕೆ ಅವರ ವಿರೋಧವಿರಲಿಲ್ಲ ಎಂದು ನನಗನ್ನಿಸಿತು. ಅನಂತರ ನಾನು ಶ್ರೀಮಾತೆಯವರನ್ನು 'ಚೆಂಡುಹೂ ಅಕ್ಕ' ಎಂದೇ ಕರೆಯುತ್ತಿದ್ದೆ. ಅವರೂ ಅದಕ್ಕೆ ಹೂಂಗುಡುತ್ತಿದ್ದರು.

ಶ್ರೀಮಾತೆ ಮಾತುಕತೆಗಳಲ್ಲಿ ಹೆಚ್ಚು ಕಾಲ ಕಳೆಯುತ್ತಿರಲಿಲ್ಲ. ನಾನು ಒಂದು ಸಂಗತಿಯನ್ನು ಚೆನ್ನಾಗಿ ಗಮನಿಸಿದ್ದೆ. ಶ್ರೀಮಾತೆ ಯಾವುದೇ ವೇಳೆ ಯಾವ ಕೆಲಸವನ್ನೇ ಮಾಡಲಿ, ಅವರ ತುಟಿಗಳು ಅಲುಗಾಡುತ್ತಿದ್ದವು. ಒಂದು ದಿನ ತುಂಬ ಸ್ವಾರಸ್ಯಕರವಾದ ಸಂಗತಿ ನಡೆಯಿತು. ಶ್ರೀಮಾತೆ ನನಗೆ ಹೇಳಿದರು, ''ನೋಡು ಭವಿ, ನಾನು ಸ್ವಲ್ಪಹೊತ್ತು ಠಾಕೂರರ ಕೋಣೆಗೆ ಕುಡಿಯುವ ನೀರು ತೆಗೆದುಕೊಂಡು ಹೋಗುತ್ತೇನೆ.'' ನಾನೆಂದೆ, ''ನನಗೆ ಅದನ್ನು ಕೊಡಿ. ನಾನು ಅದನ್ನು ಅಲ್ಲಿ ಇಟ್ಟು ಬರುತ್ತೇನೆ.'' ಶ್ರೀಮಾತೆ ನನಗೆ ಕೊಡಲಿಲ್ಲ. ''ನೀನು ಸ್ವಲ್ಪ ಒಲೆಯ ಹತ್ತಿರ ಕುಳಿತುಕೋ. ದಾಲ್ ಕುದಿದ ಮೇಲೆ ಉಕ್ಕಿ ಬರದಂತೆ ನೋಡಿಕೋ. ಉಕ್ಕಿ ಬಂದರೆ ಸ್ವಲ್ಪ ನೀರು ಹಾಕು, ತಿಳಿಯಿತೆ?'' ಎಂದರು. ಹೀಗೆಂದ ಅವರು ಹೊರಟುಹೋಗುತ್ತಲೇ, ಈಗ ಠಾಕೂರರ ಕೋಣೆಯಲ್ಲಿ ಯಾರೂ ಇಲ್ಲ; ಬೇಗನೆ ಇದನ್ನು ಕೊಟ್ಟು ಬಂದುಬಿಡುತ್ತೇನೆ ಎಂದರು ಶ್ರೀಮಾತೆ ಹೊರಟು

ಹೋದರು, ದಾಲ್ ಕೂಡ ಕುದಿಯತೊಡಗಿತು. ನಾನು ಒಂದೇ ದೃಷ್ಟಿಯಿಂದ ನೋಡುತ್ತಿದ್ದೆ , ಅದು ಕುದಿಯುವಾಗ ನೀರು ಎರೆದುಬಿಡುತ್ತೇನೆ ಎಂಬುದಾಗಿ. ಬಾಯಲ್ಲಿ ಏನೋ ಗೊಣಗುಟ್ಟುತ್ತ – ಶ್ರೀಮಾತೆ ಅಡುಗೆ ಮಾಡುತ್ತಿದ್ದಾಗ ಹಾಗೆ ಮಾಡುತ್ತಿದ್ದುದನ್ನು ನೋಡಿದ್ದೆನಲ್ಲ! ಆದರೆ ನನ್ನ ನಾಲಿಗೆ ಮಾತ್ರ ಉಚ್ಚರಿಸುತಿತ್ತು. ದಾಲ್‌ನ ನೀರು ಮೇಲಕ್ಕೆ ಬರತೊಡಗಿತ್ತು, ನಾನು ಎಡಗೈಯಲ್ಲಿ ನೀರಿನ ಪಾತ್ರೆಯನ್ನು ಹಿಡಿದು ನೀರೆರೆಯಲು ಹೊರಟಿದ್ದೆ. ಅಷ್ಟರಲ್ಲಿ ಶ್ರೀಮಾತೆ ಹಿಂದಿರುಗಿ ಬಂದರು. ಅವರು ಹೇಳಿದರು, ''ಭವಿ, ಈ ಕಡೆ ಬಾ. ಬಾಯಲ್ಲಿ ಏನು ಗೊಣಗುಟ್ಟುತ್ತಿದ್ದೀಯಾ?'' ''ಏನೂ ಇಲ್ಲ, ನೀವು ಅಡುಗೆ ಮಾಡುವಾಗ ಹೀಗೆ ಮಾಡುತ್ತಿದ್ದುದ್ದನ್ನು ನೋಡಿದ್ದೇನೆ. ನಾನೂ ಹಾಗೆ ಮಾಡುತ್ತಿದ್ದೆ'' ಎಂದೆ ನಾನು. ಶ್ರೀಮಾತೆ ನಗುತ್ತ, ''ಅಯ್ಯೋ ಹುಚ್ಚಿ, ಚೋಟುದ್ದದ ಹುಡುಗಿ ನೀನು; ಅಡುಗೆ ಮಾಡುವಾಗ ನಾನೇನು ಮಾಡುತ್ತಿದ್ದೆ ಅಂತ ನೊಡಿದ್ದೀಯಾ? ನಾನು ಏನೋ ಗೊಣಗುಟ್ಟುತ್ತಿಲ್ಲ, ನಾನು ಠಾಕೂರರ ನಾಮಜಪ ಮಾಡುತ್ತೇನೆ. ಅದಕ್ಕೆ 'ಜಪ' ಅಂತ ಹೇಳುತ್ತಾರೆ. ಕೆಲಸದ ನಡುವೆ ಭಗವಂತನ ಹೆಸರು ಹೇಳಿ ಜಪಮಾಡಬೇಕು. ಆಗಲೇ ಕೆಲಸ ಚೆನ್ನಾಗಿ ಆಗುವುದು. ಈಗ ನೀನು ಹೋಗಿ ಠಾಕೂರರ ಕೋಣೆಯನ್ನು ಒರೆಸಿ ಬಾ. ಮೊದಲು ಕಸಬರಿಕೆಯಿಂದ ಗುಡಿಸಬೇಕು'' ಎಂದರು. ನಾನು ಠಾಕೂರರ ಕೋಣೆಯತ್ತ ಓಡಿದೆ. ಆದರೆ ಗುಡಿಸುವುದಕ್ಕೆ ನಾನು ಕಾಯಬೇಕಾಯಿತು. ನರೇನ್ ದಾ ('ನರೇನ್ ಅಣ್ಣ' ಎಂದರ್ಥ, ಮುಂದೆ ಸ್ವಾಮಿ ವಿವೇಕಾನಂದರು) ಬಂದುಬಿಟ್ಟಿದ್ದ, ಅವನೊಂದಿಗೆ ಇನ್ನಿಬ್ಬರೂ ಇದ್ದರು. ನನ್ನನ್ನು ನೋಡಿದ ಕೂಡಲೇ ನರೇನ್ ದಾ ಹೇಳಿದ, ''ನೋಡು ಶಾಂಕಚುನ್ನಿ('ಹೆಣ್ಣು ದೆವ್ವ' ಎಂದರ್ಥ), ನನಗೆ ಬಾಯಾರಿಕೆಯಾಗಿದೆ. ಆ ಹಂಡೆಯಿಂದ ನೀರು ತಂದುಕೊಡು'' ನಾನು ಹಾಗೆ ಮಾಡದೆ ಸುಮ್ಮನೆ ಕುಳಿತೆ. ನಾನೆಂದೆ, ''ನಾನು ಕೊಡಲ್ಲ. ನನ್ನನ್ನು ಕೆಟ್ಟ ಹೆಸರಿನಿಂದ ಏಕೆ ಕರೆಯುತ್ತೀಯಾ?''



ಶ್ರೀರಾಮಕೃಷ್ಣರ ಕೋಣೆ, ದಕ್ಷಿಣೇಶ್ವರ

ಅದಕ್ಕೆ ನರೇನ್ ದಾ ನಗುತ್ತ ನನ್ನ ಕೈ ಹಿಡಿದೆಳೆದು ಅವನ ಬಳಿಗೆ ಸೆಳೆಯುತ್ತ, ''ಓ ಶಾಂಕಚುನ್ನಿ, ನಿನ್ನ ಕೈಯಿಂದ ನನಗೆ ನೀರು, ತಂಬಾಕು ಕೊಟ್ಟರೆ ನನ್ನ ಹಾಗೆ ನೀನೂ ಚೆನ್ನಾಗಿ ಕಾಣಿಸುತ್ತೀಯಾ. ಆಗ ನಿನಗೆ ಒಳ್ಳೆಯ ಸುಂದರನಾದ ಗಂಡ ಸಿಗುತ್ತಾನೆ. ಈಗ ನೀನು ಓಡಿಹೋಗಿ ಒಂದು ಗ್ಲಾಸ್ ನೀರು ತಾ. ಆಮೇಲೆ ನನಗೆ ಹುಕ್ಕಾ ತಯಾರು ಮಾಡಿಕೊಡು'' ಎಂದ. ಠಾಕೂರ್ ಕೋಣೆಯಲ್ಲಿರಲಿಲ್ಲ ; ನನಗೆ ಅಲ್ಲಿ ಗುಡಿಸಲಾಗಲಿಲ್ಲ. ನಾನು ನೀರು ತಂದುಕೊಟ್ಟೆ. ತಂಬಾಕು ತಯಾರಿಸಿಕೊಡಲು ನನಗೆ ಬರುತ್ತಿರಲಿಲ್ಲ, ಆದರೂ ವರಾಂಡದಲ್ಲಿ ಒಂದು ಹುಕ್ಕಾ ಇತ್ತು; ಅದನ್ನು ನಹಬತ್‌ಗೆ ತೆಗೆದುಕೊಂಡು ಹೋದೆ. ನನ್ನನ್ನು ನೋಡಿದ ಶ್ರೀಮಾತೆ, ''ಗುಡಿಸಿ, ಒರೆಸಿ ಬಂದೆ ತಾನೆ?'' ಎಂದು ಕೇಳಿದರು. ''ಇಲ್ಲ, ನರೇನ್‌ದಾ ಬಂದಿದ್ದ. ಠಾಕೂರ್ ಕೋಣೆಯಲ್ಲಿರಲಿಲ್ಲ. ನನಗೆ ತಂಬಾಕು ತಯಾರಿಸಲು ನರೇನ್ ದಾ ಹೇಳಿದ್ದಾನೆ. ಅದು ನನಗೆಲ್ಲಿ ಗೊತ್ತಿದೆ?'' ಎಂದೆ. ''ಇಲ್ಲ, ನೀನು ಅದನ್ನು ಕಲಿಯಬೇಕಾದದ್ದಿಲ್ಲ. ಆ ಹುಕ್ಕಾವನ್ನು ನನಗೆ ಕೊಡು'' ಎಂದರು. ಶ್ರೀಮಾತೆ ಒಲೆಯಿಂದ ಚಿಮಿಟಿಯಲ್ಲಿ ಒಂದು ಕೆಂಡವನ್ನು ಹುಕ್ಕಾಗೆ ಹಾಕಿದರು. ಅನಂತರ ತೆಂಗಿನ ಸಿಪ್ಪೆಯನ್ನು ಅದರ ಮೇಲಿರಿಸಿ, ನನ್ನ ಕೈಗೆ ಅದನ್ನು ಕೊಟ್ಟು, ''ತೆಗೆದುಕೊಂಡು ಹೋಗು ಎಂದರು. ಅಚ್ಚುಕಟ್ಟಾಗಿ ಜೋಡಿಸಿಟ್ಟಿದ್ದ ಹುಕ್ಕಾವನ್ನೂ ನೋಡಿ ನರೇನ್ ದಾ, ''ಏನು ಮಾಡಿಬಿಟ್ಟೆ! ಇಷ್ಟೊಂದು ಚೆನ್ನಾಗಿ ಯಾರು ಜೊಡಿಸಿಕೊಟ್ಟರು?'' ಎಂದು ಕೇಳಿದ. ನಾನೆಂದೆ, ''ಯಾಕೆ? ಶ್ರೀಮಾತೆ ಜೋಡಿಸಿಕೊಟ್ಟರು!'' ನರೇನ್‌ದಾ ತಲೆಮೇಲೆ ಕೈಯಿಟ್ಟು ''ಓ ಶಾಂಕಚುನ್ನಿ, ನೀನೇನು ಮಾಡಿಬಿಟ್ಟೆ! ಸರ್ವನಾಶವಾಗಿಹೋಯಿತು! ಈಗ ನಾನು ಹುಕ್ಕಾವನ್ನು ಹೇಗೆ ಸೇದಲಿ?'' ಎಂದ. ನರೇನ್ ದಾ ತಂಬಾಕಿನ ಹುಕ್ಕಾವನ್ನು ತಲೆಗೆ ಒಂದು ಬಾರಿ ಸ್ಪರ್ಶಿಸಿ, ಎದ್ದು ನಿಂತು ತಾನೇ ಹುಕ್ಕಾವನ್ನು ಜೋಡಿಸಿ, ಅನಂತರ ಸೇದತೊಡಗಿದ.

ಹಗಲು ಹೊತ್ತು ಶ್ರೀಮಾತೆಯವರೊಂದಿಗೆ ಅಷ್ಟೇನೂ ಮಾತುಕತೆ ನಡೆಯುತ್ತಿರಲಿಲ್ಲ. ಅವರು ನನ್ನನ್ನು ಪೀತಾಂಬರ ಭಂಡಾರಿಯ ಮಗಳ ಕಡೆಗೆ ಕಳುಹಿಸುತ್ತಿದ್ದರು. ಅಲ್ಲಿ ನಾವಿಬ್ಬರು ಹಾಗೂ ಇನ್ನಿಬ್ಬರು ಹುಡುಗ, ಹುಡುಗಿಯರು ಇರುತ್ತಿದ್ದರು. ನಾವೆಲ್ಲ ಸೇರಿ ಖಜಾಂಚಿಯ ಕೋಣೆ ಪಕ್ಕದಲ್ಲಿದ್ದ ಸಣ್ಣ ಕೋಣೆಯಲ್ಲಿ ಚಾಪೆ ಹಾಸಿ ಓದುತ್ತಿದ್ದೆವು. ನಾವು ಅ,ಆ,ಕ,ಖ, ಹಾಗೂ ಗಣಿತ ಬರೆಯುತ್ತಿದ್ದೆವು. ನಾವು ಮರಳಿ ಬಂದಾಗ ನಡುವೆ ಬಿಡುವು ಮಾಡಿಕೊಂಡು ಶ್ರೀಮಾತೆ ಕೇಳುತ್ತಿದ್ದರು, ''ಇವತ್ತು ಏನು ಓದಿದೆ ಹೇಳು, ನಾನು ಕೇಳುತ್ತೇನೆ.'' ಅನಂತರ ಹೇಳುತ್ತಿದ್ದರು, ''ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ಕಲಿ. ಹೆಣ್ಣಾಗಿ ಹುಟ್ಟಿದ್ದೀಯಾ, ಯಾವಾಗ ಮದುವೆ ಮಾಡಿ ಬಿಡುತ್ತಾರೋ ಹೇಳಲಾಗದು.''

ಈ ರೀತಿ ನಾನು ಅಲ್ಲಿಗೆ ಹೋಗದ ದಿನ ಶ್ರೀಮಾತೆ ಓದು ಬರಹದ ಬಗ್ಗೆ ಕೇಳುತ್ತಿರಲಿಲ್ಲ. ಅವರದೊಂದು ಅದ್ಭುತವಾದ ವಿಧಾನವಾಗಿತ್ತು. ಸಂಧ್ಯಾರತಿಯಾದ ಬಳಿಕ ನನಗೆ ನಿದ್ದೆ ಬರುತ್ತಿತ್ತು. ಸಾಯಂಕಾಲ ನಿದ್ದೆ ಮಾಡಿದರೆ ಅಲ್ಪಾಯು ವಾಗುತ್ತೇವೆಂದು ಶ್ರೀಮಾತೆ ಹೇಳುತ್ತಿದ್ದರು. ಶ್ರೀಮಾತೆ ಸ್ವತಃ ತಾವೇ ಠಾಕೂರರ ಚಿತ್ರದ ಮುಂದೆ ಆಸನದಲ್ಲಿ ಕುಳಿತು ಕೊಳ್ಳುತ್ತಿದ್ದರು. ಅವರಿಗೆ ಜಪ, ಧ್ಯಾನ ಮಾಡಲು ಸ್ವಲ್ಪವೇ ಸ್ವಲ್ಪ ಸಮಯ ಸಿಗುತ್ತಿತ್ತು. ಅವರು ಮೆಲುದನಿಯಿಂದ ಹಾಡಿ ಕೊಳ್ಳುತ್ತಿದ್ದರು; ತಮ್ಮೊಂದಿಗೆ ದನಿ ಸೇರಿಸಿ ಹಾಡುವಂತೆ ನನಗೂ ಅವರು ಹೇಳುತ್ತಿದ್ದರು. ಮೊದಮೊದಲು ನನಗೆ ಗೊತ್ತಾಗಲಿಲ್ಲ, ಅನಂತರ ನೋಡುತ್ತೇನೆ, ಶ್ರೀಮಾತೆಯವರ ಕಂಠ ಎಷ್ಟೊಂದು ಮಧುರ! ನಾನು ಶ್ರೀಮಾತೆಯವರ ಸ್ವರವನ್ನು ಅನುಕರಿಸುತ್ತಿದ್ದೆ. ಅನಂತರ ಶ್ರೀಮಾತೆ ಹೇಳುತ್ತಿದ್ದರು, ''ಈಗ ಹೇಳು, ಇವತ್ತು ಏನೇನು ಓದಿದೆ? ನೀನು ಓದಿದ್ದನ್ನು ಕೇಳುತ್ತ ನಾನೂ ಒಂದಿಷ್ಟು ಕಲಿಯುತ್ತೇನೆ. ಈಗ ನನಗೆ ಸ್ವಲ್ಪ ಕಲಿಸು.''

ಶ್ರೀಮಾತೆ ಕಲಿಸುತ್ತಿದ್ದ ರೀತಿ ಸಂಪೂರ್ಣ ಬೇರೆಯೇ ರೀತಿ ಯದು. ಅವರು ಕಲಿಸುತ್ತಿದ್ದಾರೆ ಎನ್ನುವುದೇ ಗೊತ್ತಾಗುತ್ತಿರಲಿಲ್ಲ. ಅವರು ಹೇಳುತ್ತಿದ್ದರು, ''ತಪ್ಪನ್ನು ತಿದ್ದಬೇಕು. ಆದರೆ ವ್ಯಕ್ತಿಯನ್ನು ತಪ್ಪಿತಸ್ಥನನ್ನಾಗಿ ಮಾಡಬಾರದು. ಇನ್ನೊಬ್ಬರ ದೋಷವನ್ನು ನೋಡುವ ಮೊದಲು ನಮ್ಮಲ್ಲೇ ದೋಷ ಬೆಳೆದುಬಿಡುತ್ತದೆ.''

ಒಂದು ದಿನ ನಡೆದ ಘಟನೆಯೊಂದು ಮನಸ್ಸಿಗೆ ಬರು ತ್ತಿದೆ. ನನಗಾಗ ಏಳು ವರ್ಷ ಕಳೆದು ಎಂಟನೇ ವರ್ಷ ನಡೆಯುತ್ತಿತ್ತು. ಒಂದು ಬೆಕ್ಕು ಶ್ರೀಮಾತೆಯವರ ಕಾಲ ಬಳಿ ಸುತ್ತಾಡುತ್ತಿತ್ತು; ಆದರೆ ಕೋಣೆಯಲ್ಲಿ ಯಾವುದೇ ವಸ್ತುವಿಗೆ ಬಾಯಿ ಹಾಕುತ್ತಿರಲಿಲ್ಲ. ಅದೂ ಶ್ರೀಮಾತೆಯವರ ಸಂಸಾರದ ಒಬ್ಬ ಸದಸ್ಯನಾಗಿ ಬಿಟ್ಟಿತು. ಒಂದು ದಿನ ಯಾವ ಕಾರಣಕ್ಕಾಗಿ ಎಂದು ನೆನಪಿಲ್ಲ, ನನ್ನ ಊಟದ ತಟ್ಟೆಗೆ ಬಾಯಿಹಾಕಿತು. ನನಗೆ ತುಂಬಾ ಕೋಪ ಬಂದುಬಿಟ್ಟಿತು. ಕೋಪ ತಡೆಯಲಾಗದೆ ನನ್ನ ಕೈಯಲ್ಲಿದ್ದ ಬೀಸಣಿಗೆಯ ಹಿಡಿಯಿಂದ ಅದಕ್ಕೆರಡು ಏಟು ಕೊಟ್ಟುಬಿಟ್ಟೆ. ಬೆಕ್ಕು 'ಮ್ಯಾಂವ್' 'ಮ್ಯಾಂವ್' ಎನ್ನುತ್ತ ಚೀರಿ, ಶ್ರೀಮಾತೆಯವರ ಕಾಲುಗಳ ಹಿಂದೆ ಅಡಗಿ ಮುಖವನ್ನು ಉಜ್ಜ ತೊಡಗಿತು. ಅತ್ತ ನೋಡಿದೆ, ಶ್ರೀಮಾತೆ ''ಅಯ್ಯೋ!'' ಎನ್ನುತ್ತ ಎದ್ದು ನಿಂತು ಒಂದು ರೀತಿ ಬದಲಾಗಿಬಿಟ್ಟರು. ಅವರು ಹೇಳತೊಡಗಿದರು, ''ಏನು ಮಾಡಿದೆ! ಏನು ಮಾಡಿದೆ!'' ನಾನು ಅಪ್ರತಿಭಳಾದೆ. ನಾನು ಶ್ರೀಮಾತೆಯವರ ಬಳಿಗೆ ಹೋಗಿ ಅವರ ಮಡಿಲನ್ನು ಹಿಡಿದುಕೊಂಡು, ''ಏನಾಯಿತಮ್ಮಾ?'' ಎಂದು ಕೇಳಿದೆ. ಶ್ರೀಮಾತೆ ಒಂದು ಕ್ಷಣ ತಮ್ಮನ್ನು ತಾವು ಸಮಾಧಾನ ಮಾಡಿಕೊಂಡು ಹೇಳಿದರು, ''ನೋಡು ಭವಿ, ನೀನೇಕೆ ಬೆಕ್ಕನ್ನು ಆ ರೀತಿ ಹೊಡೆದುಬಿಟ್ಟೆ?'' ನಾನು ಅವರ ಕರುಣಾಮಯವಾದ ಮುಖವನ್ನೆ ನೋಡುತ್ತ ನಿಂತೆ. ಅವರು ಒಂದೇ ಒಂದು ಕಟುವಾದ ಮಾತನ್ನೂ ಆಡಲಿಲ್ಲ ; ಬೆಕ್ಕಿನ ಮರಿಯನ್ನು ಮಡಿಲಲ್ಲಿಟ್ಟುಕೊಂಡು ತಡವಿದರು. ಅದರಿಂದಲೇ ನನಗೆ ತಕ್ಕ ಶಾಸ್ತಿಯಾಯಿತು. ಮುಂದೆಂದೂ ನಾನು ನಾಯಿ, ಬೆಕ್ಕುಗಳ ಮೇಲೆ ಕೈಮಾಡಲಿಲ್ಲ.

ಠಾಕೂರ್ ಹಾಗೂ ಶ್ರೀಮಾತೆಯವರ ಮಾತುಗಳು ಅಮೃತ ಸಮಾನ. ಅವುಗಳ ಬಗ್ಗೆ ಹೇಳಿದಷ್ಟೂ ಮುಗಿಯದು. ಸಣ್ಣ ಸಂಗತಿಯಿಂದ ಹಿಡಿದು ದೊಡ್ಡ ವಿಷಯದವರೆಗೆ ಯಾವುದೇ ಆಗಿರಲಿ, ಶ್ರೀಮಾತೆಯವರ ಗಮನಕ್ಕೆ ಬಾರದಿರುತ್ತಿರಲಿಲ್ಲ. ಶ್ರೀಮಾತೆಯವರು ನನ್ನನ್ನು ತಾವೇ ಠಾಕೂರರ ಮಲಗುವ ಕೋಣೆಗೆ ದಿನದಲ್ಲಿ ಎರಡು ಬಾರಿ ಕರೆದುಕೊಂಡು ಹೋಗು ತ್ತಿದ್ದರು. ಕಸಬರಿಕೆಯಿಂದ ಹೇಗೆ ಗುಡಿಸಬೇಕು, ಗುಡಿಸಿದ ನಂತರ ಕಸಬರಿಕೆಯನ್ನು ಹೇಗೆ ಇಡಬೇಕು ಎಂದೆಲ್ಲ ಕಲಿಸಿಕೊಡು ತ್ತಿದ್ದರು. ಯಾವುದೇ ವಸ್ತುವನ್ನಾದರೂ ಸರಿ, ಅದರ ಜಾಗದಲ್ಲೇ ಇಡಬೇಕು; ಕತ್ತಲಲ್ಲೂ ಕೂಡ ಅದು ಕೈಗೆ ಸಿಗುವಂತಿರಬೇಕು. ನೀರಿನ ಹಂಡೆಯಲ್ಲಿ ಎಷ್ಟು ನೀರಿರಬೇಕು, ಅದರ ಮುಚ್ಚಳವನ್ನು ಹೇಗೆ ಮಧ್ಯಭಾಗದಲ್ಲಿರುವಂತೆ ಮುಚ್ಚಬೇಕು; ಆಸನ, ಚಾಪೆ ಗಳನ್ನು ಹಾಸುವುದು ಇವನ್ನೆಲ್ಲ ಅಚ್ಚುಕಟ್ಟಾಗಿ ಮಾಡಬೇಕು, ಅಡ್ಡಾದಿಡ್ಡಿ ಮಾಡಬಾರದು. ನಿತ್ಯಪೂಜೆಗೆ ಉಪಯೋಗಿಸುವ ವಸ್ತುಗಳನ್ನು ತೊಳೆದು ಒರೆಸಿ ಜೋಡಿಸಿಡುವುದು, ತಾಂಬೂಲ ಗಳನ್ನು ಸಿದ್ಧಪಡಿಸಿ ಇಡುವುದು, ಠಾಕೂರರ ಚಪ್ಪಲಿಗಳನ್ನು ಸ್ವಚ್ಛಗೊಳಿಸುವುದು – ಹೀಗೆ ಯಾವುದನ್ನೂ ಅವರು ಬಿಡುತ್ತಿರಲಿಲ್ಲ. ಶ್ರೀಮಾತೆ ತಾವೇ ಅವುಗಳನ್ನು ಮಾಡುತ್ತ ತೋರಿಸಿಕೊಡುತ್ತಿದ್ದರು. ಅವರು ಹೇಳುತ್ತಿದ್ದರು, ''ಹೆಣ್ಣುಮಕ್ಕಳು ಸದ್ದು ಮಾಡುತ್ತಾ ಓಡಾಡಬಾರದು, ಜೋರಾಗಿ ನಗಬಾರದು. ಮೊಣಕಾಲ ಮೇಲೆ ಬಟ್ಟೆಬರೆ ಎಳೆದುಕೊಳ್ಳಬಾರದು. ಉಚ್ಚ ಕಂಠದಿಂದ ಮಾತನಾಡಬಾರದು. ಅದೇ ರೀತಿ ಸಣ್ಣದಾಗಿ ಗೊಣಗುಟ್ಟುವುದೂ ಸಲ್ಲದು. ಎಲ್ಲಿಗಾದರೂ ಹೋಗುವಾಗ ದುರ್ಗಾನಾಮವನ್ನು ಹೇಳಿಕೊಳ್ಳುತ್ತಾ ಹೋಗಬೇಕು. ಯಾರನ್ನೂ ಹಿಂದಿನಿಂದ ಕರೆಯಬಾರದು. ಗಾಡಿಯಿಂದ ಅಥವಾ ದೋಣಿಯಿಂದ ಇಳಿಯುವಾಗ ಮೊದಲು ಇಳಿಯ ಬೇಕು, ಕೊನೆಯಲ್ಲಿ ಇಳಿಯಬಾರದು. ಎಲ್ಲರೊಂದಿಗೆ ನಗುತ್ತ ಮಾತುಕತೆ ನಡೆಸಬೇಕು; ಯಾರಿಗೂ ನೋವಾಗುವಂತೆ ಮಾತನಾಡಕೂಡದು.''

ಶ್ರೀಮಾತೆ ಏಳುತ್ತ, ಕುಳಿತುಕೊಳ್ಳುತ್ತ ಏನೆಲ್ಲ ಹೇಳುತ್ತಿದ್ದರೋ ಅವೆಲ್ಲ ಸಿಹಿತಿಂಡಿಯಂತೆ ಮಧುರವಾಗಿರುತ್ತಿದ್ದವು! ಅದೆಲ್ಲ ವನ್ನೂ ನೆನಪಿನಲ್ಲಿಟ್ಟುಕೊಳ್ಳಲಾಗುವುದೆ? ಠಾಕೂರ್‌ಗೆ ಪ್ರಣಾಮ ಮಾಡದೆ ಯಾವುದೇ ಕೆಲಸ ಮಾಡಬಾರದು ಎಂದು ನಾನು ಅವರಿಂದ ಕಲಿತೆ.

ಒಮ್ಮೊಮ್ಮೆ ಠಾಕೂರರು ತಾವೇ ಸೆಣಬಿನ ದಾರ, ಬಿದಿರಿನ ಕಡ್ಡಿಗಳನ್ನು ತಂದುಹಾಕುತ್ತಿದ್ದರು. ಶ್ರೀಮಾತೆ ತುಂಬಾ ಸುಂದರವಾಗಿ ಆಸನ ಹಾಗೂ ಇನ್ನಿತರ ನಿತ್ಯ ಉಪಯೋಗದ ವಸ್ತುಗಳನ್ನು ತಯಾರಿಸುತ್ತಿದ್ದರು. ಹೂ ಕೊಯ್ದು ತಂದು, ಮಾಲೆ ಕಟ್ಟಿ, ಭವತಾರಿಣಿಗೆ ಅರ್ಪಿಸುವ ಕೆಲಸವನ್ನು ಅವರು ನನ್ನಿಂದ ಮಾಡಿಸುತ್ತಿದ್ದರು. ಸಾಯಂಕಾಲ ನಾನು ಮಂದಿರಕ್ಕೆ ಹೋಗಿ ಅಥವಾ ಠಾಕೂರರ ಬಳಿಗೆ ಹೋಗಿ ಅದನ್ನು ಕೊಟ್ಟು ಬರುತ್ತಿದ್ದೆ. ಶ್ರೀಮಾತೆ ನನಗೆ ಎಲ್ಲವನ್ನೂ ಕಲಿಸಿಕೊಟ್ಟಿದ್ದರು.



ದೇವಿ ಸಿಂಹವಾಹಿನಿ, ಜಯರಾಮಬಾಟಿ

ಈಗಲೂ ನಾನು ಶ್ರೀಮಾತೆಯವರನ್ನು ನೋಡುತ್ತೇನೆ. ಹೇಗೆ ಅಂತ ತುಸು ವಿವರಿಸುತ್ತೇನೆ. ೧೯೫೫–೫೬ರಲ್ಲಿ ನಾನು ಪುರೀಕ್ಷೇತ್ರಕ್ಕೆ ಹೋದೆ. ಅಲ್ಲಿಂದ ನಾನು ಜಯರಾಮಬಾಟಿಯಲ್ಲಿಯ ಶ್ರೀಮಾತೆಯವರ ಮನೆಗೆ ಬಂದೆ. ಆಶ್ರಮದ ಮಹಂತರು (ಅಧ್ಯಕ್ಷರು) ತುಂಬಾ ಆನಂದಪಟ್ಟರು. ನನಗೆ ತಂಗುವ ಹಾಗೂ ಊಟದ ವ್ಯವಸ್ಥೆಯನ್ನು ಆಶ್ರಮವೇ ವಹಿಸಿಕೊಂಡಿತ್ತು. ನಾನು ಸ್ನಾನಮಾಡಿ ನೇರ ಸಿಂಹವಾಹಿನಿಯ ಮಂದಿರಕ್ಕೆ ಹೋದೆ. ''ಸಿಂಹವಾಹಿನಿಯ ಅಧಿದೇವತೆ ಯಾರು?'' ಎಂದು ನಾನು ಹಲವರನ್ನು ಕೇಳಿದೆ. ಆದರೆ ಯಾರೂ ಸರಿಯಾದ ಉತ್ತರ ಕೊಡಲಿಲ್ಲ. ಗಣಪತಿ ಪೂಜೆ ಮಾಡುತ್ತಿದ್ದ. ಅವನು ನನ್ನನ್ನು ನೋಡಿ ಕಾತರದಿಂದ ಎದ್ದು ನಿಂತು, ''ಬನ್ನಿ ಅತ್ತೆ, ಒಳಗೆ ಬನ್ನಿ. ಅದೆಂಥ ಭಾಗ್ಯ ನಮ್ಮದು! ಎಷ್ಟು ದಿನಗಳ ನಂತರ ನಾನು ಅತ್ತೆಯನ್ನು ನೋಡುವಂತಾಯಿತು!'' ಎಂದ. ಗಣಪತಿ ಶ್ರೀಮಾತೆಯವರ ಅಳಿಯ; ನನ್ನ ಅಳಿಯ ಕೂಡ.

ಗಣಪತಿಗೆ ಹೇಳಿದೆ, ''ಅಲ್ಲ ಗಣಪತಿ, ಸಿಂಹವಾಹಿನಿ ಯಾವ ದೇವತೆ ಹೇಳು?'' ಗಣಪತಿ ಹೇಳಿದ, ''ಅತ್ತೆ, ಈ ದೇವತೆ ತುಂಬಾ ಜಾಗೃತ ದೇವತೆ. ದೂರದ ಊರುಗಳಿಂದ ಎಷ್ಟೊಂದು ಜನ ಇಲ್ಲಿಗೆ ಬರುತ್ತಾರೆ! ಕೆಲವರ ಬೆರಳು ಬಿದ್ದುಹೋಗಿರುತ್ತದೆ, ಇನ್ನೂ ಕೆಲವರಿಗೆ ಹೊಟ್ಟೆನೋವು, ಕೆಲವರಿಗೆ ಮಗನ ರೋಗ ವಾಸಿಯಾಗಬೇಕು; ಇನ್ನಾರದೋ ಕುಟುಂಬದಲ್ಲಿ ಏನೇನೋ ಸಮಸ್ಯೆ. ಅವರು ಮಾತೆಯ ಮುಂದೆ ಹರಕೆ ಹೇಳಿಕೊಳ್ಳುತ್ತಾರೆ– ಅದರ ಫಲವಾಗಿ ಅವರಿಗೆ ಹೂ ದೊರಕುತ್ತದೆ. ಅವರು ತಮ್ಮ ಆಸೆಗಳನ್ನು ಪೂರೈಸಿಕೊಂಡು ಊರಿಗೆ ಮರಳುತ್ತಾರೆ '' ಎಂದ.

''ಅದು ಅರ್ಥವಾಯಿತು. ಆದರೆ ಸಿಂಹವಾಹಿನಿ ಯಾವ ದೇವತೆ ಅಂತ ಹೇಳು?'' ಎಂದೆ. ಗಣಪತಿ ತಲೆ ಕೆರೆದುಕೊಳ್ಳತೊಡಗಿದ. ಗಣಪತಿಯೇಕೆ, ಶ್ರೀಮಾತೆಯವರ ಅತ್ತಿಗೆಯಂದಿರನ್ನೂ ನಾನು ಕೇಳಿದೆ. ಅವರದೂ ಇದೇ ಕಥೆ. ಮಹಂತ ಸ್ವಾಮಿಗಳನ್ನು ಕೇಳಿದೆ. ಅವರೂ ಅಸ್ಪಷ್ಟವಾಗಿ ಉತ್ತರ ಕೊಟ್ಟರು. ಸಿಂಹವಾಹಿನಿ ಯಾವ ದೇವತೆ? ಇದೊಂದೇ ಪ್ರಶ್ನೆ ನನ್ನ ಮನಸ್ಸಿನಲ್ಲಿ ಉಳಿಯಿತು. ಪೂಜೆ ಮುಗಿಯಿತು. ಮಾತೆಯ ಮುಂದೆ ನಾನೊಬ್ಬಳೇ ಕುಳಿತಿದ್ದೆ. ನಾನು ಮಾತೆಯೊಂದಿಗೆ ಮಾತನಾಡುತ್ತಿದ್ದೆ: 'ಅಮ್ಮಾ ಸಿಂಹವಾಹಿನಿ, ನೀನು ಯಾರಮ್ಮ? ನೀನಂತೂ ಸಿಂಹವಾಹಿನಿ, ಆದರೆ ನೀನು ಯಾರು? ಅಮ್ಮಾ ಸಿಂಹವಾಹಿನಿ, ನೀನು ಯಾರು ಅಂತ ತಿಳಿಸಿಕೊಡು' ಎಂದು ಪ್ರಾರ್ಥಿಸಿದೆ. ಇದ್ದಕ್ಕಿದ್ದಂತೆ ಮಾತೆಯ ಮಂದಿರವೆಲ್ಲ ಸುಮಧುರವಾದ ಸುವಾಸನೆಯಿಂದ ತುಂಬಿಹೋಯಿತು. ಮಂದಿರದ ಕೋಣೆಯೆಲ್ಲ ಮಿಂಚಿನ ಬೆಳಕಿನಿಂದ ತುಂಬಿಕೊಂಡಿತು. ಮಾತೆಯ ಸಣ್ಣ ಘಟವನ್ನು ಎಲ್ಲಿ ಇಡಲಾಗಿತ್ತೋ ಅದನ್ನು ಅಲ್ಲಿ ನಾನು ಕಾಣಲಿಲ್ಲ. ಅಲ್ಲಿ ಒಂದು ಜೀವಂತ ಸಿಂಹ ನಿಂತಿತ್ತು! ಅದು ತನ್ನ ಎರಡೂ ಕಿವಿಗಳನ್ನು ಅಲುಗಾಡಿಸುತ್ತಿತ್ತು. ಅದರ ಬಾಲವೂ ಅಲುಗಾಡುತ್ತಿದೆ! ಸಿಂಹದ ಮೇಲೆ ಮಾತೆ ಜಗದ್ಧಾತ್ರಿ ಕುಳಿತಿದ್ದಾಳೆ! ಅವಳ ದೇಹ ಕೆಂಪು ಬಣ್ಣದಿಂದ ಕೂಡಿತ್ತು. ''ಅಮ್ಮಾ ಸಿಂಹವಾಹಿನಿ ನೀನೇ? ಹೌದಮ್ಮಾ, ಸಿಂಹವಾಹಿನಿ, ನೀನೇ ಜಗದ್ಧಾತ್ರಿ! ಅಮ್ಮಾ ಜಗದ್ಧಾತ್ರಿ, ನೀನೇ ಸಿಂಹವಾಹಿನಿ!'' ಅರೆ ಇದೇನಿದು! ಕಣ್ಣ ರೆಪ್ಪೆ ತೆರೆಯುವಷ್ಟರಲ್ಲಿ ಜಗದ್ಧಾತ್ರಿ ಅಲ್ಲಿ ಕಾಣಿಸಲಿಲ್ಲ. ಅಲ್ಲಿ ದಶಭುಜಗಳಿಂದ ಕೂಡಿದ ದುರ್ಗಾಮಾತೆ ಸಿಂಹದ ಮೇಲೆ ಕುಳಿತಿದ್ದಾಳೆ! ''ಅಮ್ಮಾ ಸಿಂಹವಾಹಿನಿ, ನೀನು ಜಗದ್ಧಾತ್ರಿ; ಅಷ್ಟೇ ಅಲ್ಲ, ನೀನೇ ದುರ್ಗೆ! ನೀನು ಎಷ್ಟು ರೂಪಗಳನ್ನು ಧರಿಸಿದ್ದೀಯಾ ತಾಯಿ?'' – ಈ ಆನಂದ ಹೆಚ್ಚು ಕಾಲ ಉಳಿಯಲಿಲ್ಲ. ಒಂದೆರಡು ನಿಮಿಷವಷ್ಟೇ ಇರಬೇಕು. ಅನಂತರ ನೋಡುತ್ತೇನೆ, ದುರ್ಗೆಯೂ ಅಲ್ಲಿಲ್ಲ, ಜಗದ್ಧಾತ್ರಿಯೂ ಇಲ್ಲ. ಸಿಂಹಾಸನವನ್ನೆಲ್ಲ ಬೆಳಗುತ್ತ ಕುಳಿತಿದ್ದಾಳೆ, ನನ್ನ ತಾಯಿ ಶಾರದಾಮಾತೆ! (ಚಿತ್ರದಲ್ಲಿರುವಂತೆ) ಕೂದಲನ್ನು ಎದೆಯ ಮೇಲೆ ಇಳಿಬಿಟ್ಟುಕೊಂಡು ಆಕೆ ಕುಳಿತಿದ್ದಾಳೆ! ಕೊರಳಸುತ್ತ ಸೀರೆಯನ್ನು ಸುತ್ತಿ* ನಾನು ಮಾತೆಗೆ ಪ್ರಣಾಮ ಮಾಡಿದೆ. ತಲೆಯೆತ್ತಿ ನೋಡಿದರೆ ಅಲ್ಲಿ ಶ್ರೀಮಾತೆ ಇರಲಿಲ್ಲ. ಸಿಂಹದ ಪೀಠದಲ್ಲಿ ಕುಳಿತ ಜಗದ್ಧಾತ್ರಿಯೂ ಇಲ್ಲ ; ದಶಭುಜಗಳಿಂದ ಕೂಡಿದ ನನ್ನ ದುರ್ಗಾಮಾತೆಯೂ ಇಲ್ಲ. ಗರ್ಭಗೃಹದ ಪೀಠದಲ್ಲಿದ್ದ ಘಟ ಹೇಗೆ ಇತ್ತೋ ಅದೇ ರೀತಿ ಇತ್ತು.

*ಭಕ್ತಿ, ಗೌರವಗಳನ್ನು ವ್ಯಕ್ತಪಡಿಸುವ ಒಂದು ವಿಧಾನ ಇದು.

ಸ್ವಾಮಿ ಅಖಂಡಾನಂದರ ಸ್ಮೃತಿಸಂಚಯ

ಬಂಗಾಳಿ ಮೂಲ: **ಸ್ವಾಮಿ ನಿರಾಮಯಾನಂದ**

ಕನ್ನಡಕ್ಕೆ: **ಕುಮಾರಿ ಪಿ.ಉಷಾ**

ಭಾಗ-೩



೨೩ ಫೆಬ್ರವರಿ, ೧೯೩೬ : ನಾಲ್ಕು ಘಂಟೆಯ ಸಮಯ. ಶ್ರೀರಾಮಕೃಷ್ಣರ ಜನ್ಮತಿಥಿ ಹಾಗೂ ಶತಾಬ್ದಿ ಉತ್ಸವಗಳ ಅಂಗವಾಗಿ ಪೂಜ್ಯ ಸ್ವಾಮಿ ಅಖಂಡಾನಂದ ಮಹಾರಾಜರು ಸ್ವಲ್ಪ ಮುಂಚಿತವಾಗಿಯೇ ಸಾರಗಾಛಿಯಿಂದ ಬೇಲೂರು ಮಠಕ್ಕೆ ಬಂದಿದ್ದಾರೆ. ಈ ನಡುವೆ ಅನೇಕ ಭಕ್ತರು ಅವರ ದರ್ಶನವನ್ನು ಪಡೆಯಲು ಕಾತರರಾಗಿ ಅಲ್ಲಿಗೆ ಬಂದಿದ್ದಾರೆ.

ಪೂಜ್ಯ ಮಹಾರಾಜರು ಕುರ್ಚಿಯಲ್ಲಿ ಕುಳಿತ್ತಿದ್ದಾರೆ. ಕೆಲವರು ನಿಂತಿದ್ದಾರೆ, ಕೆಲವರು ನೆಲದಮೇಲೆ ಕುಳಿತಿದ್ದಾರೆ. ಒಬ್ಬ ಭಕ್ತ ಅತಿಶಯವಾದ ಭಕ್ತಿಯಿಂದ ಗಾಳಿ ಬೀಸುತ್ತಿದ್ದಾನೆ. ಮಹಾರಾಜರೆಂದರು, ''ನಾನು ಬಂದದ್ದು ಅವರ (ಠಾಕೂರರ) ಇಚ್ಛೆಯಿಂದಲೇ. ಇಲ್ಲಿಗೆ ಬರುತ್ತೇನೆಂದು ಒಂದು ಸಲವೂ ಭಾವಿಸಿರಲಿಲ್ಲ.''

೨೪ ಫೆಬ್ರವರಿ, ೧೯೩೬ : ಇಂದು ಠಾಕೂರರ ಜನ್ಮತಿಥಿ ಪೂಜೆ ಹಾಗೂ ಶತಾಬ್ದಿಯ ಉದ್ಘಾಟನೆಯ ಕಾರ್ಯಕ್ರಮ ನಡೆಯುವುದು. ದಿನವಿಡೀ ಬೇಲೂರು ಮಠದಲ್ಲಿದ್ದು ಬಾಬಾರನ್ನು ನೋಡಿ, ಅನುಕೂಲವಾದರೆ ಅವರ ಸೇವೆಯನ್ನು ತುಸು ಮಾಡಬೇಕೆಂಬ ಆಸೆಯಿದೆ ಭಕ್ತನಿಗೆ.

ಸುತ್ತಲೂ ಏನೇನೆಲ್ಲ ನಡೆಯುತ್ತಿದೆ! ಮಹಡಿಯ ಮೇಲಿನ ಮಂದಿರದಲ್ಲಿ * ದಿನವಿಡೀ ಪೂಜೆ. ಆ ಕಡೆ ಲೌಡ್ ಸ್ಪೀಕರ್‌ನಲ್ಲಿ ಹಾಡಿನ ಮೇಲೆ ಹಾಡು. ಅಸಂಖ್ಯಾತ ಮಂದಿ ಭಕ್ತರ ಸಮ್ಮಿಳನದಿಂದ ಮಠದ ಪ್ರಾಂಗಣದಲ್ಲಿ ಸದ್ದುಗದ್ದಲ ತುಂಬಿದೆ. ಭಕ್ತ ಸಮುದ್ರದ ಅಲೆಗಳು ಉಕ್ಕಿ, ಪೂಜನೀಯ ಮಹಾರಾಜರ ದರ್ಶನವನ್ನು ಪಡೆದು ಮೆಲ್ಲನೆ, ಹರಿದು ಬರುತ್ತಿದೆ. ಏನಾಯಿತೋ ಏನೋ, ಒಂದು ಕಡೆಯಿಂದ ಸೇವಕರೊಬ್ಬರು ಭಕ್ತನ ಕೈಗೆ ಬೀಸಣಿಗೆಯನ್ನು ಕೊಟ್ಟು, 'ನೀವು ಸ್ವಲ್ಪ ಇಲ್ಲಿರಿ, ನಾನೀಗಲೇ ಬರುತ್ತೇನೆ' ಎಂದು ಹೇಳಿ ಹೊರಟುಹೋದರು. ಭಕ್ತನ ಮನದಾಸೆ ಈಡೇರಿತು. ಕೋಣೆಯಲ್ಲಿ ಮತ್ತಾರೂ ಇಲ್ಲ. ಕೆಲವು ಕ್ಷಣಗಳ ಕಾಲ ಭಕ್ತರ ಸಂದಣಿ ಖಾಲಿಯಾಯಿತು. ಬಾಬಾ ಹುಡುಗನಂತೆ ಹಾಸಿಗೆಯ ಮೇಲೆ ಮಲಗಿ 'ಉದ್ಬೋಧನ' ಹಾಗೂ 'ಬಸುಮತಿ'ಯ ಶ್ರೀರಾಮಕೃಷ್ಣ ಶತಾಬ್ದಿ ಸಂಖ್ಯೆಗಳನ್ನು ನೋಡುತ್ತಿದ್ದಾರೆ. ಆ ಸಂದರ್ಭದಲ್ಲಿ ಪ್ರಕಟವಾಗಿದ್ದ ತಮ್ಮದೇ ಲೇಖನಗಳನ್ನು ಅವರು ಮತ್ತೆ ಮತ್ತೆ ನೋಡುತ್ತಿರುವುದನ್ನು ಕಂಡು ಭಕ್ತನಿಗೆ ನಗು ಬಂತು.

ಸ್ವಲ್ಪ ನಂತರ ಬಾಬಾ ಬಾತ್‌ರೂಂಗೆ ಹೋದರು. ಅವರು ಹಿಂದಿರುಗಿ ಬಂದಾಗ ಏನು ಮಾಡಬೇಕೆಂದು ಭಕ್ತನಿಗೆ ತಿಳಿಯದಾಯಿತು. ಸೇವಕರು ಇನ್ನೂ ಬಂದಿಲ್ಲ. ಏನು ಮಾಡಲಿ?

ಭಕ್ತೆಯೊಬ್ಬಳು ವ್ಯಾಕುಲ ಚಿತ್ತದಿಂದ 'ಬಾಬಾ, ಬಾಬಾ' ಎನ್ನುತ್ತಾ ಕೋಣೆಯ ಒಳಹೊಕ್ಕಳು. ಬಾಬಾ ಆಗ ಭಕ್ತನಿಗೆಂದರು, ''ಬಹಳ ದೂರದಿಂದ ಪ್ರಯಾಣ ಮಾಡಿ ಬಂದಿದ್ದೇನೆ, ಎಲ್ಲಿ ಸ್ವಲ್ಪ ಚೆನ್ನಾಗಿ ಗಾಳಿ ಬೀಸು ನೋಡೋಣ. ನೀನು ಹಾಗೆ ಮಾಡುವ ಬದಲು ನನ್ನನ್ನು ನೋಡುತ್ತಿದ್ದೀಯಲ್ಲ? ಒಳ್ಳೇ ಭಕ್ತ!''

ಭಕ್ತನಾದರೋ ಹೇಗೋ ಸಂಬಾಳಿಸಿಕೊಂಡು ಬಹಳ ಜೋರಾಗಿ ಗಾಳಿ ಬೀಸತೊಡಗಿದನು. ಒಂದೆರಡು ಬಾರಿ ಮಂಚದ ಛತ್ರಿಗೂ ಬೀಸಣಿಗೆ ತಗುಲಿರಬೇಕು. ಭಕ್ತ ಮಹಿಳೆ ವಿನಂತಿಸಿಕೊಂಡಳು, ''ನನಗೆ ಕೊಡು, ನಾನೊಂದು ಸ್ವಲ್ಪ ಗಾಳಿ ಬೀಸುತ್ತೇನೆ.'' ಒಡನೆಯೇ ಭಕ್ತ ಅವಳ ಕೈಗೆ ಬೀಸಣಿಗೆಯನ್ನಿತ್ತು, ಮಹಾರಾಜರ ಸೇವಕನನ್ನು ಹುಡುಕುತ್ತ ಹೊರಗೆ ಹೋದ.

---

* ಹಳೆಯ ಶ್ರೀರಾಮಕೃಷ್ಣ ಮಂದಿರ; ಹೊಸ ದೇವಾಲಯವಿನ್ನೂ ನಿರ್ಮಾಣವಾಗಿರಲಿಲ್ಲ.

ಹೊರಗೆ ಜನಪ್ರವಾಹ ಕಡಿಮೆಯಾಗುತ್ತಾ ಬಂತು. ಸಂಜೆ ಕತ್ತಲಾಗುತ್ತಿದ್ದಂತೆ ಆರತಿಯ ಗಂಟೆಯ ಸದ್ದು ಕೇಳಿಬಂತು. ಮಂದಿರದಲ್ಲಿ 'ಖಂಡನ-ಭವ-ಬಂಧನ' (ಆರತಿಯ ಹಾಡು) ಮೊಳಗತೊಡಗಿತು.

ಹಿರಿಯ ಸಾಧುಗಳೊಬ್ಬರ ಆದೇಶದಂತೆ ಅಂದು ರಾತ್ರಿ ಮಠದಲ್ಲಿ ಉಳಿದುಕೊಳ್ಳುವ ಸೌಭಾಗ್ಯ ಪ್ರಥಮ ಬಾರಿಗೆ ನನಗೊದಗಿ ಬಂತು. ಅವರೆಂದರು, ''ಏನಾಯಿತು? ಮನೆಯಲ್ಲಿ ಸ್ವಲ್ಪ ಯೋಚಿಸುತ್ತಾರೆ – ಯೋಚಿಸುತ್ತ ಯೋಚಿಸುತ್ತ ಅವರೂ ದೇವರ ವಿಷಯವನ್ನೇ ಯೋಚಿಸುತ್ತಾರೆ. ಜಯಂತಿಪೂಜೆಯ ರಾತ್ರಿ ಅತಿ ಪವಿತ್ರವಾದ ರಾತ್ರಿ – ಕಾಳೀಪೂಜೆ ನಡೆಯುತ್ತದೆ, ಅನಂತರ ವಿರಜಾಹೋಮ, ಸಂನ್ಯಾಸ, ಬ್ರಹ್ಮಚರ್ಯ ದೀಕ್ಷೆ ನಡೆಯುವುದು. ಇವತ್ತು ಬೇಲೂರು ಮಠದ ಗಾಳಿ ಮೈಗೆ ತಗುಲಿದರೆ ಸಾಕು, ವಿವೇಕ -ವೈರಾಗ್ಯಗಳು ತಾವಾಗಿಯೇ ಬರುತ್ತವೆ, ಸಂಸಾರ ಬಂಧನವೆಲ್ಲವೂ ಕಳಚಿಹೋಗುತ್ತದೆ. ಇಂದು ಮಠದಲ್ಲಿರು. ಸ್ಥಳವಿದ್ದಲ್ಲಿ ಸ್ವಲ್ಪ ಮಲಗು. ಹಾಗೆಂದು ರಾತ್ರಿಯೆಲ್ಲ ನಿದ್ರೆಯಲ್ಲಿ ಕಳೆಯಬೇಡ.''

ಮುಂಜಾನೆಯ ನಸುಕಿನಲ್ಲೂ ಬಾಬಾ ಕೋಣೆಯಿಂದ ದೇವಾಲಯಕ್ಕೆ ಹೋಗುತ್ತಿದ್ದುದನ್ನು ಭಕ್ತ ನೋಡಿದ; 'ಸಂನ್ಯಾಸ', 'ಬ್ರಹ್ಮಚರ್ಯ' ನಡೆಯುತ್ತಿದೆ – ಅಲ್ಲಿ ಜನಸಾಮಾನ್ಯರಿಗೆ ಪ್ರವೇಶವಿಲ್ಲ. ಸಾಧ್ಯವಾದಷ್ಟು ನೋಡೋಣವೆಂದು ಭಕ್ತ ಹೊರಗಡೆ ಕಾದ. ನಸುಕು ಹರಿಯುತ್ತಲೇ ಮಠದಲ್ಲಿ ನವೀನ ಸಂನ್ಯಾಸಿ ಹಾಗೂ ಬ್ರಹ್ಮಚಾರಿಗಳು ಹೊಸದಾಗಿ ಲಭಿಸಿದ 'ಆನಂದ' ಹಾಗೂ 'ಚೈತನ್ಯ'ಗಳಿಂದ ತುಂಬಿ ಕಂಗೊಳಿಸುತ್ತಿರುವುದನ್ನು ನೋಡಿದ.* ಸ್ವಲ್ಪ ಹೊತ್ತಿನಲ್ಲೆ ಪ್ರಸಾದ ಸ್ವೀಕರಿಸಿ, ಏನನ್ನೋ ಯೋಚಿಸುತ್ತಾ ಭಕ್ತನು ಕಲ್ಕತ್ತೆಗೆ ವಾಪಸ್ಸಾದನು.

ಈ ನಡುವೆ ಒಂದು ದಿನ ಬೆಳಗಿನ ಹೊತ್ತು ಬೇಲೂರು ಮಠಕ್ಕೆ ಬಂದ ಭಕ್ತ ನೋಡಿದ : ಬಹಳ ಮಂದಿ ಸಾಧುಗಳಿಂದ ಸುತ್ತುವರಿದಿದ್ದ ಸ್ವಾಮಿ ಅಭೇದಾನಂದರು ಪಶ್ಚಿಮ ವರಾಂಡದಲ್ಲಿ ಸ್ವಾಮಿ ಅಖಂಡಾನಂದರನ್ನು ನೋಡುವ ಅಪೇಕ್ಷೆಯಿಂದ ಕುಳಿತಿದ್ದಾರೆ. ಅವರು ನಗುತ್ತ ಹೇಳಿದರು, ''ಗಂಗಾಧರನಿಗೆ ನಾನು ಬಂದಿದ್ದೇನೆಂದು ಹೇಳಿ ಕಳುಹಿಸು.'' ತರುವಾಯ ಮೇಲಿನ ಕೋಣೆಯಲ್ಲಿ ಇಬ್ಬರ ಮಿಲನ – ಆಲಿಂಗನದ ದೃಶ್ಯವು ನಿಜಕ್ಕೂ ಸ್ವರ್ಗೀಯವಾಗಿತ್ತು – ನೋಡಬೇಕಾದದ್ದು. ಕದ ಮುಚ್ಚಿ ಇಬ್ಬರೂ ಮಾತಾಡಿದರು. ಅರ್ಧಘಂಟೆಯ ಬಳಿಕ ಪೂಜ್ಯ ಕಾಳೀ ಮಹಾರಾಜರು (ಅಭೇದಾನಂದರು) ಮರಳಿ ಹೋದರು.

---

* ಸಂನ್ಯಾಸ ಹಾಗೂ ಬ್ರಹ್ಮಚರ್ಯ ದೀಕ್ಷೆ ಸ್ವೀಕಾರ ಮಾಡುವವರಿಗೆ ನೀಡಲಾಗುವ ಹೊಸ ಹೆಸರಿನ ಕೊನೆಯಲ್ಲಿ ಕ್ರಮವಾಗಿ 'ಆನಂದ' ಹಾಗೂ 'ಚೈತನ್ಯ' ಎಂಬುದು ಸೇರ್ಪಡೆಯಗುವುದು.ಅದನ್ನೇ ಇಲ್ಲಿ ಅನ್ವರ್ಥವಾಗಿ ಹೇಳಲಾಗಿದೆ.

೧ನೇ ಮಾರ್ಚ್ ರವಿವಾರ : ಇಂದು ಸಾರ್ವಜನಿಕರಿಗಾಗಿ ಶ್ರೀರಾಮಕೃಷ್ಣ ಜನ್ಮೋತ್ಸವ ನಡೆಯುವುದು. ಭಕ್ತನು ಸ್ನೇಹಿತನೊಬ್ಬನ ಜೊತೆಗೆ ಬೆಳಗ್ಗೆಯೇ ಬೇಲೂರು ಮಠಕ್ಕೆ ಬಂದಿದ್ದಾನೆ. ಅವನು ದಿನವಿಡೀ ಓಡಾಡಿದ್ದಾನೆ. ಇಂದು ಬಾಬಾರ ಕೋಣೆಗೆ ಬಂದುಹೋಗುವಂತಿಲ್ಲ. ಅಲ್ಲಿಗೆ ತನ್ನ ಸ್ನೇಹಿತನನ್ನು ಒಂದು ಸಲ ಕರೆದುಕೊಂಡು ಹೋಗಬೇಕೆಂಬುದೇ ಅವನ ಆಸೆ.

ಐದೂವರೆ ಗಂಟೆಗೆ ಬಾಬಾ ದರ್ಶನವಾಯಿತು. ಬಾಬಾ ಹೇಳಿದರು, ''ನೋಡು ಎಲ್ಲಡೆಯೂ ಏನು ಗಲಾಟೆ! ನನ್ನನ್ನು ಇವರು ಇಲ್ಲಿಯೇ ಇರಿಸಿಕೊಳ್ಳಬೇಕೆಂದಿದ್ದಾರೆ. ಸಾರಗಾಛಿ ಎಂಥ ಜಾಗವೆಂದು ಹೇಳು ನೋಡೋಣ – ಎಷ್ಟು ಶಾಂತ! ಆದರೆ ಠಾಕೂರರ ಕಾರ್ಯ – ಅವರು (ನಮ್ಮನ್ನು) ಯಾವಾಗ, ಎಲ್ಲಿರಿಸುತ್ತಾರೊ, ಏನು ಮಾಡಿಸುತ್ತಾರೊ, ಅವರಿಗೇ ಗೊತ್ತು.

ಸಂಜೆಯ ಕತ್ತಲಲ್ಲಿ ಬಾಬಾಗೆ ಪ್ರಣಾಮ ಮಾಡಿ ಭಕ್ತ ಬೀಳ್ಕೊಂಡ; ಸ್ವಲ್ಪ ತಡೆದು ನೋಡಿದ – ಉಜ್ವಲವಾದ ಮಹಾನ್ ದಿವ್ಯಮೂರ್ತಿ ಅವರದು! ಬಹಳಷ್ಟು ದಣಿದು ಬಳಲಿದ್ದರೂ ಅದು ಎಷ್ಟೊಂದು ಶಾಂತ ಹಾಗೂ ಸುಂದರ!

೩ನೇ ಮಾರ್ಚ್ : ಭಕ್ತನೊಬ್ಬನು ಭಕ್ತಿಯ ಆವೇಶದಿಂದ ಮತ್ತಾವ ಪ್ರಶ್ನೆಯನ್ನೂ ಕೇಳಲಾಗದೆ, ''ನೀವು ಯಾವಾಗ ಹೋಗುತ್ತೀರಿ?'' ಎಂದನು. (ಅಂದರೆ 'ಸಾರಗಾಛಿಗೆ ಯಾವಾಗ ಹೋಗುವಿರಿ' ಎಂದು) ಸ್ವಲ್ಪ ಚಕಿತರಾದ ಬಾಬಾ ಸಿಟ್ಟಿನಿಂದಲೇ, ''ಹೋಗುವ ವಿಷಯ ಕೇಳುವುದಕ್ಕೆ ನೀನು ಯಾರು? ನಾನಿಲ್ಲಿಗೆ ಬಂದಿದ್ದೇನೆ, ಎರಡು ದಿನ ಇರುವುದಕ್ಕೆ ಬಿಡು. ಹಾಗೆನ್ನದೆ, 'ಯಾವಾಗ ಹೋಗುತ್ತೀರಿ' ಎನ್ನುತ್ತೀಯಲ್ಲ?'' ಸ್ವಲ್ಪ ಹೊತ್ತು ಸುಮ್ಮನಿದ್ದು, ಅನಂತರ ಮೃದುಸ್ವರದಲ್ಲಿ, ''ಯಾವಾಗ ಹೋಗುತ್ತೇನೋ ನನಗೆ ತಿಳಿಯದು. ಆತನಿಚ್ಛೆಯಂತೆ ಬರುತ್ತೇನೆ, ಆತನಿಚ್ಛೆಯಂತೆ ಹೋಗುತ್ತೇನೆ. ಆದರೆ ಭಗವಂತನ ದೋಲ್‌ಪೂರ್ಣಿಮೆಗೆ (ಹೋಳಿ ಹುಣ್ಣಿಮೆ) ಮೊದಲು ಹೋಗಲಾಗುವುದಿಲ್ಲವೆಂದು ಕಾಣುತ್ತದೆ.''

ಎಲ್ಲರೂ ಬೀಳ್ಕೊಳ್ಳುತ್ತಿದ್ದಾರೆ. ಬಾಬಾ ಹೇಳಿದರು, ''ಇವತ್ತು ಏಕಾದಶಿ. ರಾಮನಾಮವನ್ನು ಕೇಳಿ ಹೊರಡಿ.''

ದೋಲ್ ಪೂರ್ಣಿಮಾ, ಸಂಜೆ : ''ಕೊಡು, ಆವೀರನ್ನು (ರಂಗು) ಕೊಡು. ಬಂದಿರುವರೆಲ್ಲರನ್ನೂ ಕರೆ, ಆವೀರನ್ನು ಕೊಡುತ್ತೇನೆ.'' ಒಬ್ಬರು ಆವೀರನ್ನು ತೆಗೆದುಕೊಳ್ಳದೆ ಹೊರಟುಹೋದರು. ಬಾಬಾ, ''ಅಯ್ಯೋ, ತಿಳಿಗೇಡಿ! ಹೊರಟುಹೋದ! ಕರೆ ಅವನನ್ನು, ಕರೆ ಅವನನ್ನು'' ಎಂದರು. ಮತ್ತೊಂದು ದಿನ ಸಂಜೆ; ಲಾಲ್‌ಬಾಬಾ ಆಶ್ರಮದ ಉದಾಸೀ ಸಾಧುಗಳೊಬ್ಬರು ಬಾಬಾರ ದರ್ಶನ ಪಡೆಯಲು ಬಂದಿದ್ದಾರೆ. ಬಾಬಾ ಅವರನ್ನು ಪ್ರೀತಿ, ಗೌರವದಿಂದ ತಮ್ಮ ಕೋಣೆಯಲ್ಲಿ ಕುರ್ಚಿಯ ಮೇಲೆ

ಕುಳ್ಳಿರಿಸಿ, ತಾವೂ ಒಂದು ಕುರ್ಚಿಯಲ್ಲಿ ಕುಳಿತು ಹಿಂದಿಯಲ್ಲಿ ಮಾತನಾಡತೊಡಗಿದರು. ಸ್ವಲ್ಪ ಸಮಯದ ನಂತರ ಅವರ ಇಂಗಿತದಂತೆ ಸೇವಕನು ಸ್ವಲ್ಪ ಹಣ್ಣುಗಳನ್ನು ತಂದು ಸಾಧುಗಳ ಮುಂದಿಟ್ಟನು. ಸಾಧುಗಳು ಒಂದು ಬಾಳೆಹಣ್ಣನ್ನು ಮಾತ್ರ ತೆಗೆದುಕೊಂಡರು. ಸಂಭಾಷಣೆ ಮುಗಿದ ಬಳಿಕ ಸಾಧುಗಳು ಹೊರಟುಹೋದರು. ಬಾಬಾ ಅವರ ಪ್ರಶಂಸೆ ಮಾಡುತ್ತ, ''ನೋಡು, ಎಷ್ಟು ಸಂಯಮಿ ಅವರು! ರಾತ್ರಿ ಸ್ವಲ್ಪ ಹಾಲು, ಒಂದು ಬಾಳೆಹಣ್ಣು ಬಿಟ್ಟು ಮತ್ತೇನನ್ನೂ ಸೇವಿಸುವುದಿಲ್ಲ. ಜೊತೆಯಲ್ಲಿ ಏನನ್ನೂ ತೆಗೆದುಕೊಂಡು ಹೋಗಲಿಲ್ಲ. ನಮ್ಮಲ್ಲಿ ಅನೇಕರು ಈ ಎಲ್ಲ ಸಾಧುಗಳಿಗೆ ಪ್ರಾಮುಖ್ಯತೆ ನೀಡುವುದಿಲ್ಲ. ಒಂದು ರಾತ್ರಿ ತಂಗಲು ಇಚ್ಛಿಸಿದರೂ ಅವರನ್ನು ಇರಗೊಡುವುದಿಲ್ಲ. ನಾವು ಯಾತ್ರೆ ಮಾಡುವಾಗ ಎಷ್ಟೊಂದು ರಾತ್ರಿ ಎಷ್ಟು ಸ್ಥಳಗಳಲ್ಲಿ ಆಶ್ರಯ ಪಡೆದಿದ್ದೇವೆ! ಹೊರಗೆ ಹೋದರೆ ಇವಲ್ಲಾ ತಿಳಿಯುತ್ತದೆ. ಸಾಧುಗಳ ಕಷ್ಟ ಸಾಧುಗಳಿಗೆ ಮಾತ್ರ ತಿಳಿಯುವುದು. ಸಾಧುಗಳು ಸಾಮಾನ್ಯವಾಗಿ ರಾತ್ರಿ ಹೊತ್ತು ಗೃಹಸ್ಥರ ಮನೆಯಲ್ಲಿ ತಂಗಲು ಇಷ್ಟಪಡುವುದಿಲ್ಲ.''

ಒಂದೆರಡು ದಿನಗಳ ನಂತರ ಸಂಧ್ಯಾರತಿಯಾದ ಮೇಲೆ ಬೇಲೂರು ಮಠದ ಮಹಡಿಯ ಮೇಲೆ ಗಂಗಾನದಿಗೆ ಎದುರಾಗಿದ್ದ ವರಾಂಡಕ್ಕೆ ಕುರ್ಚಿಯನ್ನು ತರಲಾಯಿತು. ಅದನ್ನು ಯಾವ ಕಡೆಗೆ ತಿರುಗಿಸಿ ಇಡಬೇಕೆಂಬುದು ಸೇವಕನಿಗೆ ತಿಳಿಯಲಿಲ್ಲ. ಬಾಬಾ ಹೇಳಿದರು: ''ದಕ್ಷಿಣೇಶ್ವರದ ಕಡೆಗೆ ತಿರುಗಿಸಿ ಇಡು – ಅದನ್ನೂ ಹೇಳಿಕೊಡಬೇಕೆ?''

ಸ್ವಲ್ಪ ಹೊತ್ತು ಮೌನವಾಗಿ ಕುಳಿತ್ತಿದ್ದರು. ಈ ನಡುವೆ ೩–೪ ಸಾಧುಗಳು ಹಾಗೂ ಭಕ್ತರು ಬಂದು ನೆಲದ ಮೇಲೆ ಕುಳಿತರು. ಬಾಬಾ ಹೇಳಿದರು, ''ಆಹಾ! ಈ ಗಂಗೆಯ ತೀರದಲ್ಲೇ ನಡೆದು ಹೋಗಲು ಅದೆಷ್ಟು ಚೆನ್ನ! ನನಗೆ ಒಂದು idea (ಆಲೋಚನೆ)ಇತ್ತು, ಆದರೆ ಅದು ನಡೆಯಲಿಲ್ಲ. ದಾರಿಯ ನಡುವೆ ಮುರ್ಶಿದಾಬಾದಿನಲ್ಲೆ ನಿಂತುಬಿಟ್ಟೆ. ಗಂಗೆಯ ದಡದಲ್ಲೇ ಹೋಗಬೇಕು – ನೇರ ಗಂಗಾಸಾಗರದಿಂದ ಗಂಗೋತ್ರಿವರೆಗೆ; ಪಶ್ಚಿಮದ ದಾರಿಯಲ್ಲೇ ಹೋಗಬೇಕು. ಯಾರೇ ಆದರೂ ಹೋಗಲಿ, ಸಂತೋಷ. ಈಗ ನನಗೆ ಹಾಗೆ ಮಾಡುವಷ್ಟು ಶಕ್ತಿಯಿಲ್ಲ. ನಾಳೆಯೇ ಬೇಕಾದರೆ ಐದು ಮಂದಿ ಹೊರಡಿ – ನಮ್ಮ ಮಠದ ಸಾಧುಗಳು. 'ಮಿಷನ್ನಿನ ಸಾಧು' ಎನ್ನಬೇಡಿ. ಮಠದ ಸಾಧು, ಮಿಷನ್ನಿನ ಕರ್ಮಿ. ಮಿಷನ್ ಎಂದರೆ ಪರಿಹಾರ ಕಾರ್ಯ, ಸೇವಾಕಾರ್ಯ ಇತ್ಯಾದಿ.

''ಬೇಲೂರಿನಿಂದ ಹೊರಟಾಗ ದಾರಿಯಲ್ಲಿ ನೋಡುತ್ತೀರಿ, ಆ ದಡದಲ್ಲಿ ದಕ್ಷಿಣೇಶ್ವರ, ಆಮೇಲೆ ಎಲ್ಲಾ ಕಾರ್ಖಾನೆ–ಚಿಮಿಣಿಗಳು, ಹೊಗೆ – ಎಷ್ಟು ದೂರದವರೆಗೆ! ಈ ಕಡೆ ಶ್ರೀರಾಮಪುರ, ಆಮೇಲೆ ನೈಹಾಟಿ. ಇನ್ನೂ ಮುಂದೆ ಹೋದರೆ ಕಾಲ್ನಾ, ನವದ್ವೀಪ. ಅದನ್ನೂ ದಾಟಿ ಹೋದರೆ ಪಲಾಶಿ, ಮುರ್ಶಿದಾಬಾದ್ ಸಿಗುತ್ತದೆ. ಇನ್ನೂ ಉತ್ತರಕ್ಕೆ ಬಲಗಡೆಗೆ ಪದ್ಮಾನದಿ ಹರಿಯುತ್ತದೆ – ಗಂಗೆಯ ದಡದಲ್ಲೇ ಹೋಗಬೇಕು. ನೀರಿನ ಇಳಿತದ ಸಮಯದಲ್ಲಿ ನಡೆಯಬೇಕು. ಭಿಕ್ಷೆಗಾಗಿ ಸಮೀಪದ ಗ್ರಾಮಗಳಿಗೆ ಹೋಗಬೇಕು. ಜೊತೆಯಲ್ಲಿ ಒಂದು ಪೈಸೆಯನ್ನೂ ತೆಗೆದುಕೊಂಡು ಹೋಗಬಾರದು. ಆಗಲೇ ಚೆನ್ನ. ಸಂಪೂರ್ಣ ಈಶ್ವರನಲ್ಲೇ ನಿರ್ಭರವಾಗಿರಬೇಕು. ಹಣವನ್ನು ತೆಗೆದುಕೊಂಡು, ರೈಲುಗಾಡಿಯಲ್ಲಿ ಯಾತ್ರೆ ಮಾಡುವುದೇನು ಸುಖ? ಊರುಗಳನ್ನೇ ನೋಡಲಾಗುವುದಿಲ್ಲ. ಒಂದೇ ರಾತ್ರಿ ೪೦೦ ಮೈಲುಗಳ ಪ್ರಯಾಣ ಮಾಡಿಬಿಟ್ಟರೆ ಅದೆಂಥ ಯಾತ್ರೆ?

''ಮತ್ತೊಂದು ವಿಷಯ – ಎಲ್ಲಿ ಹೋದರೂ ಪ್ರಚಾರ, ದೇವರ ನಾಮ, ಗುಣ, ಸಂಕೀರ್ತನೆಗಳನ್ನು ಮಾಡಬೇಕು. ಗಂಗಾತೀರದಲ್ಲಿ ಎಷ್ಟು ಸಾಧುಗಳ ದರ್ಶನವಾಗುತ್ತದೆ! ನಿಜವಾದ ಸಾಧುಗಳು ಭಗವಂತನ ಮೇಲೆ ನಿರ್ಭರರಾಗಿ ಜೀವನವನ್ನು ಕಳೆಯುತ್ತಿರುವವರು. ಇಂಥವರೇ ಭಕ್ತ ಮಹಾಪುರುಷರು!

''ನಾನು ಹಣವನ್ನು ಸ್ಪರ್ಶಿಸುತ್ತಿರಲಿಲ್ಲವೆಂದು ಸ್ವಾಮೀಜಿ ನನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದರು! ಯಾತ್ರೆ ಮಾಡುವಾಗ ಒಮ್ಮೆ ಗುಜರಾತಿನಲ್ಲಿ ಡಕಾಯಿತರ ಕೈಗೆ ಸಿಕ್ಕಿಬಿದ್ದು ಪ್ರಾಣ ಹೋಗುತ್ತಿತ್ತು. ಹಣವಿಲ್ಲದ ಕಾರಣ ಬದುಕಿಕೊಂಡೆ. ಆಹಾ! ಅದೆಂಥ ಅವಸ್ಥೆ! ಸರ್ವದಾ ನಿರ್ಭರತೆ, ಸರ್ವದಾ ಭಗವಂತನದೇ ಚಿಂತೆ!

''ಹಣವಲ್ಲವೇ ಭಗವಂತನನ್ನು ಮರೆಸುವುದು? ಭಗವಂತನಲ್ಲಿ ನಿರ್ಭರತೆಯೇ ಆತ್ಮನಿರ್ಭರತೆ. ಹಣದ ನಿರ್ಭರತೆ ಆತ್ಮನಿರ್ಭರತೆಯಲ್ಲ. ಕೆಲಸಮಾಡಿ ಹಣವನ್ನು ಸಂಪಾದಿಸುವವರನ್ನು ನೋಡು! ಅವರು ನಿಜವಾಗಿಯೂ ಭಗವಂತನಲ್ಲಿ ವಿಶ್ವಾಸವಿಡಲಾರರು, ಸಂಪೂರ್ಣ ನಿರ್ಭರರಾಗಿರಲಾರರು. ಅವೆರಡೂ ಜೊತೆಯಲ್ಲಿ ಸಾಗುವುದಿಲ್ಲ, ಎರಡು ದೋಣಿಗಳಲ್ಲಿ ಕಾಲಿಡುವುದು ಭಯಾನಕ.''

ಶ್ರೀರಾಮಕೃಷ್ಣರು ನಡತೆಯ ಬಗ್ಗೆ

''ಭಕ್ತನಾಗು, ಆದರೆ ಮೂರ್ಖನಾಗಿರಬೇಡ'' ಎನ್ನುತ್ತಿದ್ದರು ಶ್ರೀರಾಮಕೃಷ್ಣರು. ಒಬ್ಬ ಯಾವಾಗಲೂ ಎಚ್ಚರಿಕೆಯಿಂದಿರಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ನನ್ನನ್ನು ನೋಡು! ಜಗನ್ಮಾತೆ ನನ್ನನ್ನು ಎಂಥ ಅವಸ್ಥೆಯಲ್ಲಿ ಇಟ್ಟಿದ್ದಾಳೆಂದರೆ, ಧರಿಸಿದ ಬಟ್ಟೆಯನ್ನೂ ನನಗೆ ಸರಿಯಾಗಿ ಇಟ್ಟುಕೊಳ್ಳಲಾಗುತ್ತಿಲ್ಲ. ಆದರೂ ನಾನು ಯಾವ ಕೆಲಸವನ್ನೂ ಮರೆಯುವುದಿಲ್ಲ.'' ಅವರು ಹೇಳುತ್ತಿದ್ದರು, ''ಎಚ್ಚರಿಕೆಯಿಂದ ಇಲ್ಲದಿರುವವನು ಮೂರ್ಖನೇ.''

(ಸ್ವಾಮಿ ತುರೀಯಾನಂದರ ವಿವರಣೆ, 'Ramakrishna As We Saw Him' ಗ್ರಂಥದಿಂದ, ಪು.೧೯೪)

ಸ್ವಾಮಿ ಪ್ರೇಮಾನಂದರು

ಸ್ವಾಮಿ ಅಶೋಕಾನಂದ

ಅನುವಾದ: ಡಾ. ಇ. ವಸಂತಕುಮಾರ್



ಆಶ್ಚರ್ಯವೆಂದರೆ, ಶ್ರೀರಾಮಕೃಷ್ಣರು ಕೂಡ ಸ್ವಾಮಿ ಪ್ರೇಮಾನಂದರನ್ನು ಜ್ಞಾನಮಾರ್ಗಕ್ಕೆ ಸೇರಿದವರಂತೆ ಕಂಡರು. ದಕ್ಷಿಣೇಶ್ವರದಲ್ಲಿ ಸ್ವಲ್ಪಕಾಲ ಶ್ರೀರಾಮಕೃಷ್ಣರೊಡನೆ ಇದ್ದ ಮೇಲೆ, ಬಾಬುರಾಮನು ಅವರನ್ನು ಆಧ್ಯಾತ್ಮಿಕ ಅನುಭವಕ್ಕಾಗಿ ಕೇಳಿಕೊಂಡನು. ಅವರ ಬಳಿ ಬರುತ್ತಿದ್ದ ಎಲ್ಲ ಯುವಶಿಷ್ಯರಿಗೂ ಒಂದಲ್ಲ ಒಂದು ಅನುಭವವಾಗಿತ್ತು: ಕೆಲವರಿಗೆ ಭಾವ, ಕೆಲವರಿಗೆ ಭಗವದ್ದರ್ಶನ ಹೀಗೆಲ್ಲ ಆಗಿತ್ತು. ಆದರೆ ತನಗೇನೂ ಆಗಿಲ್ಲವೆಂದು ಬಾಬುರಾಮನು ಹೇಳಿಕೊಂಡನು. ಕೆಲವು ದಿನಗಳ ಮಟ್ಟಿಗೆ ಬಾಬುರಾಮ ಮನೆಗೆ ಹೋದ. ಆ ಸಮಯದಲ್ಲಿ ಶ್ರೀರಾಮಕೃಷ್ಣರು ಜಗನ್ಮಾತೆಗೆ, 'ತಾಯಿ, ಬಾಬುರಾಮನಿಗೆ ನೀನು ಯಾವುದಾದರೂ ಅನುಭವವನ್ನು ಕರುಣಿಸುವುದು ಒಳ್ಳೆಯದು. ಇಲ್ಲವಾದರೆ ಅವನು ವಿಶ್ವಾಸ ಕಳೆದುಕೊಳ್ಳುವನು' ಎಂದು ಪ್ರಾರ್ಥಿಸಿದರು. 'ಅವನು ಆ ಗುಂಪಿಗೆ ಸೇರಿದವನಲ್ಲ. ಅವನಿಗೆ ಭಾವ ದೊರೆಯುವುದಿಲ್ಲ , ಜ್ಞಾನ ದೊರೆಯುವುದು' ಎಂದು ಭಗವತಿ ಹೇಳಿದಳಂತೆ. ಜ್ಞಾನ ಎಂದರೆ ತಾತ್ತ್ವಿಕ ಸತ್ಯಗಳನ್ನು ಬುದ್ಧಿಯ ಮೂಲಕ ಗ್ರಹಿಸುವುದಲ್ಲ. ಅದು ದೈವತ್ವದ ನಿರಪೇಕ್ಷ ಅಂಶದ ನೇರ ಅನುಭವ. ಆಧ್ಯಾತ್ಮಿಕ ಸತ್ಯವನ್ನು ಕೇವಲ ಬೌದ್ಧಿಕವಾಗಿ ತಿಳಿದುಕೊಳ್ಳುವುದು ಏನೂ ಅಲ್ಲ. ನೀವು ದೇವರ ವಿಷಯವಾಗಿ ಮಾತನಾಡಬಹುದು, ದೇವರನ್ನು ಕುರಿತು ಚಿಂತಿಸಬಹುದು, ದೇವರ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸವನ್ನು ಕೊಡಬಹುದು ಮತ್ತು ಭಗವಂತನನ್ನು ತಾತ್ತ್ವಿಕವಾಗಿ ವಿವರಿಸಬಹುದು. ಆದರೂ ಅದು ಏನೂ ಅಲ್ಲ. ಅದು ನೀರಸ. ಪ್ರತ್ಯಕ್ಷ ಅನುಭವವೇ ಬೇರೆ ವಿಷಯ.

ಜ್ಞಾನದ ಅನುಭವಕ್ಕೂ ಭಕ್ತಿಯ ಅನುಭವಕ್ಕೂ ವ್ಯತ್ಯಾಸವಿದೆ. ಮೊದಲನೆಯದು, ದೇಶ-ಕಾಲ-ನಿಮಿತ್ತಕ್ಕೆ ಅತೀತವಾದ ನಿರಪೇಕ್ಷ ಸತ್ಯವನ್ನು ಅನುಭವಿಸುವುದು. ಎರಡನೆಯದು, ರೂಪ ಅಥವಾ ಗುಣಗಳುಳ್ಳ ಭಗವಂತನನ್ನು ಅನುಭವಿಸುವುದು. ಸ್ವಾಮಿ ಪ್ರೇಮಾನಂದರು, ಭಕ್ತಿಗಿಂತ ಜ್ಞಾನವೇ ಪ್ರಧಾನವಾಗಿರುವವರ ಗುಂಪಿಗೆ ಸೇರಿದವರು. ಕೆಲವು ವೇಳೆ ಅವರಿಗೆ ಭಕ್ತಿಭಾವದ ಆನಂದಾತಿಶಯ ಉಂಟಾಗುತ್ತಿತ್ತು. ಆದರೆ ಅವರು ಭಗವಂತನಿಗಾಗಿ ಅತ್ತುದನ್ನಾಗಲಿ ಅಥವಾ ಅವರಲ್ಲಿ ಭಕ್ತರಿಗೆ ಬರುವ ಭಾವೋದ್ರೇಕವನ್ನಾಗಲಿ ನಾವು ನೋಡಿಲ್ಲ. ಆ ವಿಷಯದಲ್ಲಿ ಅವರು ಸಂಪೂರ್ಣ ನಿರ್ಲಿಪ್ತರೂ ಪ್ರಶಾಂತರೂ ಆಗಿದ್ದರು.

ಈ ವಿಷಯಗಳಲ್ಲಿ ಶ್ರೀರಾಮಕೃಷ್ಣರು ಸ್ವಾಮಿ ಪ್ರೇಮಾನಂದರ ಬಗ್ಗೆ ಏನು ಹೇಳಿದ್ದರೋ ಅಷ್ಟು ಮಾತ್ರ ನಮಗೆ ಗೊತ್ತು.

ಸ್ವಾಮಿ ಪ್ರೇಮಾನಂದರು ಯಾವ ಬಗೆಯ ಆಧ್ಯಾತ್ಮಿಕ ಸಾಧನೆಗಳನ್ನು ಮಾಡಿದರೊ, ಯಾವ ಅನುಭವಗಳನ್ನು ಅದರ ಫಲವಾಗಿ ಪಡೆದರೊ ನಮಗೆ ತಿಳಿಯದು. ಇದು ವಿಚಿತ್ರವಲ್ಲವೆ? ಅವರು ಪ್ರಧಾನ ಮಠದಲ್ಲಿ ಅನೇಕ ವರ್ಷಗಳ ಕಾಲ ಇದ್ದರು ಮತ್ತು ಅನೇಕರು ಅವರ ಬಳಿ ಬಂದರು. ಆದರೂ ಈ ಬಗ್ಗೆ ಯಾರೂ ಅವರಿಂದ ತಿಳಿದುಕೊಳ್ಳಲಿಲ್ಲ. ಅದು ಹೀಗೆಯೆ ಆಗುವುದು. ನೀವು ಮಹಾತ್ಮರೊಂದಿಗೆ ಇದ್ದಾಗ, ನಿಮಗೆ ಏನೇನು ಬೇಕೊ ಅದೇ ಮನಸ್ಸಿನ ತುಂಬ ಇರುವುದು. ಅವರ ಸಂಗದಲ್ಲಿ ಅನಂತತೆ ಎಷ್ಟರ ಮಟ್ಟಿಗೆ ಇರುವುದೆಂದರೆ, ಅವರು ನಿಮ್ಮಿಂದ ಕಳೆದುಹೋಗುವರು ಎಂದು ಯೋಚಿಸುವುದೇ ಇಲ್ಲ, ನೀವು ಸಂತೋಷವಾಗಿರುವಿರಿ, ಸಮಸ್ಯೆಗಳಿರದು. ನಿಮ್ಮ ಮನಸ್ಸು ಮೇಲ್ಮಟ್ಟಕ್ಕೆ ಹೋಗುವುದು, ಭಕ್ತಿಯಿಂದ ತುಂಬಿರುವುದು, ಆಧ್ಯಾತ್ಮಿಕ ನಿಷ್ಠೆಯಿಂದ ತುಂಬಿರುವುದು. ನೀವು ಸಂಪೂರ್ಣವಾಗಿ ಆಧ್ಯಾತ್ಮಿಕ ತನ್ಮಯತೆಯ ವಾತಾವರಣದಲ್ಲಿ ಇರುವಿರಿ ಮತ್ತು ಪ್ರಶ್ನೆಗಳನ್ನು ಕೇಳಲು ಮರೆಯುವಿರಿ.

ಅದು ಏನೇ ಆದರೂ, ಶ್ರೀರಾಮಕೃಷ್ಣರು ೧೮೮೫ರಲ್ಲಿ ದಾರುಣ ಕಾಯಿಲೆಗೆ ಒಳಗಾದರು. ಅವರ ಜೀವಿತದ ಕೊನೆಯ ಎಂಟು ತಿಂಗಳು ಅವರಿಗೆ ಅನವರತ ಸೇವೆ ಮಾಡಿದ ಶಿಷ್ಯರ ಪೈಕಿ ಒಬ್ಬರು ಪ್ರೇಮಾನಂದರು. ಶ್ರೀರಾಮಕೃಷ್ಣರು ೧೮೮೬ರ ಆಗಸ್ಟ್‌ನಲ್ಲಿ ಕಾಲವಾದ ನಂತರ ಬಾರಾನಗರದ ಬಾಡಿಗೆ ಮನೆಯೊಂದರಲ್ಲಿ ಆಶ್ರಮವನ್ನು ಸ್ಥಾಪಿಸಿದವರಲ್ಲಿ ಇವರೂ ಒಬ್ಬರು. ಅದು ಭೂತದ ಮನೆಯಾಗಿದ್ದರೂ ಅದನ್ನು ತೆಗೆದುಕೊಳ್ಳಲು ಕಾರಣ, ಮನೆ ದೊಡ್ಡದಾಗಿದ್ದು, ಬಾಡಿಗೆ ಬಹಳ ಕಡಿಮೆ ಇತ್ತು. ಅಂತಹ ಮನೆಯ ಹತ್ತಿರ ಬರಲೂ ಇತರರು ಇಚ್ಛಿಸುವುದಿಲ್ಲ. ಇದು ಅವರಿಗೆ ಅನುಕೂಲವೇ ಆಯಿತು. ಪಿಶಾಚಿಯೊಂದು ಬಂದುಹೋಗುವುದನ್ನು ನೋಡಿದ್ದರೆಂದು ನಾನು ಕೇಳಿದ್ದೆ. ಸಣ್ಣ ಕೋಣೆಯೊಂದರಲ್ಲಿ ಕಲ್ಲಿದ್ದಲನ್ನು ಇಡುತ್ತಿದ್ದರು. ಅಲ್ಲಿಗೆ ಬರುವ ಅಭ್ಯಾಸ ಆ ಪಿಶಾಚಿಗೆ ಇತ್ತಂತೆ. ಅದರಿಂದ ಅವರೇನೂ ಬಾಧಿತರಾಗಲಿಲ್ಲ.

ಬಾರಾನಗರದಲ್ಲಿ ಸ್ವಲ್ಪಕಾಲ ವಾಸವಿದ್ದ ಮೇಲೆ, ೧೮೮೬ರ ಕ್ರಿಸ್‌ಮಸ್ ಸಮಯದಲ್ಲಿ, ಸ್ವಾಮಿ ಪ್ರೇಮಾನಂದರ ತಾಯಿಯಿಂದ ಅವರ ಹಳ್ಳಿ ಆಂಟ್‌ಪುರಕ್ಕೆ ಬರಲು ಆಹ್ವಾನ ಬಂದಿತು. ನರೇನ್ ಮತ್ತು ಬಾಬುರಾಮನೂ ಸೇರಿದಂತೆ ಎಂಟು ಹುಡುಗರು ಹೋದರು. ಅಲ್ಲಿ ಅವರೆಲ್ಲ ನರೇನನಿಂದ ಸ್ಫೂರ್ತಿಗೊಂಡು ಉತ್ಕಟ ಆಧ್ಯಾತ್ಮಿಕ ಅಭೀಪ್ಸೆಗೊಳಗಾದರು. ಒಂದು ರಾತ್ರಿ ಅಂಗಳದಲ್ಲಿ ಧಗಧಗಿಸುತ್ತಿದ್ದ ಧುನಿಯ ಸುತ್ತ ಅವರೆಲ್ಲ ಕುಳಿತಿದ್ದಾಗ ಪ್ರಾಪಂಚಿಕ ಜೀವನವನ್ನು ತ್ಯಜಿಸಲು ನಿರ್ಧರಿಸಿದರು. ಅಂದು ಕ್ರಿಸ್‌ಮಸ್ ದಿನವಾಗಿತ್ತು. ಬಾರಾನಗರದ ಮನೆಗೆ ಹಿಂತಿರುಗಿದ ನಂತರ ಇವರು ಶ್ರೀರಾಮಕೃಷ್ಣರ ಇತರ ಶಿಷ್ಯರೊಂದಿಗೆ ವಿಧಿವತ್ತಾಗಿ ಸಂನ್ಯಾಸ ವ್ರತವನ್ನು ಕೈಗೊಂಡು, ಸಂನ್ಯಾಸನಾಮವನ್ನು ಸ್ವಾಮಿ ವಿವೇಕಾನಂದರಿಂದ ಸ್ವೀಕರಿಸಿದರು. ಬಾಬುರಾಮನು ನಿಜ ವಾಗಿಯೂ ಪ್ರೇಮದ ಮೂರ್ತ ಸ್ವರೂಪವೆಂದು ಅವರಿಗೆ ಅನ್ನಿಸಿದ್ದರಿಂದ, ನಾನು ಆಗಲೆ ಹೇಳಿದಂತೆ, ಅವರಿಗೆ ಪ್ರೇಮಾನಂದ ಎಂಬ ಹೆಸರನ್ನು ಕೊಟ್ಟರು. ಪ್ರೇಮಾನಂದ ಎಂದರೆ, ದಿವ್ಯ ಪ್ರೇಮದ ಆನಂದ.

ಬಾರಾನಗರದಲ್ಲಿ ಅವರೆಲ್ಲರೂ ವೈರಾಗ್ಯ ಜೀವನವನ್ನು ನಡೆಸಿದರು. ಅನಂತರ ಸ್ವಾಮಿ ಪ್ರೇಮಾನಂದರು ಆ ಕಾಲದ ಜೀವನದ ಬಗ್ಗೆ ಹೇಳುತ್ತಿದ್ದರು. ಅತ್ಯಂತ ಆವಶ್ಯಕವಾದ ವಸ್ತುಗಳನ್ನು ಕೊಳ್ಳಲೂ ಅವರಲ್ಲಿ ಹಣವಿರುತ್ತಿರಲಿಲ್ಲ. ಅನ್ನವಿದ್ದರೆ, ಅದಕ್ಕೆ ಸೇರಿಸಲು ಉಪ್ಪು ಇರುತ್ತಿರಲಿಲ್ಲ, ತರಕಾರಿ ಮತ್ತು ಇತರ ವಸ್ತುಗಳ ಮಾತು ಹಾಗಿರಲಿ. ಆದರೆ ಅವರು ಊಟ ಮತ್ತು ನಿದ್ರೆಯ ಬಗ್ಗೆ ಗಮನ ಕೊಡುತ್ತಿರಲಿಲ್ಲ. ಧ್ಯಾನ ಮತ್ತು ಇತರ ಆಧ್ಯಾತ್ಮಿಕ ಸಾಧನೆಗಳಲ್ಲೇ ಅನೇಕ ಗಂಟೆಗಳನ್ನು ಕಳೆಯುತ್ತಿದ್ದರು. ಭಗವದ್ಭಾವನೆಯಲ್ಲಿ ತನ್ಮಯರಾಗಿರುವುದೇ ಅವರ ಮನಸ್ಸನ್ನೆಲ್ಲ ಆವರಿಸಿತ್ತು. ಅವರಲ್ಲಿ ಸ್ವಾಮಿ ರಾಮಕೃಷ್ಣಾನಂದರೆಂಬುವರು ಇದ್ದರು. ಅವರು ದಿನಕ್ಕೆ ಒಮ್ಮೆ ಯಾದರೂ ಊಟ ಮಾಡುವಂತೆ ಎಲ್ಲರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ಹೇಗೋ ಎಲ್ಲರೂ ದೃಢಕಾಯರಾಗಿ ಶಕ್ತಿವಂತರಾಗಿದ್ದರು. ಆ ದಿನಗಳು ವಿಚಿತ್ರವಾಗಿ ಪ್ರಚಂಡ ಸಾಧನೆಯಿಂದ ಕೂಡಿದ್ದು, ಅವರೆಲ್ಲರೂ ಅನೇಕ ಆಧ್ಯಾತ್ಮಿಕ ಅನುಭವಗಳನ್ನು ಪಡೆದರು. ಅನಂತರ, ಸಾಧನೆಯಲ್ಲಿ ತಮ್ಮ ಮನಸ್ಸು ಸಂಪೂರ್ಣವಾಗಿ ಮುಳುಗಿ ಹೋಗಿರಬೇಕೆಂಬ ಪ್ರಬಲ ಇಚ್ಛೆಯಿಂದ ಅವರೆಲ್ಲ ಹತ್ತು ವರ್ಷಗಳ ಕಾಲ ಪರಿವ್ರಾಜಕರಾಗಿ ತಿರುಗಾಡಲು ಹೊರಟರು.

ಈ ಕಾಲದಲ್ಲಿ ಸ್ವಾಮಿ ಪ್ರೇಮಾನಂದರ ಜೀವನದ ಬಗ್ಗೆ ನಮಗೆ ತಿಳಿದಿರುವುದು ಅತ್ಯಲ್ಪ ; ಅದರ ವರದಿಗಳೂ ಸಿಕ್ಕಿಲ್ಲ. ಅವರು ಆಗಾಗ ಹೊರಗೆ ಹೋದರೂ, ಬಹುಕಾಲ ಮಠದಲ್ಲಿಯೇ ಇದ್ದರೆಂದು ನಮ್ಮ ಊಹೆ. ಅವರು ಕಾಶಿಯಲ್ಲಿ ಇದ್ದರು ಮತ್ತು ವೃಂದಾವನದಲ್ಲಿ ಹೆಚ್ಚು ಕಾಲ ಕಳೆದರೆಂದು ತಿಳಿದುಬಂದಿದೆ. ಉತ್ತರ ಭಾರತದಲ್ಲಿ ಮತ್ತೊಬ್ಬ ಸಾಧುಗಳೊಂದಿಗೆ ೧೮೯೭ರ ಪ್ರಾರಂಭದ ಕಾಲದಲ್ಲಿ, ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ಹಿಂದಿರುಗುವವರೆಗೆ ಸುತ್ತಾಡುತ್ತಿದ್ದರೆಂದು ನಮಗೆ ತಿಳಿದಿದೆ.

೨

ಸ್ವಾಮಿ ವಿವೇಕಾನಂದರು ಪಶ್ಚಿಮ ದೇಶಗಳಿಂದ ಹಿಂತಿರುಗಿ ಬಂದ ಮೇಲೆ ಶ್ರೀರಾಮಕೃಷ್ಣರ ಶಿಷ್ಯರ ಜೀವನದಲ್ಲಿ, ಅದರಲ್ಲೂ ಸಂನ್ಯಾಸೀ ಶಿಷ್ಯರ ಜೀವನದಲ್ಲಿ ಒಂದು ಹೊಸ

ಪರ್ವ ಪ್ರಾರಂಭವಾಯಿತು. ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರ ಜೀವನ ಅನೇಕ ಪ್ರಮುಖ ಘಟ್ಟಗಳಲ್ಲಿ ಇರುವುದನ್ನು ನಾವು ನೋಡುವೆವು: ಮೊದಲನೆಯದು, ಅವರು ತಮ್ಮ ಗುರುಗಳ ಜತೆ ಕಳೆದ ಕಾಲ; ಎರಡನೆಯದು, ಶ್ರೀರಾಮಕೃಷ್ಣರು ೧೮೮೬ರಲ್ಲಿ ಕಾಲವಾದ ನಂತರದ ಜೀವನ ಕಠೋರ ವೈರಾಗ್ಯ, ತಪಶ್ಚರ್ಯೆ, ಮತ್ತು ಪರಿವ್ರಾಜಕ ಜೀವನ; ಮೂರನೆಯದು, ಸ್ವಾಮಿ ವಿವೇಕಾನಂದರು ಪಾಶ್ಚಿಮಾತ್ಯ ದೇಶಗಳಿಂದ ಹಿಂತಿರುಗಿದ ನಂತರದ್ದು. ಈ ಮೂರನೆಯ ಕಾಲವು ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ ಅಮೆರಿಕಾಕ್ಕೆ ಹೋಗಿ ಬೋಧನೆಯನ್ನು ಪ್ರಾರಂಭಿಸಿದಾಗಲೇ ಆರಂಭವಾಯಿತೆನ್ನಬಹುದು, ಏಕೆಂದರೆ ಅವರ ಲೋಕಶಿಕ್ಷಣ ಆರಂಭವಾದುದು ಆಗಲೇ. ನಿಮಗೆ ತಿಳಿದಂತೆ ಸ್ವಾಮೀಜಿಯವರು ತಮ್ಮ ವಾಗ್ವೈಭವ ಮತ್ತು ಬೋಧನೆಗಳಿಂದ ಅಮೆರಿಕಾದ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿದರು. ಅವರ ಸೋದರ ಸಂನ್ಯಾಸಿಗಳು ಅವರ ಯಶಸ್ಸಿನ ಬಗ್ಗೆ ತಿಳಿದ ಮೇಲೆ ಮತ್ತು ಅವರ ಅಮೆರಿಕಾದ ಪ್ರವಚನಗಳ ವೃತ್ತಪತ್ರಿಕಾವರದಿಗಳನ್ನು ನೋಡಿದ ಮೇಲೆ ಸ್ವಾಮೀಜಿಯವರ ಬಗ್ಗೆ ಹೆಮ್ಮೆಪಟ್ಟರು. ಆದರೆ ಅದರಿಂದ ಅವರ ಮನಸ್ಸೂ ಸ್ವಲ್ಪ ಕದಡಿತು.

ಪಶ್ಚಿಮ ದೇಶಗಳಲ್ಲಿ ಸ್ವಾಮಿ ವಿವೇಕಾನಂದರು ಅದ್ವೈತ ವೇದಾಂತವನ್ನು ಬೋಧಿಸಿದರು. ಶ್ರೀರಾಮಕೃಷ್ಣರೂ ಕೂಡ ವೇದಾಂತದ ಬಗ್ಗೆ ಮಾತನಾಡಿದ್ದರು. ಆದರೆ ಅವರು ಭಗವಂತನ ಸಾಕ್ಷಾತ್ಕಾರಕ್ಕೆ ಇರುವ ಅನೇಕ ಮಾರ್ಗಗಳ ಬಗ್ಗೆ ಮಾತನಾಡಿದ್ದರು; ಸ್ವಾಮೀಜಿಯವರಂತೆ ಅವೆಲ್ಲವನ್ನೂ ವೇದಾಂತವೆಂಬ ಒಂದೇ ಹೆಸರಿನಡಿ ತಂದಿರಲಿಲ್ಲ. ಇದು ಅವರ ಸೋದರ ಸಂನ್ಯಾಸಿಗಳಿಗೆ ಒಗಟಿನಂತಾಯಿತು. ಅಲ್ಲದೆ, ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರ ಬಗ್ಗೆ ಬಹಿರಂಗವಾಗಿ ಏನನ್ನೂ ಬೋಧಿಸಲಿಲ್ಲ. ಶ್ರೀರಾಮಕೃಷ್ಣರನ್ನು ಅವತಾರ ಪುರುಷರೆಂದೂ, ಸ್ವಾಮಿ ವಿವೇಕಾನಂದರು ಅವರ ಸಂದೇಶ ವಾಹಕರೆಂದೂ ಸೋದರ ಸಂನ್ಯಾಸಿಗಳೆಲ್ಲ ಗುರುತಿಸಿದ್ದರು. ಸ್ವಾಮೀಜಿಯವರು ತಮ್ಮ ಗುರುಗಳ ಬಗ್ಗೆ ಎರಡು ಪ್ರವಚನಗಳನ್ನು ಕೊಟ್ಟಿದ್ದರು, ಅಷ್ಟೆ. ಅವರು, ''ನನ್ನ ಗುರುಗಳು ಒಬ್ಬ ಅವತಾರಪುರುಷರು, ಮಾನವರ ಉದ್ಧಾರಕ್ಕಾಗಿ ಭೂಮಿಯ ಮೇಲೆ ಅವತರಿಸಿದರು. ಇವು ಅವರ ಬೋಧನೆಗಳು, ಇದು ಅವರ ಜೀವನ; ಅವರನ್ನು ನೀವು ಪೂಜಿಸಿ, ನೀವು ಮುಕ್ತರಾಗುವಿರಿ'' ಎಂದು ಹೇಳಲಿಲ್ಲ, ಇದಾವುದನ್ನೂ ಅವರು ಬೋಧಿಸಲಿಲ್ಲ. ಕೇವಲ ತತ್ತ್ವಗಳನ್ನು ಪ್ರತಿಪಾದಿಸಿದರು. ಇದೂ ಕೂಡ ಕೆಲವು ಸೋದರ ಸಂನ್ಯಾಸಿಗಳಿಗೆ ಒಗಟಾಗಿ ಕಂಡಿತು. ಈಶ್ವರವಾದ ಮತ್ತು ಭಕ್ತಿಮಾರ್ಗ ಇವೇ ಶ್ರೀರಾಮಕೃಷ್ಣರ ಬೋಧನೆಯ ಸಾರಾಂಶವಾಗಿತ್ತು. ಸ್ವಾಮಿ ವಿವೇಕಾನಂದರು ಮುಖ್ಯವಾಗಿ ಅದ್ವೈತವನ್ನು ಬೋಧಿಸಲು ಪ್ರಾರಂಭಿಸಿದರು. ಅವರು ಜನರನ್ನು ಶುದ್ಧ-ಬುದ್ಧ-ಮುಕ್ತಾತ್ಮರೆಂದೂ, ತಮ್ಮಲ್ಲಿ ಅನಂತ ಶಕ್ತಿ ಅಂತರ್ಗತವಾಗಿರುವುದೆಂದು ಭಾವಿಸಬೇಕೆಂದೂ ಬೋಧಿಸಿದರು. ಇದನ್ನು ಕೇಳಿದ ಸೋದರ ಸಂನ್ಯಾಸಿಗಳನೇಕರು, ಸ್ವಾಮೀಜಿಯವರು ಶ್ರೀರಾಮಕೃಷ್ಣರನ್ನು ಮರೆತಿರುವರು ಮತ್ತು ತಮ್ಮದೇ ಆದ ಮಾರ್ಗದಲ್ಲಿ ಹೋಗುತ್ತಿರುವರು ಎಂಬ ಅವಸರದ ನಿರ್ಧಾರಕ್ಕೆ ಬಂದರು.

ಇದರ ಜೊತೆಗೆ ಸ್ವಾಮಿ ವಿವೇಕಾನಂದರು ಅಮೆರಿಕಾದಿಂದ ತಮ್ಮ ಸೋದರ ಸಂನ್ಯಾಸಿಗಳಿಗೆ ಕಿಡಿಕಾರುವ ಪತ್ರಗಳನ್ನು ಬರೆಯುತ್ತಿದ್ದರು. ಅವುಗಳಲ್ಲಿದ್ದ ಮುಖ್ಯವಾದ ಅಂಶವೆಂದರೆ, ಸಂನ್ಯಾಸಿಗಳು ಮಠದಲ್ಲಿ ಬಾಹ್ಯಪೂಜೆಯನ್ನು ಕಡಿಮೆ ಮಾಡಬೇಕೆಂಬುದಾಗಿತ್ತು. ನೀವು ಪೂಜಿಸಬೇಕಾದರೆ ಭಗವಂತನ ವಿರಾಡ್ರೂಪವನ್ನು ಪೂಜಿಸಿ. ಅವನು ಈ ಪ್ರಪಂಚದಲ್ಲಿ ವ್ಯಕ್ತನಾಗಿರುವನು, ಅದರಲ್ಲೂ ಮನುಷ್ಯನ ರೂಪದಲ್ಲಿ ಎಂದು ಹೇಳಿದರು. ''ನಮ್ಮ ಕಣ್ಣಿನ ಮುಂದೆಯೇ ಜೀವಂತ ಭಗವಂತ - ಮನುಷ್ಯ - ಇರುವಾಗ, ಗುಡಿಯೊಂದನ್ನು ಕಟ್ಟಿ ಅದರಲ್ಲಿ ದೇವರ ಒಂದು ಚಿತ್ರವನ್ನೋ ವಿಗ್ರಹವನ್ನೋ ಪ್ರತೀಕವಾಗಿ ಇರಿಸಿ, ಅದಕ್ಕೆ ನೈವೇದ್ಯ ಮತ್ತು ಎಲ್ಲ ವಿಧವಾದ ಶಾಸ್ತ್ರೋಕ್ತ ಪೂಜೆಯನ್ನು ಮಾಡುವುದರಿಂದ ಏನು ಪ್ರಯೋಜನ? ವಿಗ್ರಹ ಅಥವಾ ಚಿಹ್ನೆ ಭೌತಿಕವಾದುದು, ನಿರ್ಜೀವವಾದುದು; ಅಲ್ಲಿ ದೇವರು ಇರುವನೆಂದು ನೀವು ಊಹಿಸಬೇಕಾಗುವುದು. ಆದರೆ ಇಲ್ಲಿ ಇರುವ ಮಾನವರೆಲ್ಲರೂ ಭಗವಂತನ ಜೀವಂತ ಪ್ರತೀಕವಾಗಿರುವರು. ಅಲ್ಲಿ ನೀವು ಚೈತನ್ಯವನ್ನು ಊಹಿಸಿಕೊಳ್ಳಬೇಕಾಗಿಲ್ಲ, ಅವರೆಲ್ಲ ಆಗಲೆ ಚೈತನ್ಯಮಯರಾಗಿರುವರು. ಭಗವಂತ ಆಗಲೆ ಅಲ್ಲಿ ಇರುವನು. ಅವನನ್ನು ಪೂಜಿಸಿ!''

ಈ ದೃಷ್ಟಿಯಿಂದ ಅವರು ಸೋದರ ಸಂನ್ಯಾಸಿಗಳಿಗೆ, ಗ್ರಾಮದ ಜನರನ್ನು ವಿದ್ಯಾವಂತರನ್ನಾಗಿ ಮಾಡುವಂತೆ, ರೋಗಿಗಳಿಗೆ ಶುಶ್ರೂಷೆ ಮಾಡುವಂತೆ, ಹಸಿದವರಿಗೆ ಆಹಾರ ನೀಡುವಂತೆ, ಭಾರತದ ಜನರಿಗೆ ಎಲ್ಲ ಬಗೆಯ ಸೇವೆ ಮಾಡುವಂತೆ ಹೇಳಲಾರಂಭಿಸಿದರು. ಈ ಬಗೆಯ ಮಾನವ ಸೇವೆಗಾಗಿ ಅವರೆಲ್ಲ ಒಟ್ಟುಗೂಡುವಂತೆ ಹೇಳಿದರು. ಈಗ ಇದೂ ಕೂಡ ಶ್ರೀರಾಮಕೃಷ್ಣರು ಬೋಧಿಸಿದ್ದುದಕ್ಕೆ ವಿರೋಧವಾಗಿರುವಂತೆ ಅವರಿಗೆ ಕಂಡಿತು. ಸ್ವಾಮಿ ವಿವೇಕಾನಂದರು ತಮ್ಮ ಗುರುಭಾಯಿಗಳನ್ನು ಪ್ರಪಂಚಕ್ಕೆ ಭೌತಿಕಕಾರ್ಯಗಳಿಗೆ ತಳ್ಳುತ್ತಿದ್ದರು, ಆದರೆ ಶ್ರೀರಾಮಕೃಷ್ಣರು ಅವರನ್ನು ಅಂತಹ ವಿಷಯಗಳಿಂದ ಹಿಮ್ಮುಖವಾಗುವಂತೆ, ಜಪ ಧ್ಯಾನ ಮುಂತಾದ ಆಧ್ಯಾತ್ಮಿಕ ಸಾಧನೆಗಳಲ್ಲಿ ಸಂಪೂರ್ಣವಾಗಿ ತೊಡಗುವಂತೆ ಹೇಳಿದ್ದರು.

(ಮುಂದುವರಿಯುವುದು) ✷

ಸ್ವಾಮಿ ನಿತ್ಯಸ್ಥಾನಂದ

ಭಕ್ತನ ಲಕ್ಷಣ



ಭಾಗ ೧

ಭಕ್ತಿ ಎಂದರೆ ಭಗವಂತನನ್ನು ಪೂಜಿಸುವುದು, ಪ್ರಾರ್ಥಿಸುವುದು, ಅವನ ನಾಮ ಗುಣ ಕೀರ್ತನೆ ಮಾಡುವುದು ಇತ್ಯಾದಿ. ಆದರೆ ಇಷ್ಟು ಮಾಡಿಬಿಟ್ಟರೆ ಸಾಕು, ಜೀವನವನ್ನು ಹೇಗೆ ಬೇಕಾದರೂ ನಡೆಸಬಹುದು ಎಂದರೆ ನಡೆಯುವುದಿಲ್ಲ. ದೇವಸ್ಥಾನಕ್ಕೆ ಹೋಗುವುದು, ಅಲ್ಲಿ ಸೇವೆ ಸಲ್ಲಿಸುವುದು, ಭಗವತ್ಸಂಬಂಧವಾದ ಉಪನ್ಯಾಸಗಳನ್ನು ಕೇಳುವುದು, ಮನೆಗೆ ಹೋಗಿ ಮನಬಂದಂತೆ ವರ್ತಿಸುವುದು, ಮಾತನಾಡುವುದು ಮತ್ತು ಆಲೋಚಿಸುವುದು – ಅನೇಕರಿಗೆ ಧರ್ಮ ಎಂದರೆ ಇಷ್ಟೇ. ಅನೇಕರ ನಿತ್ಯ ಜೀವನಕ್ಕೂ ಧಾರ್ಮಿಕ ಆಚರಣೆಗೂ ಸಂಬಂಧವೇ ಇರುವುದಿಲ್ಲ – ಧರ್ಮವೇ ಬೇರೆ, ವ್ಯವಹಾರವೇ ಬೇರೆ. ಹೀಗೆ ಅವರು ದ್ವಿಬಗೆಯ ಅಥವಾ ಬಹುಬಗೆಯ ಜೀವನ ನಡೆಸುತ್ತಾರೆ. ತಮ್ಮ ವ್ಯವಹಾರದಲ್ಲಿ ಯಥಾರ್ಥ ಧರ್ಮಭಾವ ಪ್ರವೇಶಿಸದಂತೆ ಅವರು ತುಂಬ ಎಚ್ಚರಿಕೆ ವಹಿಸುತ್ತಾರೆ. ದೇವರಿಗೆ ಪ್ರತ್ಯೇಕವಾದ ಸ್ಥಾನವನ್ನು ಕಲ್ಪಿಸಲಾಗಿದೆ, ಅವನು ದೇವಸ್ಥಾನದಲ್ಲಿಯೇ ಇರಲಿ, ಅವನು ನಮ್ಮ ದಿನನಿತ್ಯ ವ್ಯವಹಾರದಲ್ಲಿ ಪ್ರವೇಶಿಸಬಾರದು, ನಾವೇ ಅವನೆಡೆಗೆ ಹೋಗುತ್ತೇವೆ, ಅವನು ನಮ್ಮೆಡೆಗೆ ಬಂದರೆ ಅವನಿಗೂ ತೊಂದರೆ ನಮಗೂ ತೊಂದರೆ – ಇದು ಅನೇಕರ ಧೋರಣೆ, ಆದರೆ ಬಾಯಿಬಿಟ್ಟು ಹೇಳುವುದಿಲ್ಲ ಅಷ್ಟೇ. ಆಶ್ಚರ್ಯವೇನೆಂದರೆ, ನಾವು ದೇವರನ್ನು ಅಂತರ್ಯಾಮಿ, ಅಂತರಾತ್ಮ, ಸರ್ವವ್ಯಾಪಿ ಎಂದು ಕರೆಯುತ್ತೇವೆ, ಆದರೆ ಅವನನ್ನು ದೂರವಿರಿಸುತ್ತೇವೆ. ಅಂತರ್ಯಾಮಿಯಾದ ಭಗವಂತನು ನಮ್ಮ ಎಲ್ಲ ಮಾತು ಕೃತಿ ಆಲೋಚನೆಗಳ ಮೇಲೆ ತನ್ನ ಪ್ರಭಾವ ಬೀರಬೇಕು, ನಮ್ಮ ಜೀವನವನ್ನು ಪರಿವರ್ತಿಸಬೇಕು. ನಾವು ಇದಕ್ಕೆ ಅವಕಾಶ ಕೊಡುವುದಿಲ್ಲ – ಪ್ರಾಪಂಚಿಕ ಆಕರ್ಷಣೆ ಭಗವದಾಕರ್ಷಣೆಗಿಂತ ಪ್ರಬಲವಾಗಿರುವುದರಿಂದ.

ತರಕಾರಿಯನ್ನು ಒಲೆಯ ಮೇಲಿಟ್ಟು ಬೆಂಕಿಯನ್ನು ಹೊತ್ತಿಸಿದರೆ ಮಾತ್ರ ಅದು ಬೆಂದು ಪರಿವರ್ತನೆಗೊಳ್ಳುತ್ತದೆ. ಬೆಂಕಿಯನ್ನೇ ಹೊತ್ತಿಸದಿದ್ದರೆ ಯಾವ ಬದಲಾವಣೆಯೂ ಆಗುವುದಿಲ್ಲ. ಹಾಗೆಯೇ ಕೇವಲ ಧಾರ್ಮಿಕ ಆಚರಣೆಯಿಂದ ಏನೂ ಪ್ರಯೋಜನವಿಲ್ಲ, ಅದು ಭಕ್ತಿಭಾವಾಗ್ನಿಯಿಂದ ಉರಿಯಬೇಕು. ಆಗ ಅದು ನಮ್ಮ ವ್ಯಕ್ತಿತ್ವದ ಎಲ್ಲ ಅಂಶಗಳನ್ನೂ ಬೇಯಿಸಿ ಪಕ್ವಗೊಳಿಸುತ್ತದೆ, ಇಡೀ ವ್ಯಕ್ತಿತ್ವವೇ ಆಗ ಸಂಪೂರ್ಣ ಪರಿವರ್ತಿತವಾಗುತ್ತದೆ. ಅಂತಹ ಪರಿವರ್ತಿತ ವ್ಯಕ್ತಿಯ ಲಕ್ಷಣಗಳಾವುವು ಎಂಬುದನ್ನು ಶ್ರೀಕೃಷ್ಣನು ಹನ್ನೆರಡನೆಯ ಅಧ್ಯಾಯದಲ್ಲಿ ವಿವರಿಸುತ್ತಾನೆ. ಈ ಲಕ್ಷಣಗಳು ಯಾವ ವ್ಯಕ್ತಿಯಲ್ಲಿ ಇರುತ್ತವೆಯೋ ಅವನೇ ನಿಜವಾದ ಭಕ್ತನು. ಈ ಲಕ್ಷಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಎಷ್ಟರಮಟ್ಟಿಗೆ ಭಕ್ತರು ಎಂಬುದನ್ನು ತಿಳಿದುಕೊಳ್ಳಬಹುದು. ಇವುಗಳನ್ನು ನಮಗೇ ಅನ್ವಯಿಸಿಕೊಳ್ಳಬೇಕು, ಇತರರಿಗಲ್ಲ. ಈ ಗುಣಗಳು ಭಕ್ತಿಯ ಪರಿಣಾಮ ಮಾತ್ರವಲ್ಲದೆ, ಭಕ್ತಿಯೇ ಇವುಗಳ ಫಲವೂ ಆಗಬಹುದು. ಇವು ಯಾವುವೆಂಬುದನ್ನು ನೋಡೋಣ.

೧. ಅದ್ವೇಷ್ಟಾ ಸರ್ವಭೂತಾನಾಂ : ಯಾರನ್ನೂ ಯಾವುದನ್ನೂ ದ್ವೇಷಿಸದವನು. ಪ್ರೀತಿ ಮತ್ತು ದ್ವೇಷ ಎರಡು ಒಟ್ಟಿಗೆ ಇರಲಾರವು ಬೆಳಕು ಕತ್ತಲೆಗಳಂತೆ. ಭಗವಂತನನ್ನು ಪ್ರೀತಿಸಿ ಇತರರನ್ನು ದ್ವೇಷಿಸಲಾಗುವುದಿಲ್ಲ. ಏಕೆಂದರೆ ಪ್ರೀತಿ ಎನ್ನುವುದು ಒಂದು ದೈವೀಗುಣ. ಅದು ಹೃದಯದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಬೇಕಾದರೆ ಅಲ್ಲಿ ದ್ವೇಷದ ಲವಲೇಶವೂ ಇರುವಂತಿಲ್ಲ. ರೈತನು ಹೊಲದಲ್ಲಿ ಬಿತ್ತನೆ ಮಾಡುವುದಕ್ಕೆ ಮುಂಚೆ ಎಲ್ಲ ಕಳೆಯನ್ನೂ ಕಿತ್ತು ಅದನ್ನು 'ನಿಷ್ಕಳೆ'ಯಾಗಿ ಮಾಡುತ್ತಾನೆ. ಆಗಲೇ ಫಸಲು ಚೆನ್ನಾಗಿ ಬರುವುದಕ್ಕೆ ಸಾಧ್ಯ. ಮೈಕೇಲ್ ನೈಮಿ ಎಂಬುವವರು ಹೇಳುತ್ತಾರೆ : ''ಹೃದಯದಲ್ಲಿ ದ್ವೇಷವಿರುವವರೆಗೂ ಪ್ರೀತಿಯ ಸುಖವನ್ನು ಅನುಭವಿಸಲಾಗುವುದಿಲ್ಲ.'' ಜಡವಸ್ತುವಿಂದಾಗಲಿ, ಪ್ರಾಣಿಯಿಂದಾಗಲಿ. ಮಗುವಿನಿಂದಾಗಲಿ ತೊಂದರೆಯುಂಟಾದರೆ ನಾವು ಅದನ್ನು ದ್ವೇಷಿಸುವುದಿಲ್ಲ. ಆದರೆ ಮನುಷ್ಯನಿಂದಾದರೆ ದ್ವೇಷಿಸುತ್ತೇವೆ. ಏಕೆಂದರೆ ಮನುಷ್ಯನ ಕೃತಿಯ ಹಿಂದೆ ಒಂದು ಉದ್ದೇಶವನ್ನು ನಾವು ಆರೋಪಿಸುತ್ತೇವೆ. ಇದನ್ನು ಇನ್ನೊಂದು ದೃಷ್ಟಿಯಿಂದ ನಾವು ನೋಡಬಹುದು. ಒಂದು ಕೊಂಬೆಯು ಮೈಮೇಲೆ ಬಿದ್ದು ಗಾಯವಾದರೆ ನಾವು ಮರವನ್ನು ದ್ವೇಷಿಸುತ್ತೇವೆಯೆ? ಇಲ್ಲ. ಕೊಂಬೆಯು ಕೆಳಗೆಬೀಳುವುದು ಪ್ರಕೃತಿಯ ಕಾರ್ಯಕಾರಣ ನಿಯಮವನ್ನು ಅನುಸರಿಸಿ ನಮ್ಮ ಮೈಮೇಲೆ ಬೀಳುವುದು ಒಂದು ಆಕಸ್ಮಿಕ

ಅಷ್ಟೇ. ಹಾಗೆಯೇ ಒಬ್ಬ ವ್ಯಕ್ತಿಯು ನಮಗೆ ತೊಂದರೆ ಕೊಡುವುದು ಪ್ರಕೃತಿಯ ಅಂಶವಾದ ಮಾನಸಿಕ ಕಾರ್ಯಕಾರಣ ನಿಯಮವನ್ನು ಅನುಸರಿಸಿಯೇ. ಅವನು ಆ ವಿಷಯದಲ್ಲಿ ಅಸಹಾಯಕನಾಗಿರುತ್ತಾನೆ. ಅದನ್ನು ನಿಗ್ರಹಿಸುವ ಸಾಮರ್ಥ್ಯ ಅವನಿಗಿದೆ ನಿಜ. ಆದರೆ ಅವನಿನ್ನೂ ಆ ಸ್ಥಿತಿಯನ್ನು ಮುಟ್ಟಿರುವುದಿಲ್ಲ. ಆದರೆ ನಾವು ಪ್ರತಿಕ್ರಿಯೆ ತೋರಿಸಿದರೆ, ಪ್ರತಿಯಾಗಿ ಅವನನ್ನು ದ್ವೇಷಿಸಿದರೆ ನಾವೂ ಅವನ ಮಟ್ಟಕ್ಕೆ ಇಳಿದಂತಾಗುತ್ತದೆ.

ಎಲ್ಲರೂ ನಮ್ಮವರೇ ಆದಾಗ ದ್ವೇಷಕ್ಕೆ ಅವಕಾಶವಿರುವುದಿಲ್ಲ. ಯಾರಿಂದಾದರೂ ತೊಂದರೆಯಾದರೂ ಅದನ್ನು ಸಹಿಸಿಕೊಳ್ಳುತ್ತೇವೆ. ಕೆಲವೊಮ್ಮೆ ತಿನ್ನುವಾಗ ಹಲ್ಲು ನಾಲಿಗೆಯನ್ನು ಕಚ್ಚಿ ನೋವನ್ನುಂಟುಮಾಡುತ್ತದೆ. ಇಲ್ಲಿ ನಾಲಿಗೆಯೂ ನಮ್ಮದೆ, ಹಲ್ಲೂ ನಮ್ಮದೆ. ನಾವು ಹಲ್ಲಿಗೆ ಶಿಕ್ಷೆ ಕೊಡಲಾಗುವುದೆ? ಒಂದು ಸುಂದರ ಸಂಸ್ಕೃತ ಸುಭಾಷಿತವಿದೆ :

ಉಪಕಾರಿಷು ಯಃ ಸಾಧುಃ ಸಾಧುತ್ವೇ ತಸ್ಯ ಕೋ ಗುಣಃ ।
ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ ॥

'ಉಪಕಾರ ಮಾಡಿದವರ ವಿಷಯದಲ್ಲಿ ಸಾಧುವಾಗಿರುವುದರಲ್ಲಿ ಹೆಗ್ಗಳಿಕೆಯೇನಿದೆ? ಯಾರು ಅಪಕಾರಿಗಳ ವಿಷಯದಲ್ಲಿಯೂ ಸಾಧುವಾಗಿರುತ್ತಾನೋ ಅವನೇ ನಿಜವಾದ ಸಾಧು.'

'ಭಕ್ತಿ ಸೌರಭ' ಎಂಬ ಗ್ರಂಥದಲ್ಲಿ ದ್ವೇಷ ಶಬ್ದದ ವಿವರಣೆ ಈ ರೀತಿ ಇದೆ :

''ದ್ವಿ-ವಿಷವು ದ್ವೇಷ. ಈ ದ್ವೇಷವೆನ್ನುವುದು ಎರಡರಷ್ಟು ವಿಷವೆಂದು ಅರ್ಥ. ಲೋಕದಲ್ಲಿ ವಿಷಪ್ರಾಶನಕ್ಕೆ ಗುರಿಯಾದವರು ಸಾಯುತ್ತಾರೆ, ವಿಷವಿಟ್ಟವರು ಸಾಯುವುದಿಲ್ಲ. ಆದರೆ ದ್ವೇಷವು ಹಾಗಲ್ಲ, ದ್ವೇಷಿಸುವವರು, ದ್ವೇಷಕ್ಕೆ ಗುರಿಯಾದವರು ಇಬ್ಬರೂ ನಾಶವಾಗುತ್ತಾರೆ.''

ನಾವು ಯಾರನ್ನು ದ್ವೇಷಿಸಿದರೂ ಭಗವಂತನನ್ನೇ ದ್ವೇಷಿಸಿದಂತಾಗುತ್ತದೆ. ಏಕೆಂದರೆ ಎಲ್ಲರೂ ಯಥಾರ್ಥ ದೃಷ್ಟಿಯಿಂದ ಭಗವತ್ ಸ್ವರೂಪರೇ ತಾನೆ. ಈ ಭಾವನೆಯನ್ನು ದೀನನಾಥ್ ದಿನೇಶ್ ಎಂಬುವವರು ವಿಶಿಷ್ಟ ರೀತಿಯಲ್ಲಿ ವ್ಯಕ್ತಪಡಿಸಿರುವರು. **ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ** – ''ಎಲ್ಲ ದೇವರಿಗೆ ಮಾಡಿದ ನಮಸ್ಕಾರಗಳೂ ಕೇಶವನಿಗೇ ತಲುಪುತ್ತವೆ'' ಎಂದು ನಾವು ಹೇಳುತ್ತೇವೆ. ಇದರಂತೆಯೇ **ಸರ್ವ ಜೀವತಿರಸ್ಕಾರಃ ಕೇಶವಂ ಪ್ರತಿಗಚ್ಛತಿ** ಎಲ್ಲ ಜೀವಿಗಳ ತಿರಸ್ಕಾರವೂ ಕೇಶವನನ್ನೇ ತಲಪುತ್ತದೆ – ಎಂಬುದೂ ಅಷ್ಟೇ ಸತ್ಯ. *('ಭಕ್ತಿ ಸೌರಭ' ದಿಂದ)*

೨. ಮೈತ್ರ: ಮಿತ್ರಭಾವದಿಂದ ಇರುವವನು. ಕೇವಲ ದ್ವೇಷಿಸದಿದ್ದರೆ ಸಾಲದು. ಎಲ್ಲರ ವಿಷಯದಲ್ಲಿಯೂ ಉದಾಸೀನರಾಗಿದ್ದು, ಯಾರೊಡನೆಯೂ ಬೆರೆಯದೆ, ಭಾವಹೀನರಾಗಿ ಒಂದು ಬಗೆಯ ಒಂಟಿತನದ ಜೀವನ ನಡೆಸುವವರು ಅನೇಕರಿದ್ದಾರೆ. ಅವರು ನಿಃಸಾರ್ಥಕ ಸಪ್ಪೆಯ ಜೀವನ ನಡೆಸುತ್ತಾರೆ. ಅವರು ಸುಖಿಗಳೂ ಅಲ್ಲ ದುಃಖಿಗಳೂ ಅಲ್ಲ. ಅವರು ಸುಖದುಃಖಗಳನ್ನು ಭಾವಿಸುವಷ್ಟು ವಿಕಾಸ ಹೊಂದಿರುವುದಿಲ್ಲ. ಇಂತಹ ಜಡಸ್ವಭಾವದ ವ್ಯಕ್ತಿಗಳು ಯಾವುದಕ್ಕೂ ಯೋಗ್ಯರಲ್ಲ. ಆದರೆ ಭಕ್ತನಲ್ಲಿ ತೀವ್ರವಾಗಿ ಭಾವಿಸುವ ಶಕ್ತಿಯಿರುತ್ತದೆ. ಅವನು ಸಂಪೂರ್ಣವಾಗಿ ಸಾತ್ವಿಕ ಭಾವದಿಂದ ತುಂಬಿಕೊಂಡಿರುತ್ತಾನೆ. ಆದ್ದರಿಂದ ಅವನಿಗೆ ಎಲ್ಲರೂ ಮಿತ್ರರಾಗಿರುವುದು ಮಾತ್ರವಲ್ಲದೆ, ಅವನೂ ಎಲ್ಲರಿಗೂ ಮಿತ್ರನಾಗಿರುತ್ತಾನೆ. ''ಸಂಪತ್ತಿರುವಾಗ ಬರುತ್ತಾರೆ, ವಿಪತ್ತಿನಲ್ಲಿ ದೂರವಾಗುತ್ತಾರೆ'' – ಈ ಸ್ವಭಾವದ ವ್ಯಕ್ತಿಯಲ್ಲ ಅವನು.

ಮಹಾತ್ಮಾ ಗಾಂಧೀಜಿಯವರು ಚರಕದಲ್ಲಿ ನೂಲುತ್ತ ಕುಳಿತಿದ್ದರು. ಪಾಶ್ಚಾತ್ಯ ವ್ಯಕ್ತಿಯೋರ್ವನು ಅವರ ಸಂದರ್ಶನಕ್ಕಾಗಿ ಬಂದನು. ಮಾತಿನ ಸಂದರ್ಭದಲ್ಲಿ ಅವನು ಕೇಳಿದನು: ''ನಿನ್ನ ಶತ್ರುವನ್ನು ನೀನು ನಿನ್ನವನನ್ನಾಗಿ ಪ್ರೀತಿಸು ಎಂದು ಯೇಸುಕ್ರಿಸ್ತನು ಹೇಳುತ್ತಾನೆ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?'' ಗಾಂಧೀಜಿಯವರು ಮುಗುಳ್ನಕ್ಕು, ''ನಾನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ.'' ವಿಜಯಲಕ್ಷ್ಮಿ ಪಂಡಿತ್ ಅವರು ಒಂದು ಜಾಗತಿಕ ಸಮಾವೇಶದಲ್ಲಿ ಭಾರತದ ಪ್ರತಿನಿಧಿಯಾಗಿ ವಿದೇಶಕ್ಕೆ ಹೊರಡುವುದಕ್ಕೆ ಮುಂಚೆ ಗಾಂಧೀಜಿಯವರ ಆಶೀರ್ವಾದವನ್ನು ಪಡೆಯಲು ಹೋಗುತ್ತಾರೆ. ಗಾಂಧೀಜಿಯವರು ಅವರನ್ನು ವಿಚಾರಿಸಿದರು, ''ನೀನು ಮನೆಯವರಿಂದ ಬೀಳ್ಕೊಂಡಿದ್ದೀಯ?'' ಎಂದು. ಕೂಡಲೆ ವಿಜಯಲಕ್ಷ್ಮಿಯವರ ಮುಖ ಕೆಂಪಾಯಿತು. ಇವರು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮನೆಯವರಿಗೆ ಇಷ್ಟವಿರಲಿಲ್ಲ. ಕೋಪೋದ್ರಿಕ್ತರಾಗಿ ಉತ್ತರಿಸಿದರು : ''ಇಲ್ಲ. ನನ್ನ ಕುಟುಂಬದವರು ನನಗೆ ಎಂಥ ಕೆಡುಕು ಮಾಡಿರುವರು? ನಾನು ಅವರನ್ನು ಎಂದೂ ಕ್ಷಮಿಸಲಾರೆ.'' ಗಾಂಧೀಜಿ ಉತ್ತರಿಸಿದರು, ''ನೀನಲ್ಲದೆ ಬೇರಾರೂ ನಿನಗೆ ಕೆಡುಕನ್ನುಂಟುಮಾಡಲಾರರು. ನಿನಗೆ ಹಾನಿಯನ್ನುಂಟುಮಾಡುವಷ್ಟು ಕಟುತ್ವ ನಿನ್ನ ಹೃದಯದಲ್ಲಿ ಆಗಲೇ ಮನೆಮಾಡಿಕೊಂಡಿದೆ. ಮೊದಲು ಅವನ್ನು ಹೋಗಲಾಡಿಸು.'' ಹೊರಗಿನ ಶತ್ರು ನಿಜವಾದ ಶತ್ರುವಲ್ಲ, ಒಳಗಿನ ಶತ್ರುತ್ವ ಭಾವವೇ ನಮ್ಮ ನಿಜವಾದ ಶತ್ರು.

ಮೈಖೇಲ್ ನೈಮಿಯವರು ಹೇಳುತ್ತಾರೆ : ''ಎಲ್ಲಿಯವರೆಗೆ ನೀನು ಒಬ್ಬ ವ್ಯಕ್ತಿಯನ್ನಾದರೂ ಶತ್ರುವೆಂದು ಪರಿಗಣಿಸುತ್ತಿರುವೆಯೋ ಅಲ್ಲಿಯವರೆಗೆ ನಿನಗೆ ಸ್ನೇಹಿತನಿರುವುದಿಲ್ಲ. ಶತ್ರುತ್ವವನ್ನು ಪೋಷಿಸುವ ಹೃದಯವು ಮೈತ್ರಿಗೆ ಯೋಗ್ಯ ತಾಣವಲ್ಲ.'' *(Book of Mirdad)*

೩. ಕರುಣ: ಕರುಣೆಯುಳ್ಳವನು. ಮಾನವನು ಸಮಾಜಜೀವಿಯಾದುದರಿಂದ ಎಲ್ಲರಲ್ಲೂ ಸಾಮಾಜೀಕರಣದ, ಅಂದರೆ ಇತರರೊಡನೆ ಬೆರೆಯುವ, ಮಾತನಾಡುವ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಪ್ರವೃತ್ತಿಯಿರುತ್ತದೆ, ಮತ್ತು ಈ ಪ್ರವೃತ್ತಿಯೇ ಪ್ರೀತಿಯ ರೂಪದಲ್ಲಿ ವ್ಯಕ್ತವಾಗುತ್ತದೆ – ಎಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ ಈ ಪ್ರವೃತ್ತಿಗೆ – ವೈಯಕ್ತಿಕ ದೋಷದಿಂದಾಗಲಿ ಅಥವಾ ಅಹಿತಕರ ಸಾಮಾಜಿಕ ಪರಿಸ್ಥಿತಿಯಿಂದಾಗಲಿ – ಅಡಚಣೆಯುಂಟಾದರೆ ಅದು ದ್ವೇಷವಾಗಿ ವ್ಯಕ್ತವಾಗುತ್ತದೆ. ಆಗ ವ್ಯಕ್ತಿಯು ನಿಷ್ಕರುಣಿಯಾಗುತ್ತಾನೆ. ಆದರೆ ಭಕ್ತನಾದವನು ಈ ಎಲ್ಲ ವೈಯಕ್ತಿಕ ಮತ್ತು ಸಾಮಾಜಿಕ ಲೋಪದೋಷಗಳನ್ನು ಮೀರಿದವನಾಗಿರಬೇಕು. ಆದ್ದರಿಂದ ಅವನ ಹೃದಯ ಕರುಣಾಪೂರ್ಣವಾಗಿರಬೇಕು, ಏಕೆಂದರೆ ಕರುಣಾಮಯ ಭಗವಂತನು ಅಲ್ಲಿ ನೆಲೆಸಿರುವನು.

ಅಮೃತಕ್ಕಾಗಿ ಸಮುದ್ರಮಂಥನದ ಸಂದರ್ಭದಲ್ಲಿ ಮೊದಲು ಕಾಣಿಸಿಕೊಂಡದ್ದು ಹಾಲಾಹಲ. ಅದು ಜಗತ್ತನ್ನೇ ದಹಿಸುವಷ್ಟು ತೀವ್ರವಾಗಿತ್ತು. ಎಲ್ಲರೂ ಭಯಭೀತರಾಗಿ ತತ್ತರಿಸಿ ಹೋದರು. ಎಲ್ಲರೂ ಶಿವನಲ್ಲಿ ಮೊರೆಹೊಕ್ಕರು. ಜನರ ದುಃಖವನ್ನು ತಾಳಲಾರದೆ ಶಿವನು ತಾನೇ ಆ ಅತಿಭಯಂಕರ ವಿಷವನ್ನು ಕುಡಿದು ಜೀರ್ಣಿಸಿಕೊಂಡನು. ಈ ಸಂದರ್ಭದಲ್ಲಿ ಭಾಗವತವು ಒಂದು ಮಹಾಸತ್ಯವನ್ನು ವ್ಯಕ್ತಪಡಿಸುತ್ತದೆ :

ತಪ್ಯಂತೇ ಲೋಕತಾಪೇನ ಸಾಧವೋ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥

''ಸಾಮಾನ್ಯವಾಗಿ ಸಾಧುಜನರು ಜನರ ದುಃಖದಿಂದ ದುಃಖಕ್ಕೊಳಗಾಗುತ್ತಾರೆ. ಇದೇ ಪರಮಪುರುಷನ ಶ್ರೇಷ್ಠ ಆರಾಧನೆ. ಏಕೆಂದರೆ ಅವನು ಎಲ್ಲರ ಅಂತರಾತ್ಮನಾಗಿರುವನು.'' ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ : ''ಆಧ್ಯಾತ್ಮಿಕ ಜೀವನ ಭಕ್ತರಲ್ಲಿ ಇತರರ ಬಗ್ಗೆ ಕರುಣೆ ಕಳಕಳಿಯನ್ನು ಉಂಟು ಮಾಡದಿದ್ದರೆ, ಅಂಥ ಭಕ್ತಿಯಿಂದ ಏನು ಪ್ರಯೋಜನ?''

ಯಾರು ಪರದುಃಖದಿಂದ ದುಃಖಿಯೂ ಪರಸುಖದಿಂದ ಸುಖಿಯೂ ಆಗುವನೊ ಅವನೇ ನರರೂಪದಲ್ಲಿರುವ ಜಗದೀಶ್ವರನಾದ ಹರಿಯು ಎಂದು ನಾರದೀಯ ಪುರಾಣವು ಹೇಳುತ್ತದೆ:

ಅನ್ಯದುಃಖೇನ ಯೋ ದುಃಖೀ ಯೋಽನ್ಯಹರ್ಷೇಣ ಹರ್ಷಿತಃ।
ಸ ಏವ ಜಗತಾಮೀಶೋ ನರರೂಪಧರೋ ಹರಿಃ ॥

ಈ ಕರುಣೆಯು ಕೇವಲ ಮಾನಸಿಕ ಭಾವವಾಗಿ ಉಳಿಯದೆ ಕೃತಿಯಲ್ಲಿಯೂ ವ್ಯಕ್ತವಾಗಬೇಕು. ಆಗಲೇ ಅದು ಸಾರ್ಥಕವಾಗುತ್ತದೆ. ಅನೇಕರು ಇತರರ ಕಷ್ಟಸಂಕಟಗಳ ಬಗ್ಗೆ ಮರುಕವನ್ನು ವ್ಯಕ್ತಪಡಿಸುತ್ತಾರೆಯೇ ಹೊರತು ಸಹಾಯ ಮಾಡುವ ಪ್ರವೃತ್ತಿಯಿರುವುದಿಲ್ಲ. ಒಬ್ಬ ರಶಿಯನ್ ಮಹಿಳೆಯ ಉದಾಹರಣೆಯು ಈ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಆಕೆ ನಾಟಕ ಮಂದಿರದೊಳಗೆ ಬೆಚ್ಚಗೆ ನಾಟಕ ನೋಡುತ್ತ ಕುಳಿತಿರುತ್ತಾಳೆ. ನಾಟಕದಲ್ಲಿ ಬರುವ ಕರುಣಾಜನಕ ದೃಶ್ಯವನ್ನು ನೋಡಿ ಕಣ್ಣೀರು ಸುರಿಸುತ್ತ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಆದರೆ ಅದೇ ಸಂದರ್ಭದಲ್ಲಿ ಅವಳ ನತದೃಷ್ಟ ಸೇವಕನು ನಾಟಕ ನೋಡುವ ಅವಕಾಶವಿಲ್ಲದೆ ಮಂದಿರದ ಹೊರಗಡೆ ಚಳಿಯನ್ನು ತಡೆಯಲಾರದೆ ನಡುಗುತ್ತಿರುತ್ತಾನೆ. ಆತನ ಬಗ್ಗೆ ಆಕೆಗೆ ಯಾವ ಕನಿಕರವೂ ಇಲ್ಲ.

ಸ್ವಾಮಿ ವಿವೇಕಾನಂದರ ಪ್ರಕಾರ ಇತರರ ಕಷ್ಟಸಂಕಟಗಳನ್ನು ಭಾವಿಸುವ ಸಾಮರ್ಥ್ಯವೂ ಇರಬೇಕು, ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಬುದ್ಧಿಶಕ್ತಿಯೂ ಬೇಕು ಹಾಗೂ ಕಾರ್ಯತತ್ಪರತೆಯೂ ಬೇಕು. ಈ ವಿಷಯವನ್ನು ಅವರ ಮಾತಿನಲ್ಲೇ ಕೇಳೋಣ: ''ಹೃದಯವಂತಿಕೆ, ವಿಚಾರಶಕ್ತಿ ಮತ್ತು ಕಾರ್ಯತತ್ಪರತೆ ಈ ಮೂರೂ ಒಂದೇ ಸಮನಾಗಿ ಯಾರಲ್ಲಿ ಪಕ್ವತೆಯನ್ನು ಹೊಂದಿದೆಯೋ ಅಂತಹ ವ್ಯಕ್ತಿಯನ್ನು ನೋಡಲು ನಾವು ಬಯಸುತ್ತೇವೆ. ಈ ಪ್ರಪಂಚದ ಕಷ್ಟದುಃಖಗಳನ್ನು ಹೃತ್ಪೂರ್ವಕವಾಗಿ ಭಾವಿಸಬಲ್ಲಂತಹ ವ್ಯಕ್ತಿ ನಮಗೆ ಬೇಕು. ಕೇವಲ ಇವುಗಳನ್ನು ಅನುಭವಿಸಬಲ್ಲಂತಹ ವ್ಯಕ್ತಿ ಮಾತ್ರವಲ್ಲ, ವಸ್ತುವಿನ ಅಂತರಾಳಕ್ಕೆ ಪ್ರವೇಶಿಸಿ ಅದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವಂಥವನೂ ನಮಗೆ ಬೇಕು. ಅವನು ಇಲ್ಲಿಯೂ ನಿಲ್ಲಕೂಡದು. ತಾವು ಏನನ್ನು ಅನುಭವಿಸಿರುವನೋ, ಏನನ್ನು ತಿಳಿದುಕೊಂಡಿರುವನೋ ಅದನ್ನು ಕಾರ್ಯಗತಗೊಳಿಸಬಲ್ಲ ವ್ಯಕ್ತಿಯೂ ನಮಗೆ ಬೇಕು. ಇಂತಹ ಭಾವ, ಯುಕ್ತಿ ಮತ್ತು ಕ್ರಿಯಾಶೀಲತೆಯ ಸಾಮರಸ್ಯ ನಮಗೆ ಬೇಕು. *(ಕೃತಿಶ್ರೇಣಿ, ೬.೯೬)*

ಇತರರು ನಿಷ್ಕರುಣೆಗಳಾಗಿ ನಮ್ಮನ್ನು ನೋಯಿಸಿದಾಗ ನಾವೇನು ಮಾಡಬೇಕು? ಇತರರನ್ನು ನೋಯಿಸುವವರ ಮನಸ್ಸಿನಲ್ಲಿಯೂ ಏನಾದರೂ ಒಂದು ಬಗೆಯ ನೋವಿರುತ್ತದೆ. ಆಂತರಿಕ ನೋವಿಲ್ಲದವರಾರೂ ಇತರರಿಗೆ ನಿರುದ್ದೇಶದಿಂದ ನೋವನ್ನುಂಟುಮಾಡುವುದಿಲ್ಲ. ಇತರರು ನಮ್ಮನ್ನು ನೋಯಿಸಿದಾಗ ಅವರ ಆಂತರಿಕ ನೋವನ್ನು ಭಾವಿಸಿ ಅವರ ಬಗ್ಗೆಯೂ ಕರುಣೆ ತೋರಿಸಬೇಕು, ಆಂತರ್ಯದಲ್ಲಿ ಅವರಿಗಾಗಿ ಪ್ರಾರ್ಥಿಸಬೇಕು. ಯಾರಿಗೆ ಯಾವ ರೀತಿ ಕರುಣೆ ತೋರಿಸಬೇಕು ಎಂಬುದನ್ನು ನಾವು ಅನುಭವದಿಂದ ಅರಿತುಕೊಳ್ಳಬೇಕು. ನಮ್ಮಲ್ಲಿ ಕರುಣಾಭಾವವಿದ್ದರೆ ಇತರರ ನಿಷ್ಕರುಣೆಯು ನಮ್ಮನ್ನು ಅಷ್ಟಾಗಿ ನೋಯಿಸುವುದಿಲ್ಲ. ಆಂಗ್ಲಭಾಷೆಯ ಒಂದು ಹೇಳಿಕೆಯನ್ನು ಇಲ್ಲಿ ನಾವು ನೆನೆಸಿಕೊಳ್ಳಬಹುದು : ''Kindness in ourselves is the honey that blunts the sting of unkindness in others.''

(ನಮ್ಮ ಕರುಣೆಯ ಮಧುವು ಇತರರ ನಿಷ್ಕರುಣೆಯ ಮುಳ್ಳನ್ನು ಮೊಂಡಾಗಿಸುತ್ತದೆ.)

ನಮ್ಮ ಕರುಣಾಭಾವವು ನಮ್ಮ ಸುತ್ತಲಿನ ವಾತಾವರಣವನ್ನು ಬದಲಾಯಿಸಬಲ್ಲದು ಎಂಬುದನ್ನು ಪ್ರಸಿದ್ಧ ನರತಜ್ಞರಾದ ಯಾಂಡ್ರೀವ್ ನೀವ್‌ಬರ್ಗ್ ಅವರು ಹೇಳುತ್ತಾರೆ : ''ನಮ್ಮ ಸ್ವಾರ್ಥ ಮೆದುಳನ್ನು ಪರಿವರ್ತಿಸುವ ನಿರ್ದಿಷ್ಟವಾದ ಏನಾದರೂ ವಿಧಾನವಿದೆಯೆ? ನರವಿಜ್ಞಾನದ ಪ್ರಕಾರ ಉತ್ತರವು ಆಶ್ಚರ್ಯ ಕರವಾಗಿ ಸರಳ. ನಾವು ಮಾಡಬೇಕಾದುದು ಇಷ್ಟೇ: ಪ್ರಜ್ಞಾ ಪೂರ್ವಕವಾಗಿ ಇತರರ ವಿಷಯದಲ್ಲಿ ಕರುಣೆ ಮತ್ತು ಔದಾರ್ಯ ವನ್ನು ವ್ಯಕ್ತಪಡಿಸುವುದು. ನಾವು ಹೆಚ್ಚು ದಯಾಪೂರ್ಣರಾದಷ್ಟೂ ನಮ್ಮ ಸುತ್ತಲಿನವರೂ ಹೆಚ್ಚು ಉದಾರಿಗಳಾಗುತ್ತಾರೆ ಎಂಬುದನ್ನು ಅಧ್ಯಯನವು ತೋರಿಸಿಕೊಟ್ಟಿದೆ.'' *(How God can change your Brain, p.136-37)*

ನಿರ್ಮಮ: ಮಮಕಾರವಿಲ್ಲದವನು, ಯಾವುದರ ವಿಷಯ ದಲ್ಲಿಯೂ 'ಇದು ನನ್ನದು' ಎಂಬ ಸ್ವಾಧೀನತಾಭಾವವಿಲ್ಲ ದವನು. ಇದಕ್ಕೆ ಕಾರಣವನ್ನು ಮುಂದಿನ ಗುಣವು ಸೂಚಿಸುತ್ತದೆ ಅವನು ನಿರಹಂಕಾರಿಯಾಗಿರುತ್ತಾನೆ. 'ನಾನು' ಎಂಬ ಭಾವವಿಲ್ಲ ದಿರುವುದರಿಂದ 'ನನ್ನದು' ಎಂಬ ಭಾವವೂ ಇರುವುದಕ್ಕೆ ಸಾಧ್ಯ ವಿಲ್ಲ. ಮೊದಲು ಅಜ್ಞಾನದಿಂದಾಗಿ 'ನಾನು' ಎಂಬ ಭಾವವು ಉದಿಸುತ್ತದೆ. ಅನಂತರ ಈ ದೇಹೇಂದ್ರಿಯ ಮನಸ್ಸುಗಳು ನನ್ನವು ಎಂಬ ತಾದಾತ್ಮ್ಯವುಂಟಾಗುತ್ತದೆ. ಮುಂದೆ ಇವುಗಳಿಗೆ ಸಂಬಂಧಪಟ್ಟಂತೆ ಮನೆ ಆಸ್ತಿ ಸ್ಥಾನ ಅಧಿಕಾರಗಳು ನನ್ನವು ಎಂಬ ತೀವ್ರ ಆಸಕ್ತಿ ಉಂಟಾಗುತ್ತದೆ. ಇದು ಹೀಗೆ ವಿಸ್ತರಿಸುತ್ತ ಹೋಗು ತ್ತದೆ. ಸ್ವಾಮಿ ಯತೀಶ್ವರಾನಂದರು ಒಂದು ಹಾಸ್ಯಪ್ರಸಂಗದ ಮೂಲಕ ಇದನ್ನು ಸುಂದರವಾಗಿ ವಿವರಿಸುತ್ತಾರೆ. ಒಬ್ಬ ಅಧಿ ಕಾರಿಯು ಇದ್ದನು. ಅವನಿಗೆ ಅನೇಕ ಪದಕಗಳು ಬಂದಿರುತ್ತವೆ. ಅವುಗಳನ್ನೆಲ್ಲ ಅವನು ತನ್ನ ಕೋಟಿನ ಮೇಲೆ ಲಗತ್ತಿಸಿಕೊಂಡಿರು ತ್ತಾನೆ. ಅದರಲ್ಲಿ ಮೊದಲನೆಯದು ಸ್ವಲ್ಪ ದೊಡ್ಡದಾದ ಚಿನ್ನದ ಪದಕ. ಯಾರೊ ಒಬ್ಬರು ಅವನನ್ನು ಒಮ್ಮೆ ಕೇಳಿದರು, ''ಹೇಗೆ ನಿಮಗೆ ಇಷ್ಟೊಂದು ಪದಕಗಳು ಬಂದವು?'' ಎಂದು. ಅವನು ಹೇಳಿದ : ''ಈ ಚಿನ್ನದ ಪದಕ ಹೇಗೋ ಅಚಾತುರ್ಯದಿಂದ ಲಭಿಸಿತು, ಅನಂತರ ಉಳಿದ ಪದಕಗಳು ಒಂದಾದ ಮೇಲೊಂದು ಬರತೊಡಗಿದವು.''

'ಭಕ್ತಿಸೌರಭ' ಎಂಬ ಪುಸ್ತಕದಲ್ಲಿ ಮಮಕಾರವೇ ಯಮ ಪಾಶವೆಂಬುದನ್ನು ಸ್ವಾರಸ್ಯವಾಗಿ ವಿವರಿಸಲಾಗಿದೆ. ''ಮೃತನಾದ ಪ್ರತಿಯೊಬ್ಬನ ಪ್ರಾಣವನ್ನೂ ಯಮನು ತನ್ನ ಹಗ್ಗದಿಂದ ಬಂಧಿಸಿ ಯಮಲೋಕಕ್ಕೆ ಕೊಂಡೊಯ್ಯುತ್ತಾನೆಂಬುದು ಪುರಾಣದ ಮಾತು. ಸಾಯುವವರೆಲ್ಲರ ಪ್ರಾಣಗಳಿಗೂ ಹಗ್ಗ ಗಳು ಬೇಕೆಂದರೆ ಯಮಧರ್ಮರಾಯನು ಒಂದು ದೊಡ್ಡ ಹಗ್ಗದ ಕಾರ್ಖಾನೆಯನ್ನು ಇಟ್ಟರೂ ಸಾಲದು, ಆದರೆ ಹಾಗೇ ನಿಲ್ಲ. ಪ್ರತಿಯೊಬ್ಬನ ಯಮಪಾಶವೂ ಅವನವನ ಕೊರಳಲ್ಲೇ ಇದೆ. ಅದೇ ಮಮಕಾರ.''

ಮೊದಲು ಮಮಕಾರದಿಂದ ಯಾವುದಾದರೊಂದನ್ನು ತಬ್ಬಿಕೊಳ್ಳುತ್ತೇವೆ. ಅನಂತರ ನಮಗದು ಬೇಡವಾದರೂ ಅದು ನಮ್ಮನ್ನು ಬಿಡುವುದಿಲ್ಲ. ನಾವು ಬೆಳೆಸಿಕೊಂಡ ಆಸಕ್ತಿಯು ಸಂಸ್ಕಾರರೂಪದಲ್ಲಿ ನಮ್ಮನ್ನು ಕಾಡತೊಡಗುತ್ತದೆ. ನಾವು ಆಸಕ್ತಿ ಯಿಂದ ಒಂದು ನಾಯಿಯನ್ನು ಸಾಕುತ್ತೇವೆ. ಆಮೇಲೆ ಅದು ಬೇಡವೆನಿಸಿ ಅದನ್ನು ಮನೆಯಿಂದ ಎಷ್ಟೇ ಓಡಿಸಿದರೂ ಅದು ಹೋಗುವುದಿಲ್ಲ, ಮತ್ತೆ ಹಿಂತಿರುಗಿಬರುತ್ತದೆ. ದೂರಪ್ರದೇಶಕ್ಕೆ ತೆಗೆದುಕೊಂಡು ಹೋಗಿ ಬಿಟ್ಟರೂ ಹೇಗೊ ಮರಳಿ ಬರುತ್ತದೆ. ಅಧಿಕಾರವನ್ನು ಅತ್ಯಾಸಕ್ತಿಯಿಂದ ತಬ್ಬಿಕೊಂಡರೆ ಅಧಿಕಾರ ಹೋದರೂ ಅದರ ಆಸಕ್ತಿಹೋಗುವುದಿಲ್ಲ – ಬೇತಾಳದಂತೆ ಕಾಡುತ್ತದೆ. ನದಿಯು ಪ್ರವಾಹದಿಂದ ಉಕ್ಕಿ ಹರಿಯುತ್ತಿತ್ತು. ಅನೇಕ ವಸ್ತುಗಳು ತೇಲಿಬರುತ್ತಿದ್ದವು. ದಡದಲ್ಲಿ ಕೆಲವರು ಅಲೆಮಾರಿ ಸಾಧುಗಳು ಏನೇನು ವಸ್ತುಗಳು ಬರುತ್ತಿವೆ ಎಂಬು ದನ್ನು ನೋಡುತ್ತಿದ್ದರು. ಒಂದು ಕಂಬಳಿಯು ತೇಲಿಬರು ತ್ತಿರುವುದು ಕಾಣಿಸಿತು. ಕೂಡಲೇ ಒಬ್ಬ ಸಾಧುವು ನದಿಗೆ ಧುಮುಕಿದ. ಈಜಿಕೊಂಡು ಹೋಗಿ ಕಂಬಳಿಯನ್ನು ಹಿಡಿದು ಕೊಂಡನು. ಆದರೆ ಅವನು ಹಿಂತಿರುಗಿ ಬರುತ್ತಲೇ ಇಲ್ಲ. ದಡ ದಲ್ಲಿ ನಿಂತ ಸಾಧುಗಳು ''ಕಂಬಳಿಯನ್ನು ಬಿಟ್ಟು ಬಾ'' ಎಂದು ಕೂಗತೊಡಗಿದರು. ''ಕಂಬಳಿ ನನ್ನನ್ನು ಬಿಡುತ್ತಿಲ್ಲ'' ಎಂದು ಅವನು ಸಂಕಟದಿಂದ ಕೂಗಿಕೊಂಡನು. ಅದು ಕಂಬಳಿ ಅಲ್ಲ, ಕರಡಿ! ಹೀಗೆಯೇ ಮಮಕಾರದ ದೆಸೆಯಿಂದ ಸಂಸಾರವು ನಮಗೆ ಅಂಟಿಕೊಳ್ಳುತ್ತದೆ. ಭಕ್ತನು ಮಮಕಾರ ರಹಿತನಾಗಿರ ಬೇಕು. *(ಮುಂದುವರಿಯುವುದು)*

ನಿತ್ಯಾನಂದರ ಹಿರಿಮೆ

ಶ್ರೀಚೈತನ್ಯ ಮಹಾಪ್ರಭುಗಳ ಸಂಗಾತಿಯಾದ ನಿತ್ಯಾನಂದರು ಕೃಷ್ಣನಾಮವನ್ನು ಉಚ್ಚರಿಸುತ್ತಾ ಬಂಗಾಳದ ಊರುಗಳಲ್ಲಿ ಸಂಚರಿಸುತ್ತಿದ್ದರು. ದಾರಿಯಲ್ಲಿ ಜಗಾಯಿ ಮತ್ತು ಮಧಾಯಿ ಎಂಬಿಬ್ಬರು ದುಷ್ಟರು ನಿತ್ಯಾನಂದರನ್ನು ಕಂಡು ಅವರನ್ನು ''ನೀವು ಯಾರು?'' ಎಂದು ಕೇಳಿದರು. ಅದಕ್ಕೆ ನಿತ್ಯಾನಂದರು ''ಶ್ರೀಕೃಷ್ಣನ ದಿವ್ಯನಾಮವನ್ನು ಉಚ್ಚರಿಸಿ'' ಎಂದರು. ಕೋಪದಿಂದ ಆ ದುಷ್ಟರು ಅವರನ್ನು ಚೆನ್ನಾಗಿ ಥಳಿಸತೊಡಗಿದರು. ಗಾಯದಿಂದ ರಕ್ತ ಸುರಿಯುತ್ತಿದ್ದರೂ ನಿತ್ಯಾನಂದರು ''ಹರಿನಾಮವನ್ನು ಉಚ್ಚರಿಸಿ'' ಎನ್ನುವುದನ್ನು ಬಿಡಲಿಲ್ಲ. ಅವರ ಮನಃಪರಿವರ್ತನೆಯಾಗುವ ವರೆಗೂ ಅವರು ಹಾಗೆ ಹೇಳುತ್ತಲೇ ಇದ್ದರು. ಅಲ್ಲಿಗೆ ಶ್ರೀಚೈತನ್ಯರೂ ಬಂದರು. ಕೊನೆಗೆ ದುಷ್ಟರಿಬ್ಬರೂ ಮಹಾಭಕ್ತರಾಗಿ ಪರಿವರ್ತನೆ ಹೊಂದಿದರು. *(ಸಾಧಾರ)*

ನಿಜವಾದ ಭಕ್ತ



✷ ಸರ್ವದಾ ಭಗವಂತನಲ್ಲೇ ಮನಸ್ಸನ್ನಿಡಬಲ್ಲ ನಿಜವಾದ ತ್ಯಾಗಿಗಳನ್ನು ಜೇನುಹುಳುಗಳಿಗೆ ಹೋಲಿಸಬಹುದು. ಅವು ಕೇವಲ ಹೂವುಗಳ ಮೇಲೆ ಇಳಿದು ಮಧುಪಾನ ಮಾಡುತ್ತವೆ. ಯಾರು ಈ ಜಗತ್ತಿನಲ್ಲಿ ಕಾಮಕಾಂಚನಗಳ ಮಧ್ಯೆ ಇರುತ್ತಾರೋ, ಅವರ ತಮ್ಮ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬಲ್ಲರು. ಆದರೆ ಕೆಲವು ವೇಳೆ ಅವರು ಕಾಮಕಾಂಚನಗಳ ಕಡೆಗೂ ಅದನ್ನು ತಿರುಗಿಸಿಬಿಡುತ್ತಾರೆ. ಅವರು ಈ ಸಾಧಾರಣ ನೊಣಗಳ ಹಾಗೆ. ಅವು ಸಿಹಿ ತಿಂಡಿಗಳ ಮೇಲೂ ಕೂರುತ್ತವೆ, ಕೊಳೆತು ನಾರುವ ಹಣ್ಣುಗಳ ಮೇಲೂ ಕೂರುತ್ತವೆ, ಹೇಸಿಗೆ ಮೇಲೂ ಕೂರುತ್ತವೆ.

✷ ಕಾಮಕಾಂಚನಗಳ ಮಧ್ಯೆ ಬಹಳ ಕಾಲ ಇದ್ದುದ್ದೇ ಆದರೆ, ಅವು ಮನಸ್ಸನ್ನು ಚೆಲ್ಲಾಪಿಲ್ಲಿ ಮಾಡಿಬಿಡುತ್ತವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು. ಆದರೆ ಸಂನ್ಯಾಸಿಗಳು ಅಷ್ಟೊಂದು ಹೆದರಿಕೊಳ್ಳಬೇಕಾದ್ದೇನಿಲ್ಲ. ನಿಜವಾದ ತ್ಯಾಗಿಗಳು ಕಾಮಕಾಂಚನಗಳಿಂದ ಬಹಳ ದೂರದಲ್ಲೇ ಇರುತ್ತಾರೆ. ಆದ್ದರಿಂದ ಸಾಧನೆಯ ಮೂಲಕ ಆತ ಸರ್ವದಾ ಭಗವಂತನಲ್ಲಿ ತನ್ನ ಮನಸ್ಸನ್ನು ಇಡಬಲ್ಲ.

✷ ನಿಜವಾಗಿ ಭಕ್ತನಿಗೆ ಕೆಲವು ಲಕ್ಷಣಗಳಿವೆ. ಗಾರುಡಿಗನ ಹಾಡು ಕೇಳಿ ವಿಷಸರ್ಪ ಸ್ತಬ್ಧವಾಗಿಬಿಡುವ ಹಾಗೆ ಭಕ್ತ ಗುರುವಿನ ಉಪದೇಶ ಕೇಳಿ ಸ್ತಬ್ಧನಾಗಿಬಿಡುತ್ತಾನೆ. ಆದರೆ ಕಟ್ಟಿನ ಹಾವು ಹಾಗೆ ಮಾಡದು. ಇನ್ನೊಂದು ಲಕ್ಷಣ, ಆತನಿಗೆ ಚೆನ್ನಾದ ಗ್ರಹಣ ಶಕ್ತಿ ಇರುತ್ತದೆ. ಬರೀ ಗಾಜಿನ ಮೇಲೆ ವಸ್ತುವಿನ ಪ್ರತಿಬಿಂಬ ಮೂಡದು. ಆದರೆ ಬೆಳ್ಳಿಯ ಉಪ್ಪು ಸವರಿದ ಗಾಜಿನ ಮೇಲೆ ಅದು ಮೂಡುತ್ತದೆ. ಉದಾಹರಣೆಗೆ ಫೋಟೋಗ್ರಫಿ. ಭಕ್ತಿಯೇ ಬೆಳ್ಳಿಯ ಉಪ್ಪು. ಮತ್ತೊಂದು ಲಕ್ಷಣ, ಜಿತೇಂದ್ರಿಯನಾಗಿರುತ್ತಾನೆ. ಕಾಮಜಯಿಯಾಗಿರುತ್ತಾನೆ. ಗೋಪಿಯರಿಗೆ ಕಾಮವೆಂಬುದೇ ಇರಲಿಲ್ಲ.

✷ ಉತ್ತಮ ಭಕ್ತ ಯಾರು ಗೊತ್ತೆ? ಯಾರು ಬ್ರಹ್ಮಜ್ಞಾನವನ್ನು ಪಡೆದುಕೊಂಡ ನಂತರ ಭಗವಂತನೇ ಈ ಜೀವ, ಜಗತ್ತು, ಚತುರ್ವಿಂಶತಿ ತತ್ತ್ವ ಆಗಿದ್ದಾನೆ ಎಂಬುದಾಗಿ ನೋಡುತ್ತಾನೋ ಆತ. ಮೊದಲು ನೇತಿ, ನೇತಿ, ಇದಲ್ಲ, ಇದಲ್ಲ ಎಂದು ವಿಚಾರ ಮಾಡಿ ಚಾವಣಿಯನ್ನು ಮುಟ್ಟಬೇಕು. ಆಗ ಆತನಿಗೆ ಗೊತ್ತಾಗುತ್ತದೆ, ಚಾವಣಿ ಯಾವುದರಿಂದ ತಯಾರಾಗಿದೆಯೋ, ಇಟ್ಟಿಗೆ, ಸುಣ್ಣ, ಇಟ್ಟಿಗೆಪುಡಿ ಮೊದಲಾದ ಅದೇ ವಸ್ತುಗಳಿಂದಲೇ ಮೆಟ್ಟಿಲ ಸಾಲೂ ತಯಾರಾಗಿದೆ ಎಂಬುದಾಗಿ. ಆಗ ಆತನಿಗೆ ತೋರಿ ಬರುತ್ತದೆ, ಬ್ರಹ್ಮವೇ ಜೀವ ಜಗತ್ತು, ಸಮಸ್ತವೂ ಆಗಿದ್ದಾನೆ ಎಂಬುದಾಗಿ.

✷ ಸಂಸಾರದಲ್ಲಿದ್ದರೂ ಯಾರು ಭಗವಂತನನ್ನು ಪ್ರಾರ್ಥಿಸುತ್ತಾನೋ ಆತ ವೀರಭಕ್ತ. ಭಗವಂತ ಭಾವಿಸುತ್ತಾನೆ: ಯಾರು ಸಂಸಾರವನ್ನು ತ್ಯಜಿಸಿದ್ದಾನೋ ಆತ ನನ್ನನ್ನು ಪ್ರಾರ್ಥಿಸಿಯೇ ಪ್ರಾರ್ಥಿಸುತ್ತಾನೆ. ನನ್ನ ಸೇವೆಯನ್ನು ಆತ ಮಾಡಲೇಬೇಕು. ಇದರಲ್ಲಿ ವಿಶೇಷತೆಯೇನಿದೆ? ಒಂದು ಪಕ್ಷ ಆತ ನನ್ನನ್ನು ಪ್ರಾರ್ಥಿಸದಿದ್ದರೆ ಎಲ್ಲರೂ ಆತನಿಗೆ ಛೀಮಾರಿ ಮಾಡಿಬಿಡುತ್ತಾರೆ. ಆದರೆ ಯಾರು ಸಂಸಾರದಲ್ಲಿದ್ದೂ ನನ್ನನ್ನು ಪ್ರಾರ್ಥಿಸುತ್ತಾನೋ ಸಂಸಾರವೆಂಬ ಇಪ್ಪತ್ತು ಮಣದ ಕಲ್ಲನ್ನು ಒಂದು ಕಡೆಗೆ ತಳ್ಳಿ ನನ್ನ ದರ್ಶನ ಪಡೆಯಲು ಪ್ರಯತ್ನಿಸುತ್ತಾನೋ, ಆತನೇ ಧನ್ಯ, ಆತನೇ ಮಹಾತ್ಮ, ಆತನೇ ವೀರಪುರುಷ.

✷ ಸಂಸಾರಿ ವ್ಯಕ್ತಿಯ ಜ್ಞಾನ, ಭಕ್ತರ ಜ್ಞಾನ, ಅವತಾರ ಪುರುಷರ ಜ್ಞಾನ ಒಂದೇ ಸಮವಾದುದಲ್ಲ. ಸಂಸಾರಿ ವ್ಯಕ್ತಿಯ ಜ್ಞಾನ ಒಂದು ಹಣತೆಯ ಬೆಳಕು ಇದ್ದ ಹಾಗೆ ಮನೆಯ ಒಳಪ್ರದೇಶ ಮಾತ್ರ ಬೆಳಕಾಗುತ್ತದೆ. ಆ ಬೆಳಕಿನಿಂದ ಊಟ, ಮನೆಗೆಲಸ, ಶರೀರ ರಕ್ಷಣೆ ಇತ್ಯಾದಿ ಸಾಧ್ಯ.

✷ ಭಕ್ತರ ಬೆಳಕು ಚಂದ್ರನ ಬೆಳಕು ಇದ್ದ ಹಾಗೆ. ಅದು ಮನೆಯ ಒಳಗೆ ಹೊರಗೆ ಇರುವುದನ್ನೆಲ್ಲ ಪ್ರಕಾಶಗೊಳಿಸುತ್ತದೆ. ಆದರೆ ಬಹಳ ದೂರದಲ್ಲಿರುವ ವಸ್ತುಗಳನ್ನು ಅಥವಾ ಬಹಳ ಪುಟ್ಟ ವಸ್ತುಗಳನ್ನು ಆ ಬೆಳಕಿನಿಂದ ನೋಡಲಾಗುವುದಿಲ್ಲ.

✷ ಅವತಾರಾದಿಗಳ ಬೆಳಕು ಸೂರ್ಯನ ಬೆಳಕು ಇದ್ದ ಹಾಗೆ. ಒಳಗೆ ಹೊರಗೆ ದೊಡ್ಡದು, ಚಿಕ್ಕದು ಎಲ್ಲವನ್ನೂ ಅವರು ಚೆನ್ನಾಗಿ ನೋಡಬಲ್ಲರು.

✷ ನಿಜವಾದ ತ್ಯಾಗೀಭಕ್ತ ಚಾತಕಪಕ್ಷಿ ಇದ್ದ ಹಾಗೆ. ಅದು ಸ್ವಾತಿ ಮಳೆಯ ನೀರನ್ನು ವಿನಾ ಬೇರೆ ಯಾವ ನೀರನ್ನೂ ಕುಡಿಯದು. ಏಳು ಸಮುದ್ರಗಳಲ್ಲೂ, ಎಲ್ಲಾ ನದಿಗಳಲ್ಲೂ ನೀರು ತುಂಬಿ ತುಳುಕಾಡುತ್ತಿದ್ದರೂ ಅವೊಂದನ್ನೂ ಅದು ಮುಟ್ಟದು. ತ್ಯಾಗೀ ಭಕ್ತ ಕಾಮಕಾಂಚನಗಳನ್ನು ಇಕ್ಕಳದಿಂದಲೂ ಮುಟ್ಟುವುದಿಲ್ಲ. ಕಾಮ ಕಾಂಚನಗಳನ್ನು ಹತ್ತಿರ ಇಟ್ಟುಕೊಳ್ಳುವುದಿಲ್ಲ, ಆಸಕ್ತಿ ಉಂಟಾಗಿಬಿಡಬಹುದೆಂದು.

✷ ಭಗವಂತನಲ್ಲಿ ಸರ್ವದಾ ಮನಸ್ಸನ್ನಿಡುವ ಮೊದಲು ಸ್ವಲ್ಪ ಶ್ರಮಿಸಬೇಕಾಗುತ್ತದೆ; ಕೊನೆಗೆ ವಿಶ್ರಾಂತಿವೇತನ ದೊರೆಯುತ್ತದೆ.

'ಶ್ರೀರಾಮಕೃಷ್ಣ ವಚನವೇದ' ದಿಂದ ✷

ಆಧ್ಯಾತ್ಮಿಕ ಸಂಭಾಷಣೆ

ಸ್ವಾಮಿ ಭೂತೇಶಾನಂದಜಿಯವರೊಂದಿಗೆ

ಕನ್ನಡ ಅವತರಣಿಕೆ : ಸ್ವಾಮಿ ಮಂಗಳಾತ್ಮಾನಂದ



ಪ್ರಶ್ನೆ: ಮಹಾರಾಜ್, ಹರಿ ಮಹಾರಾಜರು (ಸ್ವಾಮಿ ತುರೀಯಾನಂದರು) ಮಹಾಸಮಾಧಿಗೆ ಮುನ್ನ ಹೇಳುತ್ತಿದ್ದರು, ''ಬ್ರಹ್ಮ ಸತ್ಯ, ಜಗತ್ ಸತ್ಯ'' ಅಂತ. ಹಾಗಾದರೆ ಜಗತ್ತು ಯಾವ ರೂಪದಲ್ಲಿ ಸತ್ಯ?

ಮಹಾರಾಜ್: ರೂಪದಲ್ಲಿ – ಜಗತ್ತು ಸತ್ಯವಲ್ಲ.

ಪ್ರಶ್ನೆ: ಬ್ರಹ್ಮರೂಪದಲ್ಲಿ ಜಗತ್ತು ಸತ್ಯ, ಹಾಗಾದರೆ ಬ್ರಹ್ಮವೇ ಜಗತ್ತಾಗಿದೆಯೆ?

ಮಹಾರಾಜ್: ಅದೇ, ಅಸಲಿ (ನಿಜವಾದ) ವಿಚಾರ.

ಪ್ರಶ್ನೆ: ಹಾಗಾದರೆ ಜಗತ್ತು ಇಲ್ಲ ಎಂದರೂ ಹಾಗೆ ತಾನೆ?

ಮಹಾರಾಜ್: ಬ್ರಹ್ಮವನ್ನು ಬಿಟ್ಟು ಜಗತ್ತಿಲ್ಲ – ಇದು ಸತ್ಯ. ಜಗತ್ತು ಇಲ್ಲವೆಂದು ಹೇಳಿದರೆ ವಾಸ್ತವಾಂಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಹೇಳಿದ ಹಾಗೆ ಆಗಲಿಲ್ಲ. ಜಗತ್ತು ಜಗತ್ತಿನ ರೂಪದಲ್ಲಿ ಅಲ್ಲ – ಬ್ರಹ್ಮರೂಪದಲ್ಲಿದೆ.

ಪ್ರಶ್ನೆ: ಬ್ರಹ್ಮ ಬಂದು ಹೋದರೂ, ಹೇಳಲು ಏನೂ ಇರುವುದಿಲ್ಲ. ಬ್ರಹ್ಮವನ್ನು ತಲುಪಿದರೆ ಏನನ್ನೂ ಹೇಳಲಾಗದು, ಮಾತು ಸ್ತಬ್ಧವಾಗುತ್ತದೆ.

ಮಹಾರಾಜ್: ಬ್ರಹ್ಮ ಎಂಬ ಶಬ್ದವನ್ನು ಉಚ್ಚರಿಸಲಾಗುತ್ತದಲ್ಲವೆ?

ಪ್ರಶ್ನೆ: ಅದು ಹೇಗೆ ಆಗುತ್ತದೆ?

ಮಹಾರಾಜ್: ಆದರೆ ಅದು ಬ್ರಹ್ಮ ಸ್ವರೂಪವಾಗಲಿಲ್ಲ.

ಪ್ರಶ್ನೆ: ಎಲ್ಲಿ ತನಕ ಶಬ್ದ(ಬ್ರಹ್ಮ)ವು ದ್ವಂದ್ವದಲ್ಲಿರುತ್ತದೋ ಅದು ಬ್ರಹ್ಮಸತ್ತಾ ಆಗುವುದಿಲ್ಲ.

ಮಹಾರಾಜ್: ಬ್ರಹ್ಮವೆಂದರೇನೆಂದು ಪರಮಹಂಸರು ಹೇಳುತ್ತಿದ್ದರು, ಅದನ್ನು ಮಾತಿನ ಮೂಲಕ ಹೇಳಲಾಗದು ಅಂತ ('ವಾಗತೀತ'). ಹಾಗಾಗಿ ನಾವು ಬ್ರಹ್ಮವೆಂದರೆ ಏನೆಂದು ಹೇಳುತ್ತೇವೆಯೋ ಆ ಬ್ರಹ್ಮನ ಅರಿವು ಶಬ್ದಗಳ ಮೂಲಕ ಆಗುತ್ತಿಲ್ಲ.

ಪ್ರಶ್ನೆ: ಬ್ರಹ್ಮಾನುಭವ ನಾವು ಮಾಡಿಕೊಳ್ಳಬೇಕಾದರೂ, ನಮಗೆ ಶಾಸ್ತ್ರ, ಅರ್ಥಾತ್ ಶಬ್ದರಾಶಿ, ಅದೇ ತಾನೆ ನಮಗೆ ಅವಲಂಬನೆ?

ಮಹಾರಾಜ್: ಶಬ್ದ(ಶಾಸ್ತ್ರ)ವನ್ನೇ ಅವಲಂಬನೆ ಮಾಡಿದರೆ ಬ್ರಹ್ಮಾನುಭವ ಸಾಧ್ಯವೇ ಇಲ್ಲ.

ಪ್ರಶ್ನೆ: ಹಾಗಾದರೆ, ಬ್ರಹ್ಮಾನುಭವವನ್ನು ಪಡೆಯಲು ನಮಗೆ ಉಪಾಯವೇನು?

ಮಹಾರಾಜ್: 'ಅಶಬ್ದಮ್'– ಶಾಸ್ತ್ರ ಹೇಳುತ್ತದೆ, ಅದು **ಅಶಬ್ದಮ್** (ಶಬ್ದರಹಿತ) ಎಂದು.

> **'ಅಶಬ್ದಮಸ್ಪರ್ಶಮರೂಪಮವ್ಯಯಂ**
> **ತಥಾರಸಂ ನಿತ್ಯಮಗಂಧವಚ್ಚ ಯತ್।**
> **ಅನಾದ್ಯನಂತಂ ಮಹತಃ ಪರಂ ಧ್ರುವಂ**
> **ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ॥'**
>
> ***(ಕಠೋಪನಿಷತ್ತು, ೧.೩.೧೫)***

ಪ್ರಶ್ನೆ: ಅದು ಶಬ್ದರಹಿತವಾದರೂ, ನಾವು ಅದಕ್ಕೆ ಶಬ್ದ ನೀಡಿ (ಶಾಸ್ತ್ರಗಳಿಂದ) ಅರ್ಥಮಾಡಿಕೊಳ್ಳಬೇಕು.

ಮಹಾರಾಜ್: ಕೇಳಯ್ಯ! ಅದನ್ನು ಬಿಟ್ಟು ನೀವೆಲ್ಲ ಇದ್ದೀರಾ?

ಪ್ರಶ್ನೆ: ಅದೇ ಪ್ರತ್ಯಕ್ಷ ಅನುಭವ ಆಗುವುದು. ಪ್ರಾರಂಭದಲ್ಲಿ ಹೇಳಿದಿರಿ ತಾನೆ – ಪ್ರತ್ಯಕ್ಷವನ್ನು ಸ್ವೀಕರಿಸಬೇಕಾಗುತ್ತದೆ ಎಂದು.

ಮಹಾರಾಜ್: ಪ್ರತ್ಯಕ್ಷವೆಂದರೆ ಕಣ್ಣಲ್ಲಿ ನೋಡುವುದೆ ?

ಪ್ರಶ್ನೆ: ಕಣ್ಣಲ್ಲಿ ನೋಡುವುದು, ಹಾಗೆಂದು ಕೂಡ ಹೇಳಬಹುದು.

ಮಹಾರಾಜ್: ಅದನ್ನು ಕಣ್ಣಲ್ಲಿ ನೋಡಲಾಗುವುದಿಲ್ಲ.

ಪ್ರಶ್ನೆ: ನಮ್ಮ ಸ್ವಂತ ಅನುಭವದಿಂದ ನಾವು ಇದ್ದೇವೆಂದು ಹೇಳುತ್ತೇವೆ.

ಮಹಾರಾಜ್: ವಿಷಯವೇನೆಂದರೆ, ಬ್ರಹ್ಮನ ಸ್ವರೂಪ ಹೀಗೆಂದು ಮಾತಿನಲ್ಲಿ ಹೇಳಲಾಗದು. ಇದೇ ಸಾರ, ಇದೇ ಸರಿಯಾದ ಉತ್ತರ.

ಪ್ರಶ್ನೆ: ಬ್ರಹ್ಮವೆಂದರೆ ಶಬ್ದ ಬ್ರಹ್ಮವಲ್ಲ. ಅದನ್ನು ಮಾತಿನಲ್ಲಿ ಹೇಳಲು ಆಗುವುದಿಲ್ಲ. ಹಾಗಾದರೆ ಈ ಹೇಳುವವನು ಯಾರು?

ಮಹಾರಾಜ್: ಅದು ಅಜ್ಞಾನ, ಅದೇ ಹೇಳುತ್ತದೆ.

ಪ್ರಶ್ನೆ: ಹಾಗಾದರೆ ಅಜ್ಞಾನ ಇದೆಯೇ?

ಮಹಾರಾಜ್: ಹೌದು.

ಪ್ರಶ್ನೆ: ಹಾಗಾದರೆ ಅಜ್ಞಾನವನ್ನು ಇದೆಯೆಂದು ಸ್ವೀಕರಿಸಬೇಕು.

ಮಹಾರಾಜ್: ಕೆಲಸ ಕಾರ್ಯಗಳ ಮೂಲಕವೇ ನಾವು ಅಜ್ಞಾನವನ್ನು ನೋಡುವುದು. ಅದಕ್ಕೆ ಕೈಕಾಲುಗಳಿವೆಯೆ? ಅಜ್ಞಾನಕ್ಕೆ ಕೈಕಾಲುಗಳಿಲ್ಲ, ಅದರ ಕ್ರಿಯೆಯ ಮೂಲಕವೇ ಅದನ್ನು ಅರಿಯುತ್ತೇವೆ.

ಪ್ರಶ್ನೆ: ಅದೇ ತಾನೆ, ಅಜ್ಞಾನದ ಕಾರ್ಯವೇನಿದೆಯೋ, ಅದನ್ನು ನಾವು ನಮ್ಮ ಕಣ್ಣುಗಳಿಂದ ನೋಡುತ್ತಿದ್ದೇವೆ. ಅದರ ಅವಲಂಬನೆ

ಯಿಂದಲೇ ನಾವು ಅಜ್ಞಾನವನ್ನು ಅರ್ಥಮಾಡಿಕೊಳ್ಳುತ್ತೇವೆ.

ಮಹಾರಾಜ್: ಅದರಿಂದ ಬ್ರಹ್ಮಾನುಭವ ಸಾಧ್ಯವೆ?

ಪ್ರಶ್ನೆ: ಅದು ಬಿಟ್ಟು ಬೇರೆ ಉಪಾಯ?

ಮಹಾರಾಜ್: ಬ್ರಹ್ಮವನ್ನು ಹಿಡಿಯಲು ಉಪಾಯವಿಲ್ಲ, ಒಂದು ವೇಳೆ ನೀನೇ ಬ್ರಹ್ಮನಾದರೆ ಬ್ರಹ್ಮವನ್ನು ಹೇಗೆ ಹಿಡಿಯಬಲ್ಲೆ?

ಪ್ರಶ್ನೆ: ಒಂದು ವೇಳೆ ಬೇರೆ ಉಪಾಯವಿಲ್ಲ, ಹಾಗಾದರೆ ಅದನ್ನು ಹೇಳುವಂತದ್ದು ಯಾವುದು?

ಮಹಾರಾಜ್: ಯಾವುದು ಮಾತಾಡುತ್ತಿದೆಯೋ ಅದೇ ಅಜ್ಞಾನ.

ಪ್ರಶ್ನೆ: ಅರ್ಥವಾಗಲಿಲ್ಲ ಮಹಾರಾಜ್.

ಮಹಾರಾಜ್: ಆಗಲಿಲ್ಲವಲ್ಲ, ಬ್ರಹ್ಮನನ್ನು ಹಿಡಿಯುವವರು ಯಾರು? ಬ್ರಹ್ಮವನ್ನು ಬಿಟ್ಟು ಬೇರೆ ಏನೂ ಇಲ್ಲವೆಂದರೂ, ಆಗಲೂ ಬ್ರಹ್ಮನನ್ನು ಹಿಡಿಯುವವರಾರು? ಒಂದು ವೇಳೆ ಬ್ರಹ್ಮನನ್ನು ಬ್ರಹ್ಮವೇ ಹಿಡಿಯುತ್ತದೆಂದು ಹೇಳುವೆಯಾದರೆ ಅದು ದೋಷ. ಇಲ್ಲಿ ಬ್ರಹ್ಮವನ್ನು ಹಿಡಿಯುವವರು ಯಾರೂ ಇಲ್ಲ, ಹಾಗೆ ಹೇಳಿದರೂ ದೋಷ.

ಪ್ರಶ್ನೆ: ಹಾಗಾದರೆ, ಬ್ರಹ್ಮ ಇದೆ, ಬ್ರಹ್ಮನ ಬಗ್ಗೆ ನಡೆಯುವ ಸಂಭಾಷಣೆ, ಇವುಗಳೆಲ್ಲವೂ ಮಿಥ್ಯೆ ಆಗುತ್ತದೆಯಲ್ಲವೆ?

ಮಹಾರಾಜ್: ಹೌದು, ಮಿಥ್ಯೆಯೇ. ಅಜ್ಞಾನದ ನಿವೃತ್ತಿಗಾಗಿ ಎಲ್ಲ ವಿಚಾರಗಳು. '**ತತ್ರ ವೇದಾಃ ಅವೇದಾಃ ಭವಂತಿ**' ವೇದಗಳೂ ಅಲ್ಲಿ ಅವೇದವಾಗುತ್ತವೆ.

ಪ್ರಶ್ನೆ: **ಅಶಬ್ದಮ್, ಅಸ್ಪರ್ಶಮ್** – ಹೇಳಲಾಗುತ್ತದೆ; ಶಾಸ್ತ್ರವು ಶಬ್ದರೂಪವನ್ನು ನೀಡಿ ಹೇಳುತ್ತಿದೆ. ಶಾಸ್ತ್ರವು ಯಾವುದನ್ನು ಹೇಳಲು ಅಪೇಕ್ಷಿಸುತ್ತದೋ ಅದನ್ನಿಲ್ಲಿ ಶಬ್ದರೂಪ ನೀಡಿ ಹೇಳಿದೆ.

ಮಹಾರಾಜ್: ಶಬ್ದರೂಪ ನೀಡಿ ಹೇಳಲಾಗುತ್ತಿದೆ ತಾನೆ? ಅದು ಶಬ್ದವಲ್ಲ. ಶಬ್ದವನ್ನು ಪ್ರತಿಷ್ಠೆ ಮಾಡಲು ಆಗುತ್ತದೆಯೇ?

ಪ್ರಶ್ನೆ: ಅರ್ಥ ಮಾಡಿಕೊಳ್ಳಲು ಹೇಳುತ್ತಿದ್ದೇವೆ. ಸ್ವರೂಪ ಏನೆಂದು ಅರಿಯದಿದ್ದರೂ ಅದರ ಬಗ್ಗೆ ಮಾತನಾಡುತ್ತೇವೆ.

ಮಹಾರಾಜ್: ಶಬ್ದವಿಲ್ಲವೆಂದಾದ ಮೇಲೆ ಶಬ್ದದ ಪ್ರತಿಷ್ಠೆ ಯಾಯಿತೆ?

ಪ್ರಶ್ನೆ: ಶಬ್ದವಿಲ್ಲ ಏಕೆ? ಬ್ರಹ್ಮ ಶಬ್ದವೇ ವ್ಯವಹಾರದಲ್ಲಿದೆ.

ಮಹಾರಾಜ್: ಶಬ್ದದ ಮೂಲಕ ಬ್ರಹ್ಮದ ವಿವರಣೆ ಕೊಡಲು ಆಗುವುದೇ ಇಲ್ಲ. ಅಶಬ್ದವೆಂದರೆ ಅದು ಶಬ್ದಾತೀತ ಎಂದರ್ಥ. **ಬ್ರಹ್ಮ** ಎಂಬ ಶಬ್ದವನ್ನು ಕೂಡ ಅದಕ್ಕೆ ಹೇಳಲಾಗದು. ಬ್ರಹ್ಮವೆಂದರೆ ಸರ್ವವ್ಯಾಪಿ. ಸರ್ವವ್ಯಾಪಿ ಕೂಡ ಅಲ್ಲ ; ಅದು ಎಲ್ಲಿಂದ ಆರಂಭವಾಗುತ್ತದೆ?

ಪ್ರಶ್ನೆ: ಶಬ್ದ ಅದರದ್ದಲ್ಲ , ಸ್ಪರ್ಶ ಅದರದಲ್ಲ, ಆ ವಸ್ತು(ಬ್ರಹ್ಮ) ಇದೆ ಎನ್ನುವುದಕ್ಕೆ ಪ್ರಮಾಣ ಏನು ಮಹಾರಾಜ್?

ಮಹಾರಾಜ್: ಪ್ರಮಾಣದ ಆವಶ್ಯಕತೆ ಇಲ್ಲ. ಒಂದು ವಸ್ತುವಿನ ಸಂಬಂಧದ ಬಗ್ಗೆ ಸಂದೇಹ ಬಂದಾಗ ಅದಕ್ಕೊಂದು ಪ್ರಮಾಣ ಬೇಕು. ಆದರೆ ಇಲ್ಲಿ ವಸ್ತುವಿನ ಬಗ್ಗೆ ನಿಸ್ಸಂದೇಹವಿರುವಾಗ ಪ್ರಮಾಣದ ಆವಶ್ಯಕತೆ ಇಲ್ಲ.

ಪ್ರಶ್ನೆ: ನಿಸ್ಸಂದೇಹ ಎಂಬುದು ಹೇಗಾಯಿತು? ಯಾವ ವಸ್ತು **ಅಶಬ್ದಮ್, ಅಸ್ಪರ್ಶಮ್** ಎಂದಾಗಿರುವಾಗ ನಿಸ್ಸಂದೇಹವಾಗುವುದು ಹೇಗೆ? ನೋಡಲೂ ಸಿಗುತ್ತಿಲ್ಲ, ಅನುಭವಕ್ಕೂ ಬರುತ್ತಿಲ್ಲ.

ಮಹಾರಾಜ್: ನೀವೇ ಮಾಡಿ ನೋಡಿ, ನೀವೇ ಅಜ್ಞಾನ.

ಪ್ರಶ್ನೆ: ಸಂಗತಿ ಇಷ್ಟೆ, ನಾವು ಅಜ್ಞಾನದಲ್ಲಿರಬಹುದು. ಬ್ರಹ್ಮವೆನ್ನುವುದು ಇದೆ, ಆದರೆ ಬ್ರಹ್ಮ ವಸ್ತುವಿನ ಪ್ರಮಾಣವೇ ಇಲ್ಲದಿರುವಾಗ, ಅದರ ಬಗ್ಗೆ ವಿಚಾರ ಮಾಡಿ ಏನು ಪ್ರಯೋಜನ?

ಮಹಾರಾಜ್: ಅಯ್ಯಾ! ಬ್ರಹ್ಮನಿಂದಲೇ ಸಮಸ್ತ ಪ್ರಮಾಣವೂ ಪ್ರಮಾಣಿತವಾಗಿದೆ. ಬ್ರಹ್ಮವನ್ನು ಬೇರೆ ಪ್ರಮಾಣದಿಂದ ಸಾಧಿಸಲು ಸಾಧ್ಯವಿಲ್ಲ.

ಪ್ರಶ್ನೆ: ಹಾಗಾದರೆ ಬ್ರಹ್ಮವಸ್ತುವನ್ನು ಕುರಿತು ಚರ್ಚೆ ಮಾಡದಿದ್ದರೇನೇ ಲೇಸು.

ಮಹಾರಾಜ್: ಚರ್ಚೆ ಮಾಡದಿದ್ದರೆ ಅದೊಂದು ವಿವರಣೆಯಷ್ಟೆ? ಹಾಗಲ್ಲ , ಯಾರು ಬ್ರಹ್ಮನಿಲ್ಲವೆಂದು ಹೇಳುತ್ತಾನೋ ಅವನು ಯಾರು?

ಪ್ರಶ್ನೆ: ಅವನನ್ನು ಶಬ್ದದ ಮೂಲಕವೂ ತಿಳಿಯಬಹುದು, ಸ್ಪರ್ಶದ ಮೂಲಕವೂ ತಿಳಿಯಬಹುದು, ಅವನೇ ಮಾತಾಡುತ್ತಿದ್ದಾನೆ.

ಮಹಾರಾಜ್: ಒಂದು ವೇಳೆ ಅದನ್ನು (ಬ್ರಹ್ಮವನ್ನು) ಹುಡುಕಿದರೆ, ಅದರ ಸ್ವರೂಪವನ್ನು ಹಿಡಿಯಲು ಪ್ರಯತ್ನಪಟ್ಟರೆ, ಆಗ ಏನಾದರೂ ಸಿಗಬಹುದೆ?

ಪ್ರಶ್ನೆ: ಒಂದು ವೇಳೆ ಏನೂ ಗೊತ್ತಾಗದಿದ್ದರೆ, ಅವನಿಲ್ಲ; ಶೂನ್ಯ.

ಮಹಾರಾಜ್: ಶೂನ್ಯವೆಂದು ಹೇಳುವಾಗಲೂ ಶಬ್ದದಿಂದಲೇ ಹೇಳಲಾಗುತ್ತದೆ.

ಪ್ರಶ್ನೆ: ನಾವೂ ಅದನ್ನೇ ಹೇಳಿದ್ದು. ಶಬ್ದದ ಮೂಲಕವೇ ವಸ್ತು ಪ್ರಕಾಶಿಸುವುದು. ಶಬ್ದಾತೀತವಾದದ್ದು ಯಾವುದಿದೆ?

ಮಹಾರಾಜ್: ಬ್ರಹ್ಮಸ್ವರೂಪವು ಶಬ್ದಾತೀತ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಸ್ವರೂಪವನ್ನು ಮಾತಿನಿಂದ ಹೇಳಲಾಗದು, ಅದು ವಾಗತೀತ. ಇದೇ ಬ್ರಹ್ಮವನ್ನು ಅರ್ಥಮಾಡಿಕೊಳ್ಳುವ ರೀತಿ.

ಪ್ರಶ್ನೆ: ಇದು ಶೂನ್ಯವೆಂದು ಹೇಳಿದರೂ, ಅದನ್ನು ನಮ್ಮಿಂದ ಅರ್ಥೈಸಲಾಗದು, ಇದನ್ನು ಕೂಡ ನಾವು ತಿಳಿದುಕೊಳ್ಳಬೇಕು.

ಹೇಳಲಾಗದು, ಆದರೆ ಎಲ್ಲಿಯತನಕ ಯಾವುದನ್ನೂ ಹೇಳಲಾಗದು?

ಮಹಾರಾಜ್: ಹೇಳಲಾಗದು ಎಂದು ಹೇಳಿಯೂ ಮತ್ತೆ ಹೇಳುತ್ತೇವೆ. ಇದು ಉಲ್ಟಾ (ಅಸ್ತವ್ಯಸ್ತ) ವಿಚಾರ. ಹೇಳಲಾಗದೆಂದರೆ ಅದೇ ಶಬ್ದಾತೀತ. ಹೇಳಲಾಗದೆಂದು ಹೇಳಿ ಪುನಃ ಪುನಃ ಅದನ್ನೇ ಹೇಳಿದ ಹಾಗಾಯಿತು. ಇದು ಯಾವ ಸೀಮೆಯ ವಿಚಾರ?

ಪ್ರಶ್ನೆ: ಪೂರ್ವಪಕ್ಷಿ ಇದನ್ನೇ ಹೇಳುತ್ತಾನೆ. ಯಾವುದನ್ನು ತಿಳಿದುಕೊಳ್ಳಲು ಬೇರೆ ಯಾವ ಉಪಾಯವೇ ಇಲ್ಲವೋ, ಅದರ ಅಸ್ತಿತ್ವ ಎಲ್ಲಿಂದ ಉಂಟಾಗಬೇಕು?

ಮಹಾರಾಜ್: ಹಾಗಲ್ಲ , ಹೇಳುತ್ತೇನೆ ಕೇಳಿ. ಯಾವುದರ ಬಗ್ಗೆ ಸಂದೇಹಕ್ಕೆ ಅವಕಾಶವೇ ಇಲ್ಲವೋ, ಅದರ ಬಗ್ಗೆ ಇನ್ನು ಪ್ರಮಾಣ ಮಾಡುವುದು ಹೇಗೆ?

ಪ್ರಶ್ನೆ: ಸಂದೇಹಕ್ಕೆ ಅವಕಾಶವಿಲ್ಲ ಏಕೆ?

ಮಹಾರಾಜ್: ನೀನು ಇದ್ದೀಯೋ ಇಲ್ಲವೋ, ನಿನ್ನ ಅಸ್ತಿತ್ವ ದ ಬಗ್ಗೆ ಸಂದೇಹವುಂಟೆ?

ಪ್ರಶ್ನೆ: ನನ್ನ ಅಸ್ತಿತ್ವದ ಬಗ್ಗೆ ನನಗೆ ಯಾವ ಸಂದೇಹವೂ ಇಲ್ಲ.

ಮಹಾರಾಜ್: ಸಂದೇಹವಿಲ್ಲ. ಈಗ ನಿನ್ನ ಅಸ್ತಿತ್ವವೇನು? ಅದರ ಬಗ್ಗೆ ವಿಚಾರ ಮಾಡುತ್ತಾ ಹೋದ ಹಾಗೆ ಎಲ್ಲವೂ ಶೂನ್ಯವಾಗುತ್ತದೆ. ನಿನ್ನ ಅಸ್ತಿತ್ವವನ್ನು ಹುಡುಕಲು ಏನೂ ಸಿಗುವುದಿಲ್ಲ , ಇದೇ ನಿನ್ನ ಸ್ವರೂಪ. ✷

ತಪಸ್ವಿನಿ ರಾಜಕುಮಾರಿ

ಕೆ.ವಿ. ಸ್ವರ್ಣಗೌರಿ

ಭಾರತದ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಪುರಾತನ-ಆಧುನಿಕ ವಿಚಾರಗಳ, ಹಾಗೂ ಆದರ್ಶಗಳ ಸಂಘರ್ಷ ನಡೆಯುತ್ತಿದ್ದ ಸಂದರ್ಭದಲ್ಲಿ ಹೊಸ ಪುನರುತ್ಥಾನದ ಗುರಿಯನ್ನು ಹೊತ್ತು, ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ಮಹಿಳೆಯರಲ್ಲಿ ಒಬ್ಬರಾದ ಗಂಗಾಬಾಯಿಯವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿರುವ ಲೇಖಕಿ ಮೈಸೂರು ಆಶ್ರಮದ ಭಕ್ತರು.



ಹ್ಞೂ! ತೆಗೆದುಕೋ! ಎಂದು ಅತ್ಯಂತ ಬೆಲೆಬಾಳುವ, ಸುಂದರವಾದ ಮುತ್ತಿನ ದೊಡ್ಡ ಸರವನ್ನು ಮುಂದೆ ಹಿಡಿದು ನಿಂತಿದ್ದಾಳೆ ರಾಜಕುಮಾರಿ! ಅರಮನೆಯ ಕೋಟೆ ಕಾಯುತ್ತಾ ನಿಂತಿದ್ದ ಕಾವಲುಗಾರನಿಗೆ ಆಸೆ ಒಂದೆಡೆಯಾದರೆ, ಭಯ ಮತ್ತೊಂದೆಡೆ. ಇಂತಹ ಮಧ್ಯರಾತ್ರಿಯಲ್ಲಿ ರಾಜಕುಮಾರಿ ಒಬ್ಬಳೇ ಕುದುರೆಯೇರಿ ಎಲ್ಲೊ ಹೊರಟಂತಿದೆ. ಆದರೆ ಹೇಗೆ ಕೇಳುವುದು?? ಏನು ಮಾಡುವುದು? ಕೊನೆಗೆ ಅಮೂಲ್ಯವಾದ ಮುತ್ತಿನ ಹಾರದ ಆಸೆಯೇ ಗೆದ್ದಿತು. ಹಾರವನ್ನು ಕೊಟ್ಟು ರಾಜಕುಮಾರಿ ಕ್ಷಣಮಾತ್ರದಲ್ಲಿ ಕಣ್ಮರೆಯಾದಳು. ಹದಿಹರೆಯದ, ಮೋಹಕ ರೂಪಿನ ಚೆಲುವೆಯು ಕುದುರೆಯೇರಿ, ಕೈಯಲ್ಲಿ ಹೊಳೆಯುತ್ತಿರುವ ಕತ್ತಿಯನ್ನು ಝಳಪಿಸುತ್ತಾ ಹೊರಟಿದಾದ್ದರೂ ಎಲ್ಲಿಗೆ? ಒಂದು ಡೇರೆ ಹಾಗೂ ಸೊಳ್ಳೆ ಪರದೆಯಷ್ಟೇ ಅವಳ ಆಸ್ತಿ. ಹಸಿರು ಗದ್ದೆ, ಹೊಲ, ಕಾಡುಮೇಡುಗಳನ್ನು ದಾಟುತ್ತಾ ಕೊನೆಗೆ ತಾಮ್ರಪರ್ಣಿ ನದಿಯ ದಡದಲ್ಲಿ ನಿಂತಳು, ತನ್ನ ರಾಜಕುಮಾರಿಯ ಪೋಷಾಕನ್ನು ಕಿತ್ತೆಸೆದು ತೊಗಟೆಯಿಂದ ಮುಚ್ಚಿಕೊಂಡಳು. ಆ ವನ್ಯಮೃಗಗಳ ನಡುವೆ, ಕಂದಾಹಾರಗಳನ್ನು ಸೇವಿಸುತ್ತಾ ಹಿಂದಿನ ಕಾಲದ ಋಷಿ ಗಳಂತೆ ತೀವ್ರ ತಪಸ್ಸಿನಲ್ಲಿ ಮುಳುಗಿದಳು. ಹೃದಯದಲ್ಲಿ ಭಗವಂತನ ದರ್ಶನಕ್ಕಾಗಿ ವೈರಾಗ್ಯ, ವ್ಯಾಕುಲತೆಗಳ ಅಗ್ನಿ ಹತ್ತಿ ಉರಿಯುತ್ತಿದ್ದರೆ ೪೧ ದಿನಗಳ ಕಾಲ ಪಂಚಾಗ್ನಿ ತಪಸ್ಸನ್ನು ಮಾಡಿದಳೀ ಹದಿಹರೆಯದ ಬಾಲೆ !!

ಇತ್ತ ಅರಮನೆಯಲ್ಲಿ ಒಂದು ದೊಡ್ಡ ಕೋಲಾಹಲವೇ ಎದ್ದಿತ್ತು ರಾಜಕುಮಾರಿಯ ನಿರ್ಗಮನದಿಂದ. ಚಿಂತಾಕುಲನಾದ ರಾಜನು ತೀವ್ರ ತನಿಖೆಯಿಂದ ಮಗಳನ್ನು ಪತ್ತೆ ಹಚ್ಚಿ ವೆಲ್ಲೂರು

ಕೋಟೆಗೆ ಹಿಂತಿರುಗಿ ಕರೆತಂದನು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯುವುದು. ಅಚ್ಚುಮೆಚ್ಚಿನ ಕುವರಿಯನ್ನು ಕರೆತಂದ ಕೆಲವೇ ತಿಂಗಳಲ್ಲಿ ರಾಜನು ಮರಣವನ್ನಪ್ಪಿದನು.

ದಕ್ಷಿಣ ಭಾರತದ ಅರ್ಕಾಟ್ (ಈಗಿನ ಚೆನ್ನೈ)ನ ರಾಜ ನಾರಾಯಣರಾವ್ ಮತ್ತು ಅವನ ಧರ್ಮಪತ್ನಿ ನಿಷ್ಠಾವಂತ ಬ್ರಾಹ್ಮಣಕುಲದ ದೈವಭಕ್ತರು. ೧೯ನೇ ಶತಮಾನದ ಆದಿಭಾಗ ದಲ್ಲಿ ಅರ್ಕಾಟ್‌ನ ಕೋಟೆಯಲ್ಲಿದ್ದರು. ಅನೇಕ ವರ್ಷಗಳಿಂದ ಸಂತಾನವಿಲ್ಲದ ರಾಜದಂಪತಿಗಳು ಪೂಜೆ, ಪ್ರಾರ್ಥನೆ, ವ್ರತ, ನಿಯಮಾದಿಗಳಿಂದ ಗಂಗೆಯನ್ನು ಆರಾಧಿಸಿ ಪಡೆದ ಪುತ್ರಿಯೇ ಗಂಗಾಬಾಯಿ. ಹುಟ್ಟಿದ ತಾರೀಖು ತಿಳಿಯದಿದ್ದರೂ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಸಮಕಾಲೀನಳಾದ ಕಾರಣ ಕ್ರಿ.ಶ.೧೮೩೫ರಲ್ಲಿ (ಝಾನ್ಸಿರಾಣಿಯ ಜನನ) ಜನಿಸಿದಳೆಂದು ತೀರ್ಮಾನಿಸಲಾಯಿತು.

ರಾಜನ ಕಾಲಾನಂತರ ರಾಜ್ಯಭಾರವನ್ನು ಸಮರ್ಥವಾಗಿ ನಡೆಸುತ್ತಿದ್ದ ರಾಜಕುವರಿ ಗಂಗಾಬಾಯಿಯ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿದ್ದ ಬ್ರಿಟಿಷರು ಒಮ್ಮೆ ಆಕೆಯನ್ನು ಬಂಧಿಸಿ ತಿರುಚಿರಾಪಳ್ಳಿಯ ಕೋಟೆಯಲ್ಲಿರಿಸಿದರು. ರಾಜ್ಯವನ್ನು ಕಸಿದು ಗಂಗಾಬಾಯಿಯ ತಮ್ಮನನ್ನು ಕೇವಲ ಒಬ್ಬ ಜಮೀನುದಾರ ನನ್ನಾಗಿ ಮಾಡಿದರು.

ಇತ್ತ ಕೋಟೆಯಲ್ಲಿ ಗಂಗಾಬಾಯಿ ಒಂದು ಕ್ಷಣವನ್ನೂ ವ್ಯರ್ಥಗೊಳಿಸದೆ ಅನೇಕ ಕಸರತ್ತುಗಳಲ್ಲಿ ತನ್ನನ್ನು ತೊಡಗಿಸಿ ಕೊಂಡಳು. ವಿದ್ಯೆ, ಚಿತ್ರಕಲೆ, ದೇಶಪ್ರೇಮ, ಆಧ್ಯಾತ್ಮಿಕ ಪಿಪಾಸೆ, ದಕ್ಷ ಆಡಳಿತಗಾರಿಕೆ ಎಲ್ಲವೂ ಆಕೆಯಲ್ಲಿ ಮೇಳೈಸಿದ್ದವು.

ಕೋಟೆಯಿಂದ ಬಿಡುಗಡೆಯಾದ ಕೂಡಲೇ ನೇರವಾಗಿ ನೈಮಿಷಾರಣ್ಯಕ್ಕೆ ತೆರಳಿದ ರಾಜಕುಮಾರಿ ಉಗ್ರತರ ತಪಸ್ಸಿನಲ್ಲಿ ತೊಡಗಿದಳು. ಒಂದು ದಿನ ಅಲ್ಲಿನ ಗೌರೀಶಂಕರ ಮಂದಿರಕ್ಕೆ ಅವಳ ಪ್ರವೇಶವನ್ನು ಅಡ್ಡಿಪಡಿಸಿದ ಕಾರಣ ನೊಂದು ತಾನೇ ನೈಮಿಷಾರಣ್ಯದಲ್ಲಿ ಗೌರೀಶಂಕರ ಮಂದಿರವನ್ನು ಕಟ್ಟಿಸುವು ದಾಗಿ ಪ್ರತಿಜ್ಞೆ ಮಾಡಿದಳು. ಹದಿನೈದು ದಿನಗಳಲ್ಲಿ ಮಂದಿರ ನಿರ್ಮಾಣವಾಯಿತು! ಅಂದಿನಿಂದ ಜನ ಆಕೆಯನ್ನು ತಪಸ್ವಿನಿ ಮಾತಾಜಿ ಎಂದು ಗುರುತಿಸತೊಡಗಿದರು.

ಇದೇ ಸಮಯದಲ್ಲಿ ಕ್ರಿ.ಶ. ೧೮೫೭ರ ಮೇ ೧೦ರಂದು ಮೀರತ್‌ನಲ್ಲಿ ಸಿಪಾಯಿದಂಗೆ ಪ್ರಾರಂಭವಾಯಿತು. ಅಂದಿ ನಿಂದ ಗಂಗಾಬಾಯಿ ಕ್ರಿ.ಶ. ೧೮೫೮ ಜೂನ್ ೧೮ರ ವರೆಗೆ ರಾಣಿ ಝಾನ್ಸಿ ಲಕ್ಷ್ಮೀಬಾಯಿಯ ಅಂತ್ಯದವರೆಗೆ ಆಕೆಯೊಡ ನಿದ್ದು ಬ್ರಿಟಿಷರ ವಿರುದ್ಧ ಹೋರಾಡಿದಳು. ಲಕ್ಷ್ಮೀಬಾಯಿಯ ಆಪ್ತಸ್ನೇಹಿತೆ, ಸಲಹೆಗಾರ್ತಿ ಹಾಗೂ ಅಂಗರಕ್ಷಕಳಾಗಿದ್ದ ಗಂಗಾಬಾಯಿ ಯುದ್ಧದಲ್ಲಿ ಮಡಿದ ರಾಣಿಯ ಶವಸಂಸ್ಕಾರ ವನ್ನು ಗುಪ್ತವಾಗಿ ಮಾಡಿದಳು. ನಂತರ ಬ್ರಿಟಿಷರ ಕಣ್ತಪ್ಪಿಸಿ ನೇಪಾಳಕ್ಕೆ ಹೋದಳು. ಇಲ್ಲಿ ಗಂಗೆಗಾಗಿ ಒಂದು ದೇಗುಲ ನಿರ್ಮಿಸಿ ನಿತ್ಯ ಪೂಜೆಗೆ ಏರ್ಪಾಟು ಮಾಡಿದಳು. ಭಾರತ ದೇಶದ ಅನೇಕ ತೀರ್ಥಸ್ಥಳಗಳನ್ನು ಸಂದರ್ಶಿಸಿದಳು. ಮತ್ತೊಮ್ಮೆ ನೈಮಿಷಾರಣ್ಯಕ್ಕೆ ಹೋಗಿ ತೀವ್ರ ಸಾಧನೆಯಲ್ಲಿ ತೊಡಗಿದಳು. ಇವುಗಳೆಲ್ಲದರ ನಡುವೆಯೂ ಭಾರತವನ್ನು ಸ್ವತಂತ್ರಗೊಳಿಸಲು ಅವಳ ಮನಸ್ಸು ಸದಾ ತವಕಿಸುತ್ತಿತ್ತು.

ಹತ್ತೊಂಬತ್ತನೇ ಶತಮಾನದಲ್ಲಿ ಭಾರತೀಯರ ಪರಿಸ್ಥಿತಿ ಶೋಚನೀಯವಾಗಿತ್ತು. ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ನೀಡಿದ್ದ ಆದ್ಯತೆಯಿಂದಸಂಸ್ಕೃತಹಾಗೂಹಿಂದೂಶಾಸ್ತ್ರಾಧ್ಯಯನಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಕ್ರಿಶ್ಚಿಯನ್ ಮಿಷನರಿ ಶಾಲೆಗಳು ಯುವ ಮನಸ್ಸುಗಳ ಮೇಲೆ ದುಷ್ಪರಿಣಾಮ ವನ್ನುಂಟುಮಾಡುತ್ತಿದ್ದವು. ತಮ್ಮ ಸಂಸ್ಕೃತಿಯಲ್ಲಿ, ಶಾಸ್ತ್ರಗಳಲ್ಲಿ, ಆಚಾರವಿಚಾರಗಳಲ್ಲಿ, ಯುವಪೀಳಿಗೆ ಭರವಸೆಯನ್ನೇ ಕಳೆದು ಕೊಂಡಿತು. ಭವ್ಯಭಾರತದ ಬುನಾದಿಗೇ ಕೊಡಲಿಪೆಟ್ಟು!

ಇದರಿಂದ ಮುಂದಿನ ಸಮಾಜ ಹಾಗೂ ಜನಾಂಗಗಳ ಮೇಲೆ ಆಗುವ ದುಷ್ಪರಿಣಾಮವನ್ನು ಆಲೋಚಿಸಿದ ಮಾತಾಜಿ ಕೂಡಲೇ ತಾಯಿ ಕಾಳಿಯ ಮೊರೆಹೊಕ್ಕು, ಆಕೆಯ ಕೃಪಾಶೀರ್ವಾದವನ್ನು ಪಡೆದು ಹಿಂದೂ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಮಹಾಕಾಳಿ ಪಾಠಶಾಲೆ ಪ್ರಾರಂಭಿಸಿದಳು. ಪೂಜೆ ಪುನಸ್ಕಾರ, ವ್ರತಾಚರಣೆ, ಶಾಸ್ತ್ರಾಧ್ಯಯನ, ಹಿಂದೂ ಕೌಟುಂಬಿಕ ಧಾರ್ಮಿಕ ಮೌಲ್ಯಗಳು, ದೇಶಪ್ರೇಮ ಮುಂತಾದವುಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ೧೯ನೇ ಏಪ್ರಿಲ್ ೧೮೯೩ರಲ್ಲಿ ಮೂವತ್ತು ಹೆಣ್ಣುಮಕ್ಕಳಿಂದ ಪ್ರಾರಂಭವಾದ ಆ ಶಾಲೆ ಮೂರು ವರುಷಗಳೊಳಗೆ ನೂರಿಪ್ಪತ್ತು ಮಕ್ಕಳಾಗಿ ಶಾಲೆ ಯನ್ನು ಸ್ಥಳಾಂತರಿಸಲಾಯಿತು. ಕ್ರಿ.ಶ.೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಪ್ರಿಯ ಶಿಷ್ಯ ಶರತ್‌ಚಂದ್ರನೊಡನೆ ಆಮಂತ್ರಣದ ಮೇರೆಗೆ ಶಾಲೆಗೆ ಭೇಟಿ ನೀಡಿದರು. (ಈ ಭೇಟಿಯ ವಿವರಗಳು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಗುರುಶಿಷ್ಯ ಸಂವಾದದಲ್ಲಿದೆ). ಮಾತಾಜಿಯ ಪರಿಶ್ರಮದಿಂದ ಮಕ್ಕಳ ಶಿಕ್ಷಣ ಹಾಗೂ ವ್ಯಕ್ತಿತ್ವದಲ್ಲಾದ ಬದಲಾವಣೆಯನ್ನು ಕಂಡ ಸ್ವಾಮೀಜಿ ಹಿರಿಹಿರಿ ಹಿಗ್ಗಿದರು. ಮುಂದಿನ ನಾಲ್ಕು ವರ್ಷಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ೧೮೦ಕ್ಕೆ ಏರಿತು. ಮಹಾಕಾಳಿ ಪಾಠಶಾಲೆಯ ಕೀರ್ತಿ ಎಲ್ಲೆಡೆ ಪಸರಿಸಿತು.

ಕ್ರಿ.ಶ. ೧೮೯೭ರವರೆಗೆ ಮಹಾರಾಣಿ ತಪಸ್ವಿನಿ ಮಾತಾಜಿ ತಮ್ಮಲ್ಲಿದ್ದ ಒಡವೆಗಳನ್ನೆಲ್ಲಾ ಮಾರಾಟ ಮಾಡಿ ಶಾಲೆಯ ಖರ್ಚನ್ನು ನಿಭಾಯಿಸಿದಳು. ನಂತರ ಆರ್ಥಿಕಸ್ಥಿತಿ ಬಿಗಡಾ ಯಿಸಿ ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಬಂದಾಗ ಸ್ವಾಮಿ ವಿವೇಕಾನಂದರೇ ಮುಂದೆ ಬಂದು ಆರ್ಥಿಕ ನೆರವು ನೀಡಿ ದರು. ಅಷ್ಟೇ ಅಲ್ಲದೆ ಅನೇಕ ಕಡೆಗಳಿಂದಲೂ ನೆರವು ಬರತೊಡಗಿತು.

ಆಡುವ ಮಾತು, ಮಾಡುವ ಕೆಲಸ ಒಂದೇ ಆಗುವುದಾದರೆ, ಆಗ ಹಣವು ತನ್ನಷ್ಟಕ್ಕೆ ತಾನೇ ನೀರಿನಂತೆ ನಿಮ್ಮ ಹತ್ತಿರ ಸುರಿಯುವುದು (ಸ್ವಾ.ವಿ. ಕೃತಿಶ್ರೇಣಿ, ಸಂ.೮, ಪು.೧೪). ಶಾಲೆಯ ಯಶಸ್ಸಿನ ಕುರಿತು ಬಂಗಾಳಿ, ಇಂಗ್ಲೀಷ್ ವರ್ತಮಾನ ಪತ್ರಿಕೆಗಳಲ್ಲಿ ವರದಿಗಳು ಬರುತ್ತಿದ್ದವು. ಕೊಲ್ಕತ್ತಾದ ಅನೇಕ ಪ್ರದೇಶಗಳಲ್ಲಿ ಜನ ತಾವೇ ಸ್ವತಃ ಮಹಾಕಾಳೀ ಪಾಠಶಾಲೆಯ ಶಾಖೆಗಳನ್ನು ತೆರೆಯತೊಡಗಿದರು. ಮಾತಾಜಿಯ ದೇಹಾಂತ್ಯದ ವೇಳೆಗೆ ೧೬ ಶಾಖೆಗಳು ಹಾಗೂ ಮುಖ್ಯಶಾಲೆಯ ವಿದ್ಯಾರ್ಥಿನಿಯರ ಸಂಖ್ಯೆ ೫೦೦ಕ್ಕೆ ಮುಟ್ಟಿತು. ಶಾಖೆಗಳಿಂದ ವ್ಯತಿರಿಕ್ತವಾಗಿ ಗುರುತಿಸಲು ಅದನ್ನು 'ಆದಿ ಮಹಾಕಾಳಿ ಪಾಠಶಾಲೆ' ಎಂದು ನಾಮಕರಣ ಮಾಡಲಾಯಿತು. ''ಸ್ತ್ರೀಯರು ತಮ್ಮ ರೀತಿಯಲ್ಲಿಯೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲ ಸ್ಥಿತಿಯಲ್ಲಿ ನಾವು ಅವರನ್ನು ಇಡಬೇಕು. ಇತರರು ಯಾರೂ ಅವರಿಗೆ ಇವನ್ನು ಮಾಡಲಾರರು, ಮಾಡಕೂಡದು. ನಮ್ಮ ಭಾರತೀಯ ಸ್ತ್ರೀಯರು ಜಗತ್ತಿನ ಇತರ ಹೆಂಗಸರಷ್ಟೇ ಇದನ್ನು ಸಾಧಿಸಲು ಸಮರ್ಥರು.'' (ಕೃತಿಶ್ರೇಣಿ, ಸಂ. ೭, ಪು. ೪೫೧)

ಮಕ್ಕಳಲ್ಲಿ ಭಗವತಿಯನ್ನೇ ಕಾಣುತ್ತಿದ್ದ ಮಾತಾಜಿ, ಅವರ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸಿದ ಪರಿ ನಿಜಕ್ಕೂ ಶ್ಲಾಘನೀಯ. ಶಾಲೆಯಲ್ಲಿ ಸಂಸ್ಕೃತ, ಬಂಗಾಳಿ ಭಾಷೆ, ಲೆಕ್ಕ, ಅಡಿಗೆ, ಹೊಲಿಗೆ, ಕಸೂತಿ, ಚಿತ್ರಕಲೆ ಮುಂತಾದವುಗಳನ್ನು ಹೇಳಿಕೊಡಲಾಗುತ್ತಿತ್ತು. ಅಷ್ಟೇ ಅಲ್ಲದೆ ಹೆಣ್ಣುಮಕ್ಕಳಿಗೆ ಹಿಂದೂ ಸಂಸ್ಕೃತಿಯ ಆವಶ್ಯಕತೆಯನ್ನು ಅರಿತು ಸರಸ್ವತೀಪೂಜೆ, ಶಿವಪೂಜೆ, ವೇದಮಂತ್ರಗಳ ಪಠನ ಮುಂತಾದವುಗಳಲ್ಲೂ ತರಬೇತಿ ನೀಡಲಾಯಿತು. ಗಂಡುಮಕ್ಕಳಂತೆ ಹೆಣ್ಣುಮಕ್ಕಳಿಗೂ ರಕ್ಷಣೆ ಮತ್ತು ವಿದ್ಯಾಭ್ಯಾಸ ನೀಡಬೇಕು ಎಂಬುದೇ ಮಾತಾಜಿಯ ಗುರಿ. ವೈಶಾಖ ಮಾಸದಲ್ಲಿ ನಿತ್ಯವೂ ೫೦೦ ಜನ ಪುಟ್ಟ ಹೆಣ್ಣುಮಕ್ಕಳು ಸಂಸ್ಕೃತ ಮಂತ್ರಗಳನ್ನು ಉಚ್ಚರಿಸುತ್ತ ಶಾಲೆಯ ಆವರಣದಲ್ಲಿ ಶಿವಪೂಜೆ ಮಾಡುವುದನ್ನು ನೋಡಲು ಇಂಗ್ಲೀಷ್ ಅಧಿಕಾರಿಗಳು, ಅವರ ಪತ್ನಿಯರು, ಪಾರ್ಸಿ ಹೆಂಗಸರು, ಶ್ರೀಮಂತ ಬಡವರೆನ್ನದೆ ಜನ ಗುಂಪು ಗುಂಪಾಗಿ ನಿಂತು ವೀಕ್ಷಿಸುತ್ತಿದ್ದರು, ಮಧ್ಯಾಹ್ನದ ವೇಳೆಗೆ ಮಕ್ಕಳೂ ಸೇರಿದಂತೆ ೧೦೦ ಮಂದಿಗೆ ಪ್ರಸಾದ ವಿತರಣೆ, ೧೨೦ ಲೀಟರ್ ಹಾಲಿನಲ್ಲಿ ಪಾಯಸದಡಿಗೆ ತಯಾರಾಗುತ್ತಿತ್ತು. ಹೀಗೆ ಸರಸ್ವತಿ ಪೂಜೆ, ದುರ್ಗಾಪೂಜೆ, ಗುರುಪೂರ್ಣಿಮಾ, ಎಲ್ಲವೂ ವೈಭವೋಪೇತವಾಗಿ ನಡೆಯುತ್ತಿತ್ತು. ಆಮಂತ್ರಣದ ಮೇರೆಗೆ ಬರ್ದವಾನ್ ಹಾಗೂ ಬರೋಡಾ ರಾಜರು, ಬಾಲಗಂಗಾಧರ ತಿಲಕ್ ಮುಂತಾದವರು ಭೇಟಿ ನೀಡುತ್ತಿದ್ದರು. ಒಮ್ಮೆ ಸಿಸ್ಟರ್ ನಿವೇದಿತಾ ಸಹ ಭೇಟಿ ನೀಡಿದ್ದರು. ಪೂಜೆ, ಹಬ್ಬ ಇತರ ಚಟುವಟಿಕೆಗಳ ನಡುವೆಯೂ ಮಕ್ಕಳು ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸುತ್ತಿದ್ದದ್ದು ಶಾಲೆಯ ಹೆಚ್ಚುಗಾರಿಕೆಯಾಗಿತ್ತು. ಶಾಲೆ ತೆರೆಯುವುದು, ಮುಚ್ಚುವುದು ಎಲ್ಲವೂ ಪಂಚಾಂಗದನುಸಾರ!

ರಾಜಮನೆತನದ ಕುವರಿಯಾದರೂ ಮಾತಾಜಿ ಪ್ರಾತಃ ಕಾಲ ನಾಲ್ಕು ಗಂಟೆಗೆ ಎದ್ದು ಸ್ನಾನ, ಪೂಜೆ, ಜಪತಪಾದಿಗಳನ್ನು ಮುಗಿಸಿ ಒಂಬತ್ತು ಗಂಟೆಗೇ ಶಾಲೆಯಲ್ಲಿನ ಗೋಸಂಪತ್ತಿನ ಮೇಲ್ವಿಚಾರಣೆಗೆ ಹೋಗುತ್ತಿದ್ದರು. ಕೆಲವೊಮ್ಮೆ ತಾವೇ ಕೈಯಾರೆ ಅವುಗಳಿಗೆ ತಿನಿಸುತ್ತಿದ್ದರು. ನಂತರ ತಮ್ಮ ಮುದ್ದಿನ ಪ್ರಾಣಿಗಳಾದ ಜಿಂಕೆ, ಗಿಣಿಗಳೊಡನೆ ಮಾತುಕತೆ, ಶಾಲೆಯ ಉಸ್ತುವಾರಿ, ಲೆಕ್ಕಪತ್ರ ನೋಡುವುದು, ಇತ್ಯಾದಿಗಳಲ್ಲಿ ರಾತ್ರಿ ಒಂಬತ್ತು ಗಂಟೆಯೇ ಆಗುತ್ತಿತ್ತು. ಅದೇ ಸಮಯದಲ್ಲಿ ಭಕ್ತರು ಸೇರುತ್ತಿದ್ದರು. ರಾಮಾಯಣದ ವಾಚನವಾಗುತ್ತಿತ್ತು. ಸಾಧುಗಳು, ಯೋಗಿಗಳು, ಭಕ್ತರು, ಇಂಗ್ಲೀಷ್ ವೈಸ್ ರಾಯರು, ಗವರ್ನರ್‌ಗಳು ಬಡವಬಲ್ಲಿದರೆನ್ನದೆ ಎಲ್ಲರ ಮೆಚ್ಚುಗೆ, ಗೌರವಕ್ಕೆ ಪಾತ್ರರಾಗಿದ್ದ ಮಾತಾಜಿಯ ಮನೆಯೇ ತೀರ್ಥಸ್ಥಳವೆನಿಸಿತು. 'ಯಾರು ಪರರಿಗಾಗಿ ತನ್ನ ಪ್ರಾಣವನ್ನರ್ಪಿಸಲು ಸಿದ್ಧನಾಗಿರುವನೋ ಆತನ ಮುಂದೆ ಒಟ್ಟು ಲೋಕವೇ ಪೂಜ್ಯಭಾವದಿಂದಲೂ, ಭಯದಿಂದಲೂ ನಿಲ್ಲುತ್ತದೆ.' *(ಕೃತಿಶ್ರೇಣಿ, ಸಂ.೧, ಪು.೯೦)* ೧೩ನೇ ಮಾರ್ಚ್ ೧೯೦೬ರಂದು ಮಾತಾಜಿ ಶಾಲೆಯ ಆಡಳಿತವನ್ನು ಟ್ರಸ್ಟಿಗೆ ವರ್ಗಾಯಿಸಿ ದರ್ಭಾಂಗದ ಮಹಾರಾಜರನ್ನು ಅಧ್ಯಕ್ಷರನ್ನಾಗಿ ನೇಮಿಸುವುದರ ಮೂಲಕ ತಮ್ಮ ಅಂತ್ಯಕಾಲ ಸಮೀಪಿಸುತ್ತಿದೆಯೆಂಬ ಸೂಚನೆಯಿತ್ತರೆ? ಭಗವಂತನಿಂದ ಕಳುಹಿಸಲ್ಪಟ್ಟ ದೇವದೂತೆಯು ೨೦ನೇ ಏಪ್ರಿಲ್ ೧೯೦೭ ರಂದು ವಾರಣಾಸಿಯಲ್ಲಿ ಭಗವಂತನ್ನೇ ಸೇರಿದಳು.

''ಯಾರು ಇತರರಿಗಾಗಿ ಜೀವಿಸುವರೋ ಅವರು ಮಾತ್ರ ಬದುಕಿದ್ದಂತೆ, ಇತರರು ಬದುಕಿದ್ದರೂ ಸತ್ತಂತೆ ''

– ಸ್ವಾಮಿ ವಿವೇಕಾನಂದ.

(ಆಧಾರ: 'Tapasvini Mataji Ganga Bai', Ramakrishna Sarada Mission, Dakshineswar, Kolkata-76)

ಹಿಂದೂ ನಾರಿಯರುಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರವೃತ್ತಿಯವರು. ಬಹುಶಃ ಪ್ರಪಂಚದ ಇತರ ನಾರಿಯರಿಗಿಂತ ಹೆಚ್ಚು ಎಂದು ಬೇಕಾದರೆ ಹೇಳಬಹುದು. ಸ್ತ್ರೀತ್ವದ ಪೂರ್ಣ ಭಾವನೆಯೆಂದರೆ ಪೂರ್ಣ ಸ್ವಾತಂತ್ರ್ಯ.

ನಮ್ಮ ಸ್ತ್ರೀಯರು ಹೆಚ್ಚು ವಿದ್ಯಾವಂತರಲ್ಲ. ಆದರೆ ಅವರು ಹೆಚ್ಚು ಪರಿಶುದ್ಧರು. ಸ್ತ್ರೀಗೆ ತನ್ನ ಗಂಡನಲ್ಲದವರೆಲ್ಲಾ ಮಕ್ಕಳಂತೆ ಇರಬೇಕು. ಪ್ರತಿಯೊಂದು ಪುರುಷನಿಗೂ ತನ್ನ ಹೆಂಡತಿಯಲ್ಲದೆ ಉಳಿದ ಸ್ತ್ರೀಯರೆಲ್ಲ ತನ್ನ ತಾಯಿಯಂತೆ ಇರಬೇಕು.

– ಸ್ವಾಮಿ ವಿವೇಕಾನಂದ



ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

ಡಾ. ಕೆ. ಅನಂತರಾಮು

ನೀವು ನಿಜವಾಗಿ ಪ್ರಾರ್ಥನೆ ಮಾಡುತ್ತಿಲ್ಲ

ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಗುರುನಾನಕ್ ಅವರ ಹೆಸರು (೧೪೬೯–೧೫೩೮) ಚಿರಸ್ಮರಣೀಯವಾದುದು. ಸನಾತನ ಧರ್ಮದ ಸಂರಕ್ಷಣೆಗಾಗಿ ಸಿಖ್ ಎಂಬ ಹೊಸದೊಂದು ಪಂಥವನ್ನೇ ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇಂದಿನ ಪಾಕಿಸ್ತಾನಕ್ಕೆ ಸೇರಿದ ಪಂಜಾಬು ಪ್ರಾಂತದ ತಲವಂಡಿ ಎಂಬಲ್ಲಿ ಅವರು ಉದಿಸಿದರು. ಸುಲ್ತಾನಪುರ ಎಂಬುದು ನಾನಕರ ಆಧ್ಯಾತ್ಮಿಕ ಸಾಧನೆಯ ರಂಗಸ್ಥಳ. ಅಲ್ಲಿಯೇ ಅವರು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡರು.

ಭಕ್ತಿಯ ಬಾಹ್ಯರೂಪಗಳಲ್ಲಿ ಪ್ರತೀಕೋಪಾಸನೆ, ಇಷ್ಟದೈವದಲ್ಲಿ ನಿಷ್ಠೆ , ನಾಮಜಪ – ಮುಂತಾದ ಎಲ್ಲವೂ ಸೇರ್ಪಡೆಯಾಗುತ್ತವೆ. ಅವು ನಮ್ಮಲ್ಲಿ ಶಾಶ್ವತಶಕ್ತಿಯು ಜಾಗೃತವಾಗುವುದಕ್ಕೆ ಇರುವ ಪೂರ್ವಸಿದ್ಧತೆಗಳು. ಈ ಎಲ್ಲ ವಿಧಿ ನಿಯಮಗಳನ್ನು ಮೀರಿಹೋದ ಮೇಲೆ ನಿಜವಾದ ಆಧ್ಯಾತ್ಮಿಕತೆ ಉದಿಸುತ್ತದೆ. ಆಗ ಈ ಬಾಹ್ಯರೂಪದ ನಿಯಮಗಳೆಲ್ಲ ಕಳಚಿ ಬೀಳುತ್ತವೆ. ಎಲ್ಲ ರೂಪಗಳೂ ಮಾಯವಾಗುತ್ತವೆ. ದೇವಸ್ಥಾನ, ಚರ್ಚು ಮುಂತಾದವೆಲ್ಲ ನಮ್ಮೊಳಗೇ ಉರುಳಿ ಮಣ್ಣು ಪಾಲಾಗುತ್ತವೆ. ಒಂದು ನಿಶ್ಚಿತ ಧಾರ್ಮಿಕ ಪಂಥದಲ್ಲಿ ಹುಟ್ಟುವುದೇನೋ ಸರಿಯೆ, ಎಲ್ಲಿ ಹುಟ್ಟಬೇಕೆಂಬುದೇನೂ ನಮ್ಮ ಕೈಲಿಲ್ಲ. ಆದರೆ ಅದರಿಂದ ಹೊರಬರದೆ, ವಿಶಾಲವಾದ ವಿಚಾರಧಾರೆಗೆ ನಮ್ಮನ್ನು ತೆರೆದುಕೊಳ್ಳದೆ, ಮತೀಯ ಭಾವನೆಗಳೊಂದಿಗೇ ಸಾಯುವುದು ಮಾತ್ರ ಅತ್ಯಂತ ಶೋಚನೀಯವಾದುದು.

ದೇವಸ್ಥಾನಗಳಲ್ಲಾಗಲಿ, ಚರ್ಚುಗಳಲ್ಲಾಗಲಿ ಕೈ ಮುಗಿಯುವುದು, ಕಣ್ಣುಮುಚ್ಚಿಕೊಳ್ಳುವುದು, ಸಾಷ್ಟಾಂಗವೆರಗುವುದು, ಮಂಡಿಯೂರುವುದು – ಮುಂತಾದ ಎಲ್ಲವೂ ಕವಾಯತಿನಂತೆ ಯಾಂತ್ರಿಕವಾಗಿ ನಡೆಯುತ್ತದೆ. ಮನಸ್ಸು ಮಾತ್ರ ಬೇರೆಲ್ಲಿಯೋ ಇರುತ್ತದೆ. ಇದಾವುದೂ ನಿಜವಾದ ಧರ್ಮವಲ್ಲ. ಬಾಹ್ಯವಾದ ಒಂದು ಆಚರಣೆಯಲ್ಲಿಯೇ ನಮಗೆ ಮನಸ್ಸು ನೆಡಲಿಲ್ಲವೆಂದಮೇಲೆ, ಅದರಿಂದ ಮುಕ್ತರಾಗಿ ಮೇಲೆ ಹೊರಬರುವುದೆಂತು! ಈ ವಿಚಾರಗಳನ್ನು ಹೇಳುವಾಗ ಸ್ವಾಮಿ ವಿವೇಕಾನಂದರು ಗುರುನಾನಕರ ಬದುಕಿನಲ್ಲಿ ನಡೆದ ಘಟನೆಯೊಂದನ್ನು ನಿರೂಪಿಸಿದ್ದಾರೆ.

ಗುರುನಾನಕರು ಸುಲ್ತಾನಪುರದಲ್ಲಿ ಆತ್ಮಸಾಕ್ಷಾತ್ಕಾರ ಮಾಡಿಕೊಂಡ ನಂತರ ದಿವ್ಯಪ್ರಭೆಯಿಂದ ಬೆಳಗುತ್ತಿದ್ದರು. ಆ ಹೊತ್ತಿನಲ್ಲಿ ಸುಲ್ತಾನಪುರದಲ್ಲಿ ದೌಲತ್‌ಖಾನ್ ಎಂಬ ನವಾಬನು ರಾಜ್ಯವಾಳುತ್ತಿದ್ದನು. 'ನಾನು ಇಲ್ಲಿ ಕಾಣುತ್ತಿರುವುದು ಹಿಂದುವನ್ನೂ ಅಲ್ಲ, ಮುಸಲ್ಮಾನನನ್ನೂ ಅಲ್ಲ, ಕೇವಲ ಮನುಷ್ಯನನ್ನು ಮಾತ್ರ' ಎಂದು ನಾನಕರು ಸಾಕ್ಷಾತ್ಕಾರದ ನಂತರ ದಿವ್ಯವಾದ ವಾಣಿಯನ್ನೇ ನುಡಿದರು. ಸಣ್ಣದೊಂದು ಟೀಕೆಯನ್ನೂ ಸಹಿಸದ ಆ ಜನರು, ನಾನಕರ ಮಾತಿನಿಂದ ಸಿಟ್ಟುಗೊಂಡು ನವಾಬನಿಗೆ ದೂರಿತ್ತರು. ನವಾಬನು ನಾನಕರನ್ನು ಬರಮಾಡಿ ವಿಚಾರಣೆಗೆ ಗುರಿಪಡಿಸಿದನು. ಆ ಹೊತ್ತಿನಲ್ಲಿ ಮಸೀದಿಯ ಒಬ್ಬ ಮುಲ್ಲಾನೂ ಅಲ್ಲಿದ್ದನು. ನವಾಬನು, "ನೀನು ಇಲ್ಲಿ ಕಾಣುತ್ತಿರುವ ಮುಸಲ್ಮಾನರು ನಿನಗೆ ಮುಸಲ್ಮಾನರಲ್ಲ ಎಂದಾದರೆ, ನಿಜವಾದ ಮುಸಲ್ಮಾನರು ಯಾರೆಂದು ಹೇಳು" ಎಂದು ಗದರಿದನು. ನಾನಕರು ಸ್ವಲ್ಪವೂ ವಿಚಲಿತರಾಗದೆ, "ಮುಸಲ್ಮಾನರೆಂದು ಕರೆಸಿಕೊಳ್ಳುವುದು ಸುಲಭ, ಆದರೆ ಮುಸಲ್ಮಾನರಾಗುವುದು ಕಡುಕಷ್ಟ. ಯಾರಿಗೆ ಕರುಣೆಯೇ ಮಸೀದಿಯೋ, ಶ್ರದ್ಧೆಯೇ ಪ್ರಾರ್ಥನೆಯೋ, ಪ್ರಾಮಾಣಿಕ ಜೀವನವೇ ಪವಿತ್ರ ಕುರಾನೋ, ಸಂಯಮವೇ ಉಪವಾಸವೋ, ಅವನೇ ನಿಜವಾದ ಮುಸಲ್ಮಾನ"ಎಂದು ಘಂಟಾಘೋಷವಾಗಿ ಹೇಳಿದರು.

ಆಗ ಅಲ್ಲಿದ್ದ ಖಾಜಿಗೆ ನಾನಕರ ಮಾತಿನಿಂದ ಅಸಮಾಧಾನವೇ ಹೆಚ್ಚಿತು. "ನೀನು ಇಷ್ಟೆಲ್ಲ ಮಾತನಾಡುತ್ತೀಯಲ್ಲ, ನಿಜವಾಗಿಯೂ ನಿನಗೆ ಮುಸ್ಲಿಂ ಧರ್ಮದಲ್ಲಿ ನಂಬಿಕೆಯಿದ್ದರೆ ನಮ್ಮೊಡನೆ ಮಸೀದಿಗೆ ಬಂದು ಪ್ರಾರ್ಥನೆ ಮಾಡುತ್ತೀಯಾ?" ಎಂದು ಸವಾಲು ಎಸೆದನು. ಆಗಲೂ ನಾನಕರು, "ಓಹೋ ಆಗಲಿ, ಅದಕ್ಕೇನಂತೆ, ಭಗವಂತನ ಪ್ರಾರ್ಥನೆಗೆ ಮಸೀದಿಯಾದರೇನು, ದೇವಾಲಯವಾದರೇನು" ಎಂದು ದೃಢವಾಗಿಯೇ ಹೇಳಿದರು. ಎಲ್ಲರೂ ಮಸೀದಿಯನ್ನು ಹೊಕ್ಕರು. ಆಗಲೇ ಅಲ್ಲಿ ಭಕ್ತರು ಪ್ರಾರ್ಥನೆಗೆಂದು ಸಾಲಾಗಿ ನಿಂತಿದ್ದರು. ಪ್ರಾರ್ಥನೆ ಪ್ರಾರಂಭವಾಯಿತು. ನೆಲಕ್ಕೆ ಬಾಗುವುದು, ನಮಿಸುವುದು, ಮೇಲೇಳುವುದು, ಬಾಯಲ್ಲಿ ದೇವರ ಮಾತುಗಳನ್ನು ಉಚ್ಚರಿಸುವುದು ಮುಂತಾದವು ಸಾಂಗವಾಗಿಯೇ ನಡೆದವು. ನಾನಕರು ಮಾತ್ರ ಪ್ರಾರ್ಥನೆ ಮಾಡುವವರ ಗುಂಪಿಗೆ ಸೇರದೆ,

ಅವರು ಮಾಡುವುದನ್ನೆಲ್ಲ ನೋಡುತ್ತ, ನಸುನಗುತ್ತ ಕೊಂಚ ದೂರದಲ್ಲಿ ಪ್ರತ್ಯೇಕವಾಗಿ ನಿಂತಿದ್ದರು.

ಪ್ರಾರ್ಥನೆ ಮುಗಿದ ಬಳಿಕ ಮುಲ್ಲಾ ಕೋಪೋದ್ರಿಕ್ತನಾಗಿ, ''ನೀನೇಕೆ ಪ್ರಾರ್ಥನೆಯಲ್ಲಿ ಭಾಗವಹಿಸದೆ ವ್ಯರ್ಥವಾಗಿ ನಗುತ್ತಿದ್ದೀಯೆ?'' ಎಂದು ನಾನಕರನ್ನು ಕೇಳಿದನು. ಅದಕ್ಕೆ ನಾನಕರು, ''ನಾನು ಮಾತ್ರ ಪ್ರಾರ್ಥನೆ ಮಾಡುತ್ತಿರಲಿಲ್ಲ ಎಂದೇನೂ ಇಲ್ಲ; ನೀವು ತಾನೆ ಎಲ್ಲಿ ಪ್ರಾರ್ಥನೆ ಮಾಡುತ್ತಿದ್ದಿರಿ? ಇದೆಲ್ಲ ಧಾರ್ಮಿಕತೆಯ ಸೋಗು; ಅದಕ್ಕೇ ನನಗೆ ನಗೆ ಬಂದಿತು'' ಎಂದು ನೇರವಾಗಿ ಹೇಳಿದರು. ಮುಲ್ಲಾನು ತುಂಬಾ ಕೆರಳಿ, ''ಗುರುಗಳಿಗೆ ಗುರುವಾದ, ಅತ್ಯಂತ ದಯಾ ಮಯನಾದ ಭಗವಂತನ ಹೆಸರಿನಲ್ಲಿ ನಾವು ಪ್ರಾರ್ಥನೆ ಮಾಡುತ್ತಿದ್ದರೆ, ಈ ಕಾಫಿರನು 'ನೀವು ನಿಜವಾಗಿ ಪ್ರಾರ್ಥನೆ ಮಾಡುತ್ತಿಲ್ಲ , ನಿಮ್ಮಲ್ಲಿ ಪ್ರಾರ್ಥನೆಯೆಂಬುದೇ ಇಲ್ಲ' ಎಂದು ನಮ್ಮ ಪ್ರಾರ್ಥನೆಯನ್ನು ಅಣಕಿಸುತ್ತಿದ್ದಾನೆ. ಇವನನ್ನು ಕೊಲ್ಲ ಬೇಕು ಇಲ್ಲವೆ ವಿಚಾರಣೆಗೆ ಗುರಿಪಡಿಸಿ, ಮರಣದಂಡನೆ ನೀಡ ಬೇಕು'' ಎನ್ನುತ್ತ ಆಗಿಂದಾಗಲೇ ನ್ಯಾಯಾಲಯಕ್ಕೆ ದೂರಿತ್ತನು.

ಗುರುನಾನಕರು ನ್ಯಾಯಾಧೀಶರ ಮುಂದೆ ಬಂದು ನಿಂತರು. ''ಅವರು ಪ್ರಾರ್ಥನೆ ಮಾಡುವಾಗ ನೀನೇಕೆ ಸುಮ್ಮನೆ ನಗುತ್ತಿದ್ದೆ, ಅದು ಅವರನ್ನು ಅಣಕಿಸಿದಂತೆ ಆಗಲಿಲ್ಲವೆ?'' ಎಂದು ಕೇಳಿದರು. ''ಮುಲ್ಲಾ ಮತ್ತು ನವಾಬರು ಕೂಡ ಪ್ರಾರ್ಥನೆಯನ್ನೇನೂ ಮಾಡುತ್ತಿರಲಿಲ್ಲ , ಮಹಾಸ್ವಾಮಿ. ಅವ ರನ್ನು ತಾವು ನ್ಯಾಯಾಲಯಕ್ಕೆ ತಮ್ಮ ಸನ್ನಿಧಿಗೆ ಬರಮಾಡಿದರೆ ಅವರೇನು ಮಾಡುತ್ತಿದ್ದರು ಎಂಬುದನ್ನು ಹೇಳುತ್ತೇನೆ'' ಎಂದು ನಾನಕರು ಉತ್ತರಿಸಿದರು. ಒಡನೆಯೆ ನ್ಯಾಯಾಧೀಶರು ನವಾಬನನ್ನೂ ಮುಲ್ಲಾನನ್ನೂ ಬರಮಾಡಿದರು. ನಾನಕರನ್ನು ಉದ್ದೇಶಿಸಿ, ''ಈಗ ನೋಡು, ಮುಲ್ಲಾ ಬಂದಿದ್ದಾನೆ, ನವಾಬರೂ ಬಂದಿದ್ದಾರೆ, ಅವರು ಪ್ರಾರ್ಥನೆ ಮಾಡದೆ ಏನು ಮಾಡುತ್ತಿದ್ದ ರೆಂಬುದನ್ನು ಹೇಳು'' ಎಂದರು.

ಆಗ ನಾನಕರು ''ಮುಲ್ಲಾ ಅವರ ಮನೆಯಲ್ಲೊಂದು ಕುದುರೆ ಮರಿಹಾಕಿದೆ. ಇನ್ನೂ ಅದನ್ನು ಕಟ್ಟಿ ಹಾಕಿಲ್ಲ. ಸನಿಹ ದಲ್ಲೇ ಒಂದು ಬಾವಿಯಿದೆ. ಈ ಮರಿ ನೆಗೆದು ಎಲ್ಲಿಯಾದರೂ ಬಾವಿಗೆ ಬಿದ್ದರೇನು ಗತಿ ಎಂದು ಅವರು ಚಿಂತಿಸುತ್ತಿದ್ದರು. ಅಂತೆಯೇ ಅವರು ತಮ್ಮ ಮನೆಯ ಒಂದು ಕೋಳಿಮರಿಯನ್ನು ಕೂಡ ಜ್ಞಾಪಿಸಿಕೊಳ್ಳುತ್ತಿದ್ದರು. ಇನ್ನು ನವಾಬರಾದರೋ ಒಳ್ಳೆಯ ಕುದುರೆಗಳನ್ನು ಖರೀದಿಸಿ ತರಲು, ತಮ್ಮ ಸೇವಕರನ್ನು ಕಾಬೂಲಿಗೆ ಕಳುಹಿಸಿದ್ದಾರೆ. ಅವರೇಕೆ ಇದುವರೆಗೆ ಬರಲಿಲ್ಲ ಎಂದು ಚಿಂತಿಸುತ್ತಿದ್ದರು. ಸ್ವಾಮಿ, ಅವರ ಕೈಗೆ ಕುರಾನ್ ಗ್ರಂಥ ವನ್ನು ಕೊಡಿ, ಅದನ್ನು ಹಿಡಿದುಕೊಂಡು ನಾನು ಹೇಳಿದ್ದು ಸುಳ್ಳೋ ಅಥವಾ ನಿಜವೋ ಎಂಬುದನ್ನು ಹೇಳಲಿ'' ಎಂದು ಅರಿಕೆ ಮಾಡಿಕೊಂಡರು.

ನಾನಕರ ಸಿದ್ಧಿಸಾಮರ್ಥ್ಯಗಳನ್ನು ಕಂಡು ಮುಲ್ಲಾ ಮತ್ತು ನವಾಬರು ವಿಸ್ಮಯಾಭಿಭೂತರಾಗಿಬಿಟ್ಟರು. ಅಷ್ಟು ಮಾತ್ರವಲ್ಲ, ಕುರಾನನ್ನು ಗೌರವಿಸುತ್ತಿದ್ದ ಅವರಿಗೆ ಆ ಪವಿತ್ರಗ್ರಂಥವನ್ನು ಹಿಡಿದುಕೊಂಡು ಸುಳ್ಳುಹೇಳುವುದು ಸಾಧ್ಯವಾಗಲಿಲ್ಲ. 'ನಾನು ನಮ್ಮ ಮನೆಯ ಕುದುರೆ ಮರಿಯನ್ನೂ, ಕೋಳಿಮರಿಯನ್ನೂ ಕುರಿತು ಪ್ರಾರ್ಥನಾಕಾಲದಲ್ಲಿ ಸ್ಮರಿಸಿಕೊಳ್ಳುತ್ತಿದ್ದುದು ನಿಜ' ಎಂದು ಮುಲ್ಲಾ ಒಪ್ಪಿಕೊಂಡನು. 'ಕುದುರೆ ವ್ಯಾಪಾರಕ್ಕೆಂದು ನಾನು ನನ್ನ ಪರಿವಾರದವರನ್ನು ಪ್ರಾರ್ಥನಾಕಾಲದಲ್ಲಿ ನೆನಪಿಸಿ ಕೊಳ್ಳುತ್ತಿದ್ದುದು ನಿಜ' ಎಂದು ನವಾಬನೂ ಒಪ್ಪಿಕೊಂಡನು. ನಾನಕರ ಮಹಿಮಾವಿಶೇಷಗಳಿಂದ ನ್ಯಾಯಾಧೀಶರೂ ಪ್ರಭಾ ವಿತರಾದರು. ಮುಲ್ಲಾ ಮತ್ತು ನವಾಬನನ್ನು ಉದ್ದೇಶಿಸಿ, ''ಪ್ರಾರ್ಥನೆ ಮಾಡಬೇಕೆನಿಸದೆ ಇದ್ದಾಗ ಮಸೀದಿಗೆ ಹೋಗ ಬೇಡಿ. ಅಲ್ಲಿ ಈ ರೀತಿ ಅಪ್ರಾಮಾಣಿಕವಾಗಿ ವರ್ತಿಸುವುದಕ್ಕಿಂತ ಅಲ್ಲಿಗೆ ಹೋಗದೆ ಇರುವುದೇ ಮೇಲು. ಈ ಆಷಾಢಭೂತಿತನ ಬೇಡ. ಮನಸ್ಸಿನಲ್ಲಿ ಕುದುರೆವ್ಯಾಪಾರಕ್ಕೆ ಹೋದವರನ್ನೂ ಕುದುರೆಮರಿಯನ್ನೂ ಕೋಳಿಮರಿಯನ್ನೂ ಚಿಂತಿಸುತ್ತ ದಯಾ ಮಯನಾದ, ಆನಂದಮಯನಾದ ಭಗವಂತನ ಹೆಸರನ್ನು ಉಚ್ಚರಿಸಬೇಡಿ'' ಎಂದು ತಾಕೀತು ಮಾಡಿದರು.

ಆ ಬಳಿಕ ನಾನಕರನ್ನು ಕುರಿತು, ''ಮುಲ್ಲಾ ಮತ್ತು ನವಾಬರು ನಮಾಜು ಮಾಡುವಾಗ ನೀವು ನಕ್ಕುದಕ್ಕೆ ಇದ್ದ ಕಾರಣವನ್ನು ನೀವು ಹೇಳಿದ್ದೀರಿ. ದೂರುದಾರರು ಅದನ್ನು ಒಪ್ಪಿಕೊಂಡೂ ಇದ್ದಾರೆ. ನೀವಿನ್ನು ಹೋಗಬಹುದು'' ಎಂದು ನ್ಯಾಯಾಧೀಶರು ತೀರ್ಪಿತ್ತು ಅವರನ್ನು ಬಿಡುಗಡೆ ಮಾಡಿದರು.

ಪಿತೃಗಳನ್ನು ಪೂಜಿಸುವವರು ಪಿತೃಗಳನ್ನು ಪಡೆಯುತ್ತಾರೆ; ಭೂತಗಳನ್ನು ಆರಾಧಿಸುವವರು ಭೂತಗಳನ್ನು ಪಡೆಯುತ್ತಾರೆ; ಆದರೆ ದೇವರನ್ನು ಪ್ರೀತಿಸುವವರು ದೇವರನ್ನು ಪಡೆಯು ತ್ತಾರೆ. ದೇವರನ್ನೇ ಬಿಟ್ಟು ಬೇರೆ ವಸ್ತುಗಳನ್ನು ಪ್ರೀತಿಸಿದರೆ ಅವರು ತಾವು ಪ್ರೀತಿಸಿದ ವಸ್ತುವನ್ನೇ ಪಡೆಯುತ್ತಾರೆ; ದೇವರನ್ನು ಮಾತ್ರ ಪಡೆಯಲಾಗುವುದಿಲ್ಲ. ಭಗವಂತನು ನಮ್ಮ ಎಲ್ಲ ಆಸೆಗಳನ್ನೂ ಪೂರ್ಣಗೊಳಿಸುತ್ತಾನೆ. ಸಮಾಜದಲ್ಲಿ ಒಂದು ಸ್ಥಾನವನ್ನು ಗಳಿಸಿಕೊಳ್ಳಬೇಕೆಂದು ಬಯಸಿದರೆ ನಮಗದು ದೊರೆಯುತ್ತದೆ. ನಾವು ಬಯಸಿದ ಧಾರ್ಮಿಕ ಪಂಥದಲ್ಲಿ ಇದ್ದುಕೊಂಡಿರಬಹುದು. ದೇವಾಲಯಗಳು, ಚರ್ಚುಗಳು, ಧಾರ್ಮಿಕ ಸಂಘಸಂಸ್ಥೆಗಳು - ಇಷ್ಟೇ ನಮಗೆ ಸಾಕು ಎಂಬ ಮಕ್ಕಳಾಟದಲ್ಲಿ ಮುಳುಗಿದರೆ, ಅದರಲ್ಲಿಯೇ ನಾವು ಕೊನೆಯವರೆಗೂ ಇರಬೇಕಾಗುತ್ತದೆ; ದೇವರನ್ನು

ಮಾತ್ರ ಪಡೆದುಕೊಳ್ಳಲಾಗುವುದಿಲ್ಲ ಎಂದು ವಿವೇಕಾನಂದರು ಉಪದೇಶಿಸಿದ್ದಾರೆ.

ನಾನಕರ ವಿಷಯದಲ್ಲಾಗಲಿ ಸಿಖ್‌ಪಂಥದ ವಿಷಯದಲ್ಲಾಗಲಿ ವಿವೇಕಾನಂದರು ಸದ್ಭಾವನೆಗಳನ್ನು ಪ್ರಕಟಿಸಿದ್ದಾರೆ. ''ನಾನಕರಿಗೆ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಯೋಗ್ಯನಾದ ಶಿಷ್ಯನಿಗೆ ಧಾರೆಯೆರೆಯುವ ಸಾಮರ್ಥ್ಯವಿತ್ತು. ಅದಕ್ಕಾಗಿ ಅವರು ತಮ್ಮ ಮನೆಮಠ, ಹೆಂಡತಿಮಕ್ಕಳು ಎಲ್ಲವನ್ನೂ ಮರೆತು ಶಕ್ತಿಯನ್ನು ಸ್ವೀಕರಿಸಲು ತಕ್ಕವನಿಗಾಗಿ ಕಾಯುತ್ತಿದ್ದರು. ಅದು ನೆರವೇರಿದೊಡನೆಯೆ ನೆಮ್ಮದಿಯಿಂದ ಸಾಯಲು ಸಿದ್ಧರಾದರು'' ಎಂದು ಬರೆದಿದ್ದಾರೆ. ಹೀಗೆ ಶಕ್ತಿಯನ್ನು ಧಾರೆಯೆರೆಯುವ ವಿಚಾರಕ್ಕೆ ವೇದಾಂತಶಾಸ್ತ್ರದಲ್ಲಿ 'ಶಕ್ತಿಪಾತ' ಎಂದು ಹೆಸರು. ಇಂತಹ ಶಕ್ತಿಪಾತ ಪರಮಹಂಸರಿಂದ ವಿವೇಕಾನಂದರಿಗೂ ಆಗಿತ್ತು. ಗುರುನಾನಕರೆಂದರೆ ಪರಮಹಂಸರಿಗೂ ಅಚ್ಚುಮೆಚ್ಚು. ಕೋಯರ್‌ಸಿಂಗ್ ಎಂಬಾತನು ಪರಮಹಂಸರಲ್ಲೇ ಗುರುನಾನಕರನ್ನು ಕಂಡುಕೊಂಡಿದ್ದನು. 'ಸಮಾಧಿಸ್ಥಿತಿಯನ್ನು ಪಡೆದುಕೊಂಡ ಮೇಲೂ ಲೋಕಕಲ್ಯಾಣಕ್ಕಾಗಿ ಜಗತ್ತಿಗೆ ಮರಳಿ ಬಂದವರನ್ನು ನಾನು ಕಂಡಿಲ್ಲ. ನೀವು ಗುರುನಾನಕರೇ ಆಗಿರಬೇಕು' ಎಂದು ಆತನು ಹೇಳುತ್ತಿದ್ದನು. ಪರಮಹಂಸರು ಅದನ್ನು ಮೌನವಾಗಿ ಸ್ವೀಕರಿಸುತ್ತಿದ್ದರು. ತಮ್ಮ ಬಳಿಗೆ ಬಂದಿದ್ದ ನಿರಾಕಾರವಾದಿಯಾದ ನಾನಕಪಂಥದ ಸಾಧುವಿಗೆ ''ಭಗವಂತ ನಿರಾಕಾರನೆಂಬುದೇನೋ ನಿಶ್ಚಿತ, ಆದರೆ ಅವನು ಸಾಕಾರನೂ ಹೌದು. ಸಾಕಾರದ ಮೇಲೆ ಧ್ಯಾನಮಾಡಿದರೆ ಬೇಗ ಭಕ್ತಿಯುಂಟಾಗುತ್ತದೆ'' ಎಂದು ಬೋಧಿಸಿದ್ದರು. ಕಾಶಿಯ ನಾನಕ್ ಪಂಥದ ಸಾಧುವೊಬ್ಬನು ಪರಮಹಂಸರನ್ನು 'ಪ್ರೇಮಿಸಾಧು' ಎಂದು ಮೆಚ್ಚಿಕೊಂಡು, ತಮ್ಮ ಮಠಕ್ಕೆ ಒಮ್ಮೆ ಕರೆದುಕೊಂಡು ಹೋಗಿದ್ದನು. ಅಲ್ಲಿನ ಮಹಾಂತನಾದರೋ ಸಗುಣೋಪಾಸಕನಾಗಿದ್ದನು. ''ಕಲಿಯುಗಕ್ಕೆ ನಾರದೀಯ ಭಕ್ತಿಯೇ ಶ್ರೇಷ್ಠ; ಜಲದಲ್ಲಿ ವಿಷ್ಣು, ಸ್ಥಳದಲ್ಲಿ ವಿಷ್ಣು, ಪರ್ವತದ ತುದಿಯಲ್ಲಿ ವಿಷ್ಣು, ಈ ಜಗತ್ತೆಲ್ಲವೂ ವಿಷ್ಣುಮಯ'' ಎಂದು ಅವನು ಹೇಳಿದುದನ್ನು ಪರಮಹಂಸರು ಸಂತೋಷಪಟ್ಟು ಸ್ವೀಕರಿಸಿದರು. ✷

ಸ್ವಾಮಿ ಶಿವಾನಂದರ ಉಪದೇಶಗಳು



ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಿವಾನಂದರು (೧೮೫೪–೧೯೩೪) 'ರಾಮಕೃಷ್ಣ ಮಹಾಸಂಘದ ಎರಡನೇ ಪರಮಾಧ್ಯಕ್ಷರಾಗಿದ್ದರು. ತಮ್ಮ ಜೀವನವನ್ನೆಲ್ಲ ಕಠಿಣ ಸಾಧನೆ, ತಪಸ್ಸುಗಳಲ್ಲಿ ಕಳೆದ ಅವರು ಅನೇಕ ಮಂದಿ ಸಾಧಕರ ಪಾಲಿಗೆ ಸ್ಫೂರ್ತಿಯ ಸೆಲೆಯಾಗಿದ್ದರು.ಡಿಸೆಂಬರ್ ೧೮ರಂದು ಅವರ ಜಯಂತಿಯನ್ನು ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಅವರ ಉಪದೇಶಗಳನ್ನಿಲ್ಲಿ ನೀಡುತ್ತಿದ್ದೇವೆ.


✷ ಯಾರಲ್ಲಿ ಅಕುಟಿಲವಾದ ತ್ಯಾಗ–ವೈರಾಗ್ಯಗಳಿರುವವೋ ಅವರಿಗೆ ಯಾವ ಕಾಲದಲ್ಲಿಯೂ ಭಯವಿಲ್ಲ. ಭಗವಂತನು ಅವರ ಹೃದಯದಲ್ಲಿ ಪ್ರಕಟವಾಗುತ್ತಾನೆ. ತನ್ನ ದರ್ಶನವಿತ್ತು ಅವರ ಜೀವನವನ್ನು ಧನ್ಯವನ್ನಾಗಿ ಮಾಡುತ್ತಾನೆ. ನಿಜವಾಗಿ ಇರಬೇಕಾದದ್ದು ಎಂದರೆ ತ್ಯಾಗ, ವೈರಾಗ್ಯ, ಪವಿತ್ರತೆ ಮತ್ತು ಭಗವತ್‌ಸಾಕ್ಷಾತ್ಕಾರಕ್ಕಾಗಿ ಆಂತರಿಕ ಆಕಾಂಕ್ಷೆ.

✷ ಆಸೆಯಿಂದ ದುಃಖವುಂಟಾಗುವುದು. ಆಸೆಯಿಲ್ಲದಿರುವುದೇ ಆನಂದ. ಸುಖಭೋಗದ ಆಸೆಯನ್ನಂತೂ ತ್ಯಜಿಸಲೇಬೇಕು. ಆದರೆ ಎಲ್ಲ ಆಸೆಗಳನ್ನೂ ತ್ಯಜಿಸಬೇಕಿಲ್ಲ. ಪ್ರಾಪಂಚಿಕ ಆಸೆಗಳನ್ನು ಮಾತ್ರ ತ್ಯಜಿಸಬೇಕು; ಭಗವಂತನ ಸಾಕ್ಷಾತ್ಕಾರ ಪಡೆಯುವ, ಜ್ಞಾನ–ಭಕ್ತಿಗಳನ್ನು ಪಡೆಯುವ ಆಸೆಯನ್ನು ತ್ಯಜಿಸಬಾರದು.

✷ ನಮ್ಮ ತಾಯಿಯ ಹೆಸರು ಶಾರದಾ. ಈ ತಾಯಿಯೇ ಸ್ವಯಂ ಸರಸ್ವತೀ. ಆಕೆಯೇ ಕೃಪೆದೋರಿ ಜ್ಞಾನ ಕೊಡುವವಳು; ಜ್ಞಾನ ಎಂದರೆ ಭಗವಂತನ ಅರಿವು. ಈ ಜ್ಞಾನ ಉಂಟಾದಾಗಲೆ ಸರಿಯಾದ ಭಕ್ತಿ ಉಂಟಾಗುವ ಸಂಭವ, ಜ್ಞಾನ ಉಂಟಾಗದಿದ್ದರೆ ಭಕ್ತಿ ಉಂಟಾಗುವುದಿಲ್ಲ. ಶುದ್ಧ ಜ್ಞಾನವೂ ಶುದ್ಧಭಕ್ತಿಯೂ ಎರಡೂ ಒಂದೇ ವಸ್ತು. ತಾಯಿಯ ಕೃಪೆಯಿದ್ದರೇ ಅದೆಲ್ಲ ಉಂಟಾಗುವ ಸಂಭವ. ಜ್ಞಾನ ಕೊಡುವ ದಾತೃವೂ ತಾಯಿಯೇ.

✷ ನಿರಂತರವಾಗಿ ಆತನ ಧ್ಯಾನ ಮಾಡುತ್ತಾ ಮಾಡುತ್ತಾ ಆತನೆ ಕೃಪೆ ಮಾಡಿ ಭಕ್ತನ ಹೃದಯದಲ್ಲಿ ಮೈದೋರುತ್ತಾನೆ. ಬೇಕಾದುದು ಆತನ ಧ್ಯಾನ – ಸರ್ವದಾ ಆತನ ಸ್ಮರಣ ಮನನ. ಸತ್ಯಸ್ವರೂಪ, ವಿಭು, ಪ್ರೇಮಮಯ, ಸರ್ವ ಶಕ್ತಿಮಾನ್, ಚೈತನ್ಯಸ್ವರೂಪ ಸಚ್ಚಿದಾನಂದನನ್ನು ಭಾವಿಸುತ್ತಾ ಭಾವಿಸುತ್ತಾ ಮನುಷ್ಯನಿಗೆ ಕ್ರಮೇಣ ಸಚ್ಚಿದಾನಂದನ ಸ್ವರೂಪ ಪ್ರಾಪ್ತವಾಗುತ್ತದೆ.


✷ ಗುರುವಾಕ್ಯದಲ್ಲಿ ವಿಶ್ವಾಸ – ಬಾಲಕನಂತೆ ವಿಶ್ವಾಸವಿರಬೇಕು.




ಗುರು ಮಹಿಮೆ

ಕಥೆ: ಟಿ.ಎಂ.ಸುಂದರರಾಮನ್ **ಕಲೆ: ಶಂಕರ್**

1 ನಾಮದೇವ ವಿಠಲನ ದೊಡ್ಡ ಭಕ್ತನಾಗಿದ್ದ. ಅವನು ವಿಠಲನೊಂದಿನಗೆ ನೇರ ಮಾತುಕತೆ ನಡೆಸುತ್ತಿದ್ದ.




2 ಗೋರ ಕುಂಬಾರನೆಂಬ ಒಬ್ಬ ಸಂತ ದೇವಾಲಯವೊಂದರಲ್ಲಿ ಸಾಧುಸಂತರ ಸಭೆ ನಡೆಸುತ್ತಿದ್ದ. ನಾಮದೇವನೂ ಅಲ್ಲಿಗೆ ಹೋದ.



3 ಸಂತ ಗೋರ ಕುಂಬಾರ ಎಲ್ಲರ ತಲೆಯ ಮೇಲೆ ಒಂದು ಕಡ್ಡಿಯಿಂದ ಬಡಿಯುತ್ತ ಬಂದ.




ಅದೇ ರೀತಿ ಅವನು ನಾಲ್ಕೈದು ಜನರ ತಲೆಗೆ ಬಡಿದ.


4
ವಿಠಲನ ಕೃಪೆ ನನ್ನ ಮೇಲಿದೆ. ಹಾಗಿರುವಾಗ ಅವನು ನನ್ನ ತಲೆಯ ಮೇಲೆ ಏಕೆ ಬಡಿಯಬೇಕು?
ಹೀಗೆ ಯೋಚಿಸುತ್ತಾ ನಾಮದೇವ ಅಲ್ಲಿಂದ ಹೊರಟುಹೋದ. ಅವನು ಪಕ್ವನಾಗಿಲ್ಲವೆಂದು ಉಳಿದ ಸಾಧುಗಳು ನಕ್ಕರು.
5
ಭಗವಂತ, ನಾನು ಪಕ್ವನಾದ ಭಕ್ತನಲ್ಲವೆ? ದಯವಿಟ್ಟು ಹೇಳು.
ನಾಮದೇವ! ನಾನು ನಿನ್ನೊಂದಿಗೆ ಮಾತನಾಡುತ್ತಿದ್ದರೂ, ನಿನಗೆ ಗುರುವಿನ ಕೃಪೆ ಇನ್ನೂ ಆಗಿಲ್ಲ. ಯಾವಾಗ ನಿನಗದು ದೊರಕುವುದೋ, ಆಗ ನಿನಗೆ ನನ್ನ ಪೂರ್ಣಜ್ಞಾನ ಉಂಟಾಗುವುದು. ನೀನು ವಿಸೋಬಾ ಖೇಚರನೆಂಬ ನನ್ನ ಭಕ್ತನ ಬಳಿಗೆ ಹೋಗಿ ಪಕ್ವತೆಯನ್ನು ಹೊಂದು.
6
ನಿನ್ನೊಂದಿಗೆ ಮಾತುಕತೆ ನಡೆಸುವ ಭಾಗ್ಯ ಲಭಿಸಿದ ಮೇಲೂ ನಾನು ಒಬ್ಬ ಗುರುವಿನ ಬಳಿಗೆ ಹೋಗಬೇಕೆ? ನಾನು ನಿನ್ನ ಎಲ್ಲ ರೂಪಗಳನ್ನೂ ನೋಡಬಲ್ಲೆ, ಅಲ್ಲವೆ?
ಓ! ನಾನು ಯಾವುದೇ ರೂಪವನ್ನು ಧರಿಸಿದರೂ ನೀನು ಗುರುತಿಸಬಲ್ಲೆ ಅಲ್ಲವೆ?
7
ಒಂದು ದಿನ ನಾಮದೇವ ದೇವಸ್ಥಾನಕ್ಕೆ ಹೋಗುತ್ತಿದ್ದ. ದಾರಿಯಲ್ಲಿ ಒಬ್ಬ ಮಾಂಸ ಬೇಯಿಸುತ್ತಿದ್ದ.
ನಾನು ವಿಠಲನದರ್ಶನಕ್ಕೆ ಹೋಗುತ್ತಿರುವಾಗ ಈ ಅಶುಚಿಯನ್ನೆಲ್ಲ ನೋಡಬೇಕೇ? ಆ ಪಾಪಿ ಈ ಸ್ಥಳದ ಪಾವಿತ್ರ್ಯವನ್ನು ಹಾಳುಮಾಡುತ್ತಿದ್ದಾನೆ.
8
ನಾಮದೇವನು ಅಸಹ್ಯಪಟ್ಟುಕೊಂಡು, ಅವನಿಂದ ದೂರದಲ್ಲೇ ನಡೆಯುತ್ತ ದೇವಸ್ಥಾನಕ್ಕೆ ಹೋದ. ದೇವಾಲಯದಲ್ಲಿ..
ವಿಠಲ, ನಾನು ಶುಚಿರ್ಭೂತನಾಗಿ ನಿನ್ನ ದರ್ಶನಕ್ಕಾಗಿ ಬರುತ್ತಿದ್ದೆ. ದಾರಿಯಲ್ಲಿ ಒಬ್ಬ ಅಪವಿತ್ರ ವ್ಯಕ್ತಿಯನ್ನು ನೋಡಬೇಕಾಯಿತು.
ನಾಮದೇವ! ನಾನೇ ಆ ರೂಪದಲ್ಲಿ ಬಂದಿದ್ದೆ! ಅವನಲ್ಲೂ ನನ್ನನ್ನು ನೋಡುವಷ್ಟು ಪಕ್ವತೆ ನಿನಗಿನ್ನೂ ಬಂದಿಲ್ಲ.
ಓ ದೇವರೇ! ಅದು ನೀನೇ? ದಯವಿಟ್ಟು ನನ್ನನ್ನು ಕ್ಷಮಿಸು. ನನಗೆ ಇನ್ನೊಂದು ಅವಕಾಶ ನೀಡು. ಆಗ ಖಂಡಿತ ನನ್ನ ಪಕ್ವತೆಯನ್ನು ನಿನಗೆ ತೋರಿಸಿಕೊಡುತ್ತೇನೆ.

9

ಒಂದು ದಿನ ನಾಮದೇವ ಒಂದೆಡೆ ಪೂಜೆ ಮಾಡುತ್ತಿದ್ದ. ಆಗ ಅಲ್ಲಿಗೊಬ್ಬ ಮ್ಲೇಚ್ಛ ಸರದಾರ ಕುದುರೆ ಸವಾರಿ ಮಾಡುತ್ತ ವೇಗವಾಗಿ ಬಂದ. ನಾಮದೇವ ಪೂಜೆ ಮಾಡುತ್ತಿದ್ದ ವಸ್ತುಗಳನ್ನೆಲ್ಲ ಅವನು ಚೆಲ್ಲಾಪಿಲ್ಲಿ ಮಾಡಿ ಹೋದ.




11

ನಾಮದೇವ ವಿಸೋಬ ಖೇಚರನ ಬಳಿಗೆ ಹೋದ. ಅವನು ಚಪ್ಪಲಿಗಳೊಂದಿಗೆ ಶಿವಲಿಂಗದ ಮೇಲೆ ಕಾಲಿಟ್ಟು ಮಲಗಿ ವಿಶ್ರಾಂತಿ ಪಡೆಯುತ್ತಿದ್ದ.



12


ನಾಮದೇವ ವಿಸೋಬ ಖೇಚರನ ಕಾಲುಗಳನ್ನು ಅಲ್ಲಿಂದ ಸರಿಸಿ ಇನ್ನೊಂದೆಡೆ ಇಟ್ಟ. ಆಶ್ಚರ್ಯ, ಅವನ ಕಾಲುಗಳನ್ನು ಎಲ್ಲೆಲ್ಲಿ ಇಟ್ಟರೂ ಅವನ ಕಾಲಕೆಳಗೆ ಶಿವಲಿಂಗ ಕಾಣಿಸಿಕೊಳ್ಳುತ್ತಿತ್ತು! ಆಗ ನಾಮದೇವನಿಗೆ ವಿಸೋಬ ಖೇಚರನ ಮಹಿಮೆ ಅರ್ಥವಾಯಿತು.



14 ದಿನಗಳು ಕಳೆದವು. ವಿಸೋಬ ಖೇಚರನಿಂದ ದೀಕ್ಷೆ ಪಡೆದ ನಾಮದೇವ ಪಂಡರಾಪುರಕ್ಕೆ ಮರಳಿದ. ಒಂದುದಿನ ಭಕ್ತರು ಒಂದು ಸಂತರ್ಪಣೆಯನ್ನು ಏರ್ಪಡಿಸಿದ್ದರು. ಊಟದ ವೇಳೆ ಅಲ್ಲಿಗೆ ಒಂದು ನಾಯಿ ಬಂದು ನಾಮದೇವನ ಎಲೆಯಿಂದ ರೊಟ್ಟಿಯನ್ನು ಎತ್ತಿಕೊಂಡು ಓಡಿಹೋಯಿತು.



16 ನಾಮದೇವ ತುಪ್ಪದ ಪಾತ್ರೆಯೊಂದಿಗೆ ಆ ನಾಯಿಯ ಹಿಂದೆ ಓಡಿದ.




17 ಕೂಡಲೇ ವಿಠಲನೇ ನಾಮದೇವನ ಮುಂದೆ ಕಾಣಿಸಿಕೊಂಡ.



ದೇವರಿಗೆ ಸಂಬಂಧಪಟ್ಟ ರಹಸ್ಯವನ್ನು ತಿಳಿಯಬೇಕೆಂದು ನೀನು ಅತಿ ಕಾತರನಾಗಿದ್ದರೆ, ಅವನು ನಿನಗೆ ಸದ್ಗುರುವನ್ನು ಕಳುಹಿಸುತ್ತಾನೆ. ಗುರುವನ್ನು ಹುಡುಕುವುದಕ್ಕೆ ನೀನು ತೊಂದರೆ ತೆಗೆದುಕೊಳ್ಳಬೇಕಾಗಿಲ್ಲ.

– ಶ್ರೀ ರಾಮಕೃಷ್ಣ



ಸುದ್ದಿ ಸಂಚಯ



ಲಿಂಬ್ಡಿ ರಾಮಕೃಷ್ಣ ಮಿಷನ್ನಿನಲ್ಲಿ ರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ ಉದ್ಘಾಟನಾ ಸಮಾರಂಭ

ಭಗವಾನ್ ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ಮಂದಿರದ ಉದ್ಘಾಟನೆಯು ಗುಜರಾತಿನ ಲಿಂಬ್ಡಿಯಲ್ಲಿರುವ ರಾಮಕೃಷ್ಣ ಮಿಷನ್ನಿನಲ್ಲಿ ೨೦೧೪ರ ನವೆಂಬರ್ ೧ ರಂದು ನೆರವೇರಿತು. ಜಗದ್ಧಾತ್ರೀ ಪೂಜೆಯ ಈ ಶುಭದಿನದಂದು ನೂತನ ಮಂದಿರದ ಉದ್ಘಾಟನೆಯನ್ನು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ವಾಗೀಶಾನಂದಜಿ ಮಹಾರಾಜ್ ಅವರು ನೆರವೇರಿಸಿದರು.

ಮೂರು ದಿನಗಳ ಕಾರ್ಯಕ್ರಮಗಳಲ್ಲಿ ಸುಮಾರು ೨೦೦ ಮಂದಿ ಸಂನ್ಯಾಸಿ-ಬ್ರಹ್ಮಚಾರಿಗಳು, ಭಾರತದ ಎಲ್ಲೆಡೆಗಳಿಂದ ಬಂದ ಸುಮಾರು ೧೧,೦೦೦ ಮಂದಿ ಭಕ್ತರು ಪಾಲ್ಗೊಂಡರು. ಅಕ್ಟೋಬರ್ ೩೧ ರಿಂದ ನವೆಂಬರ್ ೨ ರ ವರೆಗೆ ನಡೆದ ಈ ಕಾರ್ಯಕ್ರಮಗಳಲ್ಲಿ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಭಾಕಾರ್ಯಕ್ರಮಗಳು ಜರಗಿದವು.

ಅಕ್ಟೋಬರ್ ೩೧ ರಂದು ಭಜನೆ, ದಂಡಿಯಾ ನೃತ್ಯ, ಶಿವ ನೃತ್ಯ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದವು. ನವೆಂಬರ್ ೧ ರಂದು ಮಂದಿರದ ಉದ್ಘಾಟನೆಯ ಪ್ರಧಾನ ಕಾರ್ಯಕ್ರಮ ನಡೆಯಿತು. ದಿವ್ಯತ್ರಯರ ಚಿತ್ರಗಳೊಂದಿಗೆ ಅನೇಕ ಮಂದಿ ಸಾಧು, ಬ್ರಹ್ಮಚಾರಿಗಳು ಹಾಗೂ ಭಕ್ತ ವೃಂದ ದೇವಾಲಯಕ್ಕೆ ಪ್ರದಕ್ಷಿಣೆ ಮಾಡುತ್ತ ಉತ್ಸವದ ವಾತಾವರಣ ಸೃಷ್ಟಿಯಾಯಿತು. ಸುಂದರವಾದ ಪಲ್ಲಕ್ಕಿಯಲ್ಲಿ ದಿವ್ಯತ್ರಯರ ಚಿತ್ರವನ್ನು ಹೊತ್ತು ನಗರದುದ್ದಕ್ಕೂ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಹಲವು ಮಂದಿ ಜಾನಪದ ನೃತ್ಯ , ಸಂಗೀತ ಕಲಾವಿದರು; ಭಜನ-ಕೀರ್ತನೆಯ ಕಲಾವಿದರು ಭಾಗವಹಿಸಿದ್ದರು.

ವಿವಿಧ ಸಂಪ್ರದಾಯಗಳಿಗೆ ಸೇರಿದ ಹಲವು ಮಂದಿ ಧಾರ್ಮಿಕ ಮುಖಂಡರು ಸ್ಫೂರ್ತಿದಾಯಕವಾದ ಪ್ರವಚನಗಳನ್ನು ನೀಡಿದರು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ವಾಗೀಶಾನಂದಜಿ ಮಹಾರಾಜ್ ಅವರು ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.









ನವೆಂಬರ್ ೨ರಂದು ಚಂಡೀಹೋಮ, ಸಂಗೀತ, ಧಾರ್ಮಿಕ ಸಭೆ ಮೊದಲಾದ ಕಾರ್ಯಕ್ರಮಗಳು ನಡೆದವು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸುಹಿತಾನಂದಜಿ ಮಹಾರಾಜ್ ಅವರು ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.ಹಲವು ಮಂದಿ ಸಂನ್ಯಾಸಿಗಳು ಹಾಗೂ ಭಕ್ತರುಗಳ ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಭಾಷಣ ಮಾಡಿದರು. ಇದಲ್ಲದೆ ಇತರ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳು ನಡೆದವು.

ಸುಸ್ಥಿರ ಶ್ರೇಣೀಕೃತ ಮೌಲ್ಯಶಿಕ್ಷಣ ಕಾರ್ಯಕ್ರಮ (೨೦೧೧-೨೦೧೪)





ಸ್ವಾಮಿ ವಿವೇಕಾನಂದರ ೧೫೦ ನೇ ಜನ್ಮದಿನೋತ್ಸವದ ಅಂಗವಾಗಿ ಕಳೆದ ಮೂರು ವರ್ಷಗಳಿಂದ ರಾಜ್ಯದ ಒಂಭತ್ತು ಜಿಲ್ಲೆಗಳಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ನಡೆಸಲಾಗುತ್ತಿದ್ದ ಸುಸ್ಥಿರ ಶ್ರೇಣೀಕೃತ ಮೌಲ್ಯಶಿಕ್ಷಣವು(SGVEP) ಈಗ ಕೊನೆಗೊಂಡಿದ್ದು, ಅದರ ಮುಕ್ತಾಯ ಸಮಾರಂಭವನ್ನು ಆಶ್ರಮದಲ್ಲಿ ಭಾನುವಾರ, ಅಕ್ಟೋಬರ್ ೨೬, ೨೦೧೪ ರಂದು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವು ಬೆಳಗ್ಗೆ ೮.೧೫ ರಿಂದ ಸಂಜೆ ೮.೩೦ ರವರೆಗೆ ನಡೆಯಿತು. ಮೌಲ್ಯಶಿಕ್ಷಣ ಬೋಧಿಸುತ್ತಿದ್ದ ಸುಮಾರು ೧೨೦ ಶಿಕ್ಷಕರು ಇದರಲ್ಲಿ ಪಾಲ್ಗೊಂಡಿದ್ದರು. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆಯಲ್ಲಿ ಶಿಕ್ಷಕರಿಗಾಗಿ ಮೌಲ್ಯಶಿಕ್ಷಣ ಕಾರ್ಯಾಗಾರವನ್ನು ನಡೆಸಲಾಯಿತು. ಸಂಜೆಯ ಮುಕ್ತಾಯ ಸಮಾರಂಭವನ್ನು ಆಶ್ರಮದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮೈಸೂರಿನ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ, ರಿಂಸೆಯ ಸ್ವಾಮಿ ಮಹೇಶಾತ್ಮಾನಂದಜಿ, ವಿದ್ಯಾಶಾಲೆಯ ಸ್ವಾಮಿ ಯುಕ್ತೇಶಾನಂದಜಿ ಭಾಗವಹಿಸಿದ್ದರು. ಮೌಲ್ಯಶಿಕ್ಷಣವನ್ನು ಶಾಲೆಗಳಿಗೆ ತಲುಪಿಸಲು ಬಹಳಷ್ಟು ಶ್ರಮಿಸಿದ ಸ್ವಯಂ ಸೇವಕರಿಗೆ ಹಾಗೂ ಶಿಕ್ಷಕರಿಗೆ ಈ ಸಂದರ್ಭದಲ್ಲಿ ನೆನಪಿನ ಕಾಣಿಕೆ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಶಿಕ್ಷಕರೆಲ್ಲರೂ ಇನ್ನು ಮುಂದೆ ಸ್ವಯಂಪ್ರೇರಿತರಾಗಿ ಮೌಲ್ಯಶಿಕ್ಷಣವನ್ನು ಮುನ್ನಡೆಸುವ ಭರವಸೆ ನೀಡಿದರು.

ರಾಜ್ಯದ ೯೦ ಶಾಲೆಗಳ ಸುಮಾರು ೩೦೦ ತರಗತಿಗಳ ಒಟ್ಟು ೧೩,೦೦೦ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆದಿದ್ದಾರೆ. ಈ ಮೌಲ್ಯಶಿಕ್ಷಣ ಕಾರ್ಯಕ್ರಮಕ್ಕಾಗಿ ವಿವಿಧ ತರಗತಿಗಳಿಗೆ ನೂತನ ಮಾದರಿಯ ಪುಸ್ತಕಗಳನ್ನು ರೂಪಿಸಲಾಗಿದೆ. ಅರುಣೋದಯ ೬ನೇ ತರಗತಿ, ದಾರಿದೀಪ ೭ನೇ ತರಗತಿ, ನಾನು ಹೇಗಿರಬೇಕು – ೮ನೇ ತರಗತಿ, ಸುಬೋಧನ ಸಾಹಸ – ೯ನೇ ತರಗತಿ ಇತ್ಯಾದಿ. ಎಲ್ಲಾ ವಿದ್ಯಾರ್ಥಿಗಳಿಗೂ ಈ ವಿಶೇಷ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡಲಾಗಿದ್ದು, ಪಾಲ್ಗೊಂಡಿದ್ದ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನೂ ವಿತರಿಸಲಾಗಿದೆ. ರಾಮಕೃಷ್ಣ ಮಹಾಸಂಘದ ವತಿಯಿಂದ ನಡೆಸುತ್ತಿದ್ದ ಈ ಮೌಲ್ಯಶಿಕ್ಷಣ ಕಾರ್ಯಕ್ರಮಕ್ಕೆ ಎಲ್ಲ ಕಡೆಗಳಿಂದಲೂ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ.

Managing Editor : Swami Muktidananda   Editor : Swami Jnanayogananda

Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

VIVEKA PRABHA (KANNADA MONTHLY)
December 2014, Vol.15, No.12, No. of pages : 44

Registered With Registrar of News Papers Of India under 72356/2000.postal Regn.No.KA/SK/MYS/480/2012-14. LICENCED TO POST W.P.P.AT YADAVAGIRI MYSORE 570 020,VIDE LICENCE NO.SK/WPP/MYS/155/2013-15

Printed at mayur graphics,Bangalore